# ಆರಾಧನೆ

ಅಖಿಲ ಭಾರತ ಪತ್ರಿಕೆ

ಅಕ್ಟೋಬರ್ 2024



ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಪ್ರಕೃತಿಯಾ ಗುಹ್ಯ ಅತಿಚಿತಿಯು ತಾನು ಖಚಿತದಲಿ ಎರಕಕಿಳಿಸಿ
ರೂಪಿತದ ಋತದ ದರ್ಪಣದಿ, ನೀನು ನನ ಸುಪ್ತ ಹೃದಯವಾಸಿ,

**– ಪುಟ್ಟು ಕುಲಕರ್ಣಿ**

**(ಪುಟ 57)**

**ಅಖಿಲ ಭಾರತ ಪತ್ರಿಕೆ**
**ಅಕ್ಟೋಬರ್ 2024**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

ಸಂಪುಟ: 34 ಸಂಚಿಕೆ: 10

## ಪರಿವಿಡಿ

### ಆರಾಧನೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ನಿಷ್ಠೆ ಮತ್ತು ಭಕ್ತಿ** 2
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಪ್ರಾರ್ಥನೆ ಮತ್ತು ಪೂಜೆ** 13
ಅನು: ಡಾ॥ ಮಹಾದೇವ ಸಕ್ರಿ

**ಪೂಜಾರಾಧನೆಯ ಆಧ್ಯಾತ್ಮಿಕ ಮೌಲ್ಯ** 35
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 43
ಅನು: ಜಾನ್ವಿ

**ಶ್ರೀ ಅರವಿಂದರ ಭಾಷೆ** 51
ಅನು: ಶ್ರೀ ಪುಟ್ಟು ಕುಲಕರ್ಣಿ

**ಕಾವ್ಯ** 57
ಅನು: ಶ್ರೀ ಪುಟ್ಟು ಕುಲಕರ್ಣಿ

---

**ಸಂಪಾದಕರ ಟಿಪ್ಪಣಿ:** ಮಾನವನ ಹೃದಯದಲ್ಲಿನ ನೈಸರ್ಗಿಕವಾಗಿಯೇ ಇರುವ ಔನ್ನತ್ಯದ ಸಂಚಲನಗಳು ಏನನ್ನು ಪ್ರತಿನಿಧಿಸುತ್ತಿವೆಯೋ, ಅದನ್ನೇ ನಾವು ಹೃತ್ಪೂರ್ವಕವಾಗಿ ಆರಾಧಿಸಬೇಕು. ಸುಸಂಬದ್ಧವಾಗಿರುವ ಪ್ರಜ್ಞಾ ಹಂತದಲ್ಲಿ ಇದನ್ನು ಅನುಷ್ಠಾನಗೊಳಿಸಿದಲ್ಲಿ, ಇದೊಂದು ಅತ್ಯಂತ ಶಕ್ತಿಪೂರ್ಣವಾಗಿರುತ್ತದೆ. ಈ ವಿಷಯದ ಕುರಿತೇ ಈ ಸಂಚಿಕೆಯಲ್ಲಿ ಚಿಂತನೆಗಳನ್ನು ರೂಪಿಸಲಾಗಿದೆ. (ಎಐಎಮ್)

# ನಿಷ್ಠೆ ಮತ್ತು ಭಕ್ತಿ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

## ದಿವ್ಯದ ಕಡೆಗೆ ಭಾವನೆಗಳನ್ನು ತಿರುಗಿಸುವದು

ಹೃದಯವನ್ನು ಶುಷ್ಕಗೊಳಿಸಲು ಈ ಯೋಗವು ಬಯಸುವದಿಲ್ಲ. ಆದರೆ ದಿವ್ಯದ ಕಡೆ ಭಾವನೆಗಳನ್ನು ತಿರುಗಿಸಬೇಕಾಗಿದೆ. ಸಾಮಾನ್ಯ ಭಾವನೆಗಳಿಂದ ದೂರ ಸರಿದು ಕೆಲವು ಚಿಕ್ಕ ಚಿಕ್ಕ ಅವಧಿಗಳಲ್ಲಿ ಹೃದಯವು ನಿಶ್ಚಲವಾಗಿ ಇರಬಹುದು. ಆಗ ಅದು ಮೇಲಿನಿಂದ ಒಳ ಹರಿವನ್ನು ನಿರೀಕ್ಷಿಸುತ್ತಿರುತ್ತದೆ. ಆದರೆ ಅಂತಹ ಸ್ಥಿತಿಗಳು ಶುಷ್ಕ ಸ್ಥಿತಿಗಳಾಗಿರದೆ ಮೌನ ಮತ್ತು ಶಾಂತಿಯ ಅವಸ್ಥೆಗಳಾಗಿರುವವು. ನಿಜಕ್ಕೂ ಪ್ರಜ್ಞೆಯು ಮೇಲೇರುವವರೆಗೂ ಈ ಯೋಗದಲ್ಲಿ ಲಕ್ಷ್ಯವನ್ನು ಏಕಾಗ್ರಗೊಳಿಸುವ ಪ್ರಮುಖ ಕೇಂದ್ರವೇ ಹೃದಯವಾಗಿದೆ.

*

ಯೋಗದಲ್ಲಿ ಭಾವನೆಯು ಒಂದು ಉತ್ತಮವಾದ ಅಂಶ; ಆದರೆ ಭಾವನಾತ್ಮಕ ಅಪೇಕ್ಷೆಯಿಂದ ಪ್ರಕ್ಷುಬ್ಧತೆ ಮತ್ತು ಅಡ್ಡಿಗಳು ಉಂಟಾಗುವ ಸಂಭವವು ಇದೆ.

*

ನಿಮ್ಮ ಭಾವನೆಗಳನ್ನು ದಿವ್ಯದ ಕಡೆ ತಿರುಗಿಸಿ, ಅವುಗಳನ್ನು ಪರಿಶುದ್ಧಗೊಳಿಸುವ ಅಭೀಪ್ಸೆಯನ್ನು ಹೊಂದಿ, ನಂತರ ಅವು ಪಥದಲ್ಲಿ ನೆರವಾಗುವವು ಮತ್ತು ದುಃಖಕ್ಕೆ ಕಾರಣವಾಗುವದಿಲ್ಲ.

*

ಭಾವನೆಗಳನ್ನು ಕೊಲ್ಲಬಾರದು (ಅಥವಾ ಇಲ್ಲವಾಗಿಸಬಾರದು), ಆದರೆ ಅವುಗಳನ್ನು ದಿವ್ಯದ ಕಡೆ ತಿರುಗಿಸುವದೇ ಯೋಗದ ಸಮರ್ಪಕ ಹಾದಿ.

ಆದರೆ ಅದು ಪರಿಶುದ್ಧವಾಗಿರಬೇಕು, ಆಧ್ಯಾತ್ಮಿಕ ಶಾಂತಿ ಮತ್ತು ಸಂತಸಗಳ ಮೇಲೆ ಸ್ಥಾಪಿತವಾಗಿರಬೇಕು. ಪ್ರಮುಖ ಭಾಗಗಳು ಮತ್ತು ಮನಸ್ಸಿನಲ್ಲಿ ಶಾಂತಿ, ಸಮನ್ವಯತೆ ಮತ್ತು ಆನಂದವಾಗಿ ಪರಿವರ್ತನೆಯಾಗುವ ಸಾಮರ್ಥ್ಯವನ್ನು ಹೊಂದಿರಬೇಕು. ಹೃದಯದಲ್ಲಿನ ಒಂದು ತೀವ್ರವಾದ ಚೈತ್ಯ ಭಾವನೆಯು ಇದರೊಂದಿಗೆ ಪರಿಪೂರ್ಣವಾಗಿ ಜೊತೆಗೂಡಬಹುದು.

*

ಅಭೀಪ್ಸೆಯ ಮೂಲಕ ದಿವ್ಯದ ಕಡೆ ಏಕ ಪ್ರಕಾರವಾಗಿ ಉರಿಯುತ್ತಿರುವ ಚೈತ್ಯ ಜ್ವಾಲೆಯನ್ನು ನಿಮ್ಮ ಹೃದಯದಲ್ಲಿ ಜಾಗೃತಗೊಳಿಸಿ, ಭಾವನಾತ್ಮಕ ಸ್ವಭಾವವನ್ನು ಮುಕ್ತಗೊಳಿಸಿ ಪೂರ್ಣಗೊಳಿಸುವ ಒಂದು ವಿಧಾನವಿದು.

*

ಯೋಗದಲ್ಲಿ ಭಾವನೆಯು ಅವಶ್ಯಕ. ಆದರೆ ಅತಿಯಾದ ಸೂಕ್ಷ್ಮ ಭಾವುಕತೆಗಳಿಂದ ನಾವು ದಾಟಿ ಮುಂದೆ ಹೋಗಬೇಕಾಗಿರುವ ಸಣ್ಣ ಸಣ್ಣ ವಿಷಯಗಳಲ್ಲಿ ನಿರಾಶಾ ಭಾವವು ಪ್ರವೇಶಿಸುವದು. ಈ ಯೋಗದ ಮೂಲ ಆಧಾರವೇ ಭಕ್ತಿ ಮತ್ತು ನಾವು ನಮ್ಮ ಭಾವನಾತ್ಮಕ ಸತ್ತೆಯನ್ನೇ ಇಲ್ಲವಾಗಿಸಿದರೆ ಭಕ್ತಿಯಿರಲು ಸಾಧ್ಯವೇ ಇಲ್ಲ. ಆದುದರಿಂದ ಭಾವನಾತ್ಮಕ ಸತ್ತೆಯನ್ನು ಯೋಗದಿಂದ ದೂರ ಸರಿಸುವ ಸಾಧ್ಯತೆಯೇ ಇಲ್ಲ.

*

ಸಾಮಾನ್ಯ ಪ್ರಾಣಿಕ ಭಾವನೆಗಳು ಶಕ್ತಿಯನ್ನು ವ್ಯರ್ಥಗೊಳಿಸುವವು ಮತ್ತು ಶಾಂತಿ ಹಾಗೂ ಏಕಾಗ್ರತೆಯನ್ನು ತೊಂದರೆಗೀಡುಮಾಡುವವು. ಹೀಗಾಗಿ ಅವುಗಳಿಗೆ ಪ್ರೋತ್ಸಾಹನೀಡಬಾರದು. ಸ್ವತಃ ಭಾವನೆಯು ಕೆಟ್ಟ ಅಂಶವಲ್ಲ. ಅದು ಸ್ವಭಾವದ ಒಂದು ಅವಶ್ಯಕ ಭಾಗ. ಸಾಧನೆಗೆ ಅತ್ಯಧಿಕವಾಗಿ ನೆರವಾಗುವ ಅಂಶಗಳಲ್ಲಿ ಒಂದಾಗಿದೆ ಚೈತ್ಯ ಭಾವನೆ. ದಿವ್ಯ ಪ್ರೇಮಕ್ಕಾಗಿ ಕಣ್ಣೀರು ಸುರಿಸುವದು, ಆನಂದದ ಕಣ್ಣೀರು ಮುಂತಾದ ಚೈತ್ಯ ಭಾವನೆಗಳನ್ನು ತಡೆಹಿಡಿಯಬಾರದು; ಸಾಧನೆಗೆ ತೊಂದರೆಯನ್ನು ಉಂಟುಮಾಡುವದು ಪ್ರಾಣಿಕ ಮಿಶ್ರಣ ಮಾತ್ರ.

**ಭಾವಾತಿರೇಕ**

ಒಂದು ವಿಧದ ಮಾನಸಿಕ–ಪ್ರಾಣಿಕವಾದ ಹೆಚ್ಚಿನ ಒತ್ತು ನೀಡಿ ಪ್ರೇಮ, ದುಃಖ, ನೋವು, ನಿರಾಶೆ, ಭಾವನಾತ್ಮಕ ಸಂತೋಷ ... ಮುಂತಾದವುಗಳಲ್ಲಿ, ಅವುಗಳಿಗೆ ಪ್ರಾಧಾನ್ಯತೆ ನೀಡಿ ತೊಡಗಿರುವದೇ ಭಾವಾತಿರೇಕ. ಆಳವಾದ ಭಾವನೆಯಲ್ಲಿ ಒಂದು ಶಾಂತತೆ, ಒಂದು ಸಂಯಮ, ಒಂದು ಪರಿಶುದ್ಧಗೊಳಿಸುವ ಹಿಡಿತ ಮತ್ತು ಆಳತೆ ಇರಬೇಕು. ಯಾರೂ ಭಾವನೆಗಳ ಅಡಿಯಾಳಾಗಿರಬಾರದು. ಆದರೆ ಯಾವಾಗಲೂ ತನಗೆ ತಾನೇ ಒಡೆಯನಾಗಿರಬೇಕು.

*

ಈ ವಿಷಯಗಳಲ್ಲಿ ಪ್ರಜ್ಞೆಯು ತೊಡಗಿದ್ದರೆ (ಸಂತಸ ಮತ್ತು ದುಃಖ) ಮತ್ತು ಭಾವುಕ ಸಂತಸ ಅಥವಾ ನೋವಿನ ಉದ್ರೇಕನದಲ್ಲಿ ಮುಳುಗಿದ್ದರೆ ಅದನ್ನು ಭಾವಾತಿರೇಕವೆಂದು ಕರೆಯಲಾಗುವದು. ಇನ್ನೊಂದು ವಿಧವೂ ಸಹ ಇದೆ. ಅದರಲ್ಲಿ ಭಾವನೆ, ಪ್ರೇಮ ಮತ್ತು ನೋವು... ಮುಂತಾದವುಗಳ ತನ್ನ ಗ್ರಹಿಕೆಯನ್ನು ಮನಸ್ಸು ಆನಂದಿಸುತ್ತದೆ. ಮತ್ತು ಅವುಗಳೊಂದಿಗೆ ಕ್ರೀಡಿಸುತ್ತದೆ. ಆದರೆ ಅದು ಸ್ವಲ್ಪ ಕಡಿಮೆ ತೀವ್ರವಾಗಿರುವದಲ್ಲದೆ ಮೇಲ್ಮೈ ಭಾವಾತಿರೇಕವನ್ನು ಹೊಂದಿರುತ್ತದೆ.

**ಭಕ್ತಿ**

ಭಕ್ತಿ ಒಂದು ಅನುಭವವವಲ್ಲ. ಅದು ಆತ್ಮ ಮತ್ತು ಹೃದಯದ ಒಂದು ಅವಸ್ಥೆಯಾಗಿದೆ. ಚೈತ್ಯ ಸತ್ತೆಯು ಜಾಗೃತವಾಗಿ ಪ್ರಮುಖವಾದಾಗ ಈ ಅವಸ್ಥೆಯು ಆಗಮಿಸುವದು.

*

ಭಕ್ತಿಯ ಬಗ್ಗೆ ನೀನು ಕೇಳುತ್ತಿರುವದು ಸಮರ್ಪಕವಾಗಿದೆ. ಅದರಲ್ಲಿ ಯಾವ ಸಂದೇಹವೂ ಇಲ್ಲ. ನಿನ್ನ ಸ್ವಭಾವದ ಅತ್ಯುನ್ನತ ಅಪೇಕ್ಷೆಯು ಅದೇ ಆಗಿದೆ ಎಂದು ನಾನು ಭಾವಿಸುವೆ. ನಿಜಕ್ಕೂ, ಅದೇ ಸಾಧನೆಯು ಹೊಂದಿರಬಹುದಾದ ಅತ್ಯಂತ ಬಲಿಷ್ಠ ಶಕ್ತಿ. ಮತ್ತು ಇನ್ನೂ ಬರಬೇಕಾಗಿರುವದೆಲ್ಲದಕ್ಕೂ ಅದೇ ಅತ್ಯುತ್ತಮ ಉಪಕರಣ. ಅದಕ್ಕಾಗಿಯೇ ನಾನು ಹೇಳುತ್ತಿರುವುದು ನಿನಗೆ ಆಧ್ಯಾತ್ಮಿಕ ಅನುಭವವು ಹೃದಯದ ಮೂಲಕ ಬರಬೇಕೆಂದು. ನನ್ನ ಬಗ್ಗೆ ಮತ್ತು ಶ್ರೀಮಾತೆಯವರ ಬಗ್ಗೆ ನೀನು ಹೊಂದಿರುವ ನಿಷ್ಠೆ ನೀನು ಹೇಳುತ್ತಿರುವಂತೆ ಸ್ವತಃ ಭಕ್ತಿಯ ಭಾಗವಾಗಿಲ್ಲದಿರಬಹುದು ಆದರೆ ಅಂತರಾಳದಲ್ಲಿ ಭಕ್ತಿಯಿಲ್ಲದಿದ್ದಿದರೆ ಅವು ಸಾಧ್ಯವಾಗುತ್ತಿರಲಿಲ್ಲ. ಬಾಹ್ಯ ಪ್ರಜ್ಞೆಗೆ ಅದನ್ನು ಅದರ ಸಂಪೂರ್ಣ ಶಕ್ತಿಯೊಂದಿಗೆ ಹೊರಗೆ ತರಬೇಕಾಗಿದೆ. ಹೊರಗಿನ ಆಚ್ಛಾದನೆಗಳು ಬಿದ್ದು ಹೋಗುತ್ತಿದ್ದಂತೆ ಅದು ಹೊರಗೆ ಬರಲೇ ಬೇಕಾಗಿದೆ ಎಂದು ನನಗೆ ಅನ್ನಿಸುತ್ತಿದೆ. ಆಂತರ್ಯದಲ್ಲಿ ಏನಿದೆಯೋ ಅದು ಮೇಲು ಭಾಗಕ್ಕೆ ಬರಲೇ ಬೇಕು.

*

ಯೋಗದ ಸಾಂಪ್ರದಾಯಿಕ ಚಿಂತನೆಗಳಲ್ಲಿ ನಿನಗೆ ನಂಬಿಕೆ ಇದೆ. ಒಳ್ಳೆಯದು, ಸಾಂಪ್ರದಾಯಿಕ ಚಿಂತನೆಗಳ ಪ್ರಕಾರವೂ ಸಹ ಅತ್ಯಂತ ಸುಲಭವಾದ ವಿಧಾನವೇ ಭಕ್ತಿ; ಭರವಸೆ, ನಂಬಿಕೆ, ಸ್ವ–ಸಮರ್ಪಣೆ, ನಿರ್ಭರ, ಸಮರ್ಪಣ. ನಿನ್ನ ಹಾದಿಯಲ್ಲಿ

ಇನ್ನೂ ಅಡ್ಡವಾಗಿ ಇರುವದಾದರೂ ಏನು? – ನಿನ್ನಲ್ಲಿ ಹಿಂದೆ ಇದ್ದುದು ಮತ್ತು ಅದರತ್ತ ಬೆಳೆಯುತ್ತಿರುವದು ಏನೆಂದರೆ ಮನಸ್ಸು ಮತ್ತು ಪ್ರಾಣಿಕದಲ್ಲಿಯ ಒಂದು ಹಳೆಯ ಸಂಶಯ. ಹೃದಯ ಹೇಳುತ್ತದೆ, "ನಮಗೆ ಭಕ್ತಿ ಬೇಕು". ಮನಸ್ಸು ಹೇಳುತ್ತದೆ "ಇಲ್ಲ, ಇಲ್ಲ ನಾವು ತರ್ಕ ಮಾಡೋಣ", ಪ್ರಾಣಿಕವು ಹೇಳುತ್ತದೆ ಎಲ್ಲವೂ ಅರ್ಥರಹಿತ, ನಾನು ಶರಣಾಗಲಾರೆ. ಮನಸ್ಸಿನ ಹಿಂದಿನ ಸಂಸ್ಕಾರಗಳಿಂದ ಸೃಷ್ಟಿಯಾಗಿರುವ ಅನುಮಾನವನ್ನು ಮೌನಗೊಳಿಸುವದೇ ನಿನ್ನ ಈಗಿನ ಅವಶ್ಯಕತೆ. ಯಾವುದಾದರೂ ಒಂದನ್ನು ದೃಢಪಡಿಸಿಕೋ ಅಥವಾ ಸಮರಸಗೊಳಿಸು. ದಿವ್ಯದಲ್ಲಿನ ಭಕ್ತಿಯೇ ಮೂಲಶಕ್ತಿ, ಜ್ಞಾನ, ಬಲಿಷ್ಠತೆ ಮತ್ತು ಸಂತಸ. ಹೀಗಾಗಿ ಈ ಯೋಗದಲ್ಲಿ ಸೂಚಿಸಲಾಗಿರುವ ಸಾಮರಸ್ಯವು ಅದೇ ಆಗಿದೆ. ಆದರೆ ಎರಡೂ ಹಾದಿಗಳಲ್ಲಿ, ಯಾವುದನ್ನು ಪೂರೈಸಿದರೂ, ನಂತರ ಶಾಂತಿಯು ಸುಲಭವಾಗಿ ಸಾಧ್ಯವಾಗುವದು.

*

ಭಕ್ತಿ ಮತ್ತು ಪ್ರೇಮದ ಹರಿವು ಎಂತಹುದೆಂದರೆ ಅದು ಹೆಚ್ಚು ಹೆಚ್ಚು ಪುನರಾವರ್ತನೆಯಾಗುತ್ತಿದ್ದರೆ ಅಥವಾ ಜಾಗೃತವಾಗುತ್ತಿದ್ದರೆ ಸಹಜವಾಗಿ ಸತ್ತೆಯ ಎಲ್ಲಾ ಭಾಗಗಳಿಗೆ ಖಂಡಿತವಾಗಿ ಪ್ರವಹಿಸುವದು ಮತ್ತು ಅವುಗಳ ಮೇಲೆ ಪ್ರಭಾವವನ್ನು ಸಹ ಬೀರುವದು.

ಅಹೈತುಕೀ ಭಕ್ತಿಯ ಹಾದಿಯನ್ನು ನೀನು ಅನುಸರಿಸಲು ಬಯಸಿದರೆ, ಅದು ಅಡ್ಡಿಯನ್ನು ಉಂಟುಮಾಡುವದಿಲ್ಲ; ಅದಕ್ಕಿಂತ ಉತ್ತಮವಾದುದು ಇನ್ನೊಂದಿಲ್ಲ. ಏಕೆಂದರೆ ಅದರಲ್ಲಿ ಪ್ರತಿಯೊಂದನ್ನೂ ಉಪಕರಣವನ್ನಾಗಿ ಮಾಡಿಕೊಳ್ಳಬಹುದು. ಉದಾಹರಣೆಗೆ ಕಾವ್ಯ ಮತ್ತು ಸಂಗೀತಗಳು ಮುಂದುವರಿದು ಕಾವ್ಯ ಮತ್ತು ಸಂಗೀತಗಳಾಗಿಯೇ ಉಳಿಯುವದಿಲ್ಲ. ಅಷ್ಟೇ ಅಲ್ಲ ಅವು ಭಕ್ತಿಯ ಒಂದು ಅಭಿವ್ಯಕ್ತಿ ಮಾತ್ರವೂ ಆಗಿರುವದಿಲ್ಲ, ಆದರೆ ಅವುಗಳು ಸ್ವತಃ ಪ್ರೇಮ ಮತ್ತು ಭಕ್ತಿಯ ಅನುಭವವನ್ನು ತರುವ ಉಪಕರಣಗಳಾಗುವವು. ಆಗ ಮನಸ್ಸಿನ ಕೇಂದ್ರೀಕರಣದ ಪ್ರಯತ್ನವಾಗಿರುವದಿಲ್ಲ ಧ್ಯಾನ. ಬದಲಾಗಿ ಪ್ರೇಮ, ಉಪಾಸನೆ ಮತ್ತು ಆರಾಧನೆಯ ಒಂದು ಹರಿವಾಗಿರುವದು. ಸರಳವಾಗಿ ಮತ್ತು ಪ್ರಾಮಾಣಿಕವಾಗಿ ಅಹೈತುಕೀ ಭಕ್ತಿಯ ಹಾದಿಯನ್ನು ಅನುಸರಿಸಿದರೆ ಇತರ ಯಾವುದೇ ಹಾದಿಯ ಸಮಕ್ಕೆ ನಮ್ಮನ್ನು ಕೊಂಡೊಯ್ಯಬಲ್ಲದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/350–55**

## ಭಕ್ತಿ ಮತ್ತು ಪ್ರೇಮ

ಆರಾಧನೆ, ಉಪಾಸನೆ, ತನಗಿಂತಲೂ ಹಿರಿದಾದುದಕ್ಕೆ ಸ್ವ–ಸಮರ್ಪಣೆಯೇ ಭಕ್ತಿಯ ಸ್ವಭಾವ. ಒಗ್ಗೂಡುವಿಕೆ ಮತ್ತು ಸಾಮೀಪ್ಯತೆಗಾಗಿ ಅರಸುವದು ಅಥವಾ ಆ ಭಾವನೆಯೇ ಪ್ರೇಮದ ಸ್ವಭಾವ. ಎರಡರ ಗುಣ ವಿಶೇಷವೇ ಸ್ವ–ಸಮರ್ಪಣೆ. ಯೋಗದಲ್ಲಿ ಎರಡರ ಅವಶ್ಯಕತೆಯೂ ಇದೆ. ಒಂದಕ್ಕೆ ಮತ್ತೊಂದು ಪೂರಕವಾದಾಗ ಪ್ರತಿಯೊಂದೂ ತನ್ನ ಪೂರ್ಣ ಶಕ್ತಿಯನ್ನು ಪಡೆಯುವದು.

ದಿವ್ಯದ ನಾಮಧೇಯವಲ್ಲ ಪ್ರೇಮ, ಆತನ ಚೇತನ ಮತ್ತು ಸತ್ತೆಯ ಒಂದು ಸಾಮರ್ಥ್ಯ. ಭಕ್ತಿ ಮತ್ತು ಪ್ರೇಮಗಳೆರಡೂ ಸಹ ಒಂದೇ ಅಲ್ಲ. ಆದರೆ ಭಕ್ತಿಯ ಅಂಶಗಳಲ್ಲಿ ಒಂದಾಗಿದೆ ಪ್ರೇಮ. ಅನೇಕ ವಿಧದ ಭಕ್ತಿಗಳು ಇವೆ. ಪ್ರೇಮದ ಸ್ವಭಾವವನ್ನು ಹೊಂದಿರುವ ಭಕ್ತಿಯು ಅತ್ಯಂತ ಬಲಿಷ್ಠವಾದುದು ಮತ್ತು ಅತ್ಯುನ್ನತವೆಂಬುದಾಗಿ ಪರಿಗಣಿಸಲಾಗುವದು, ಅತ್ಯಂತ ತೀವ್ರವಾದುದು ಮತ್ತು ಎಲ್ಲದಕ್ಕಿಂತಲೂ ಹೆಚ್ಚು ಭಾವಪರವಶಗೊಳಿಸುವಂತಹುದು. ಜೊತೆಗೆ ಸ್ವತಃ ಪ್ರೇಮದಲ್ಲಿಯೇ, ಸ್ವ–ಸಮರ್ಪಣೆ, ಶರಣಾಗತಿ, ಸಂಪೂರ್ಣ ಆರಾಧನೆ, ಸ್ವಾರ್ಥರಹಿತ ಒಗ್ಗೂಡುವಿಕೆಯ ಕಡೆಗಿನ ಅಭೀಪ್ಸೆಗಳಿಂದ ರೂಪಿತವಾದುದೇ ನೈಜ ಭಕ್ತಿ ಅಂದರೆ ಪ್ರೇಮ. “ವಿಜಯ ಹೊಂದುವ ಪ್ರೇಮ” ಅಥವಾ “ಜಯಶಾಲಿಯಾದ ಪ್ರೇಮ”ವೆಂದರೆ ಅದರ ಆಡಳಿತದ ಹಾದಿಯಲ್ಲಿ ಎದುರುನಿಲ್ಲುವ ಎಲ್ಲವನ್ನೂ ಜಯಿಸುವ ಪ್ರೇಮ. ಅಂದರೆ ಅಜ್ಞಾನ, ಸುಳ್ಳು, ಸ್ವಾರ್ಥ, ಅಹಂಕಾರ, ಇಂದ್ರಿಯ ಲಾಲಸೆ, ಬಾಹ್ಯ ಅಥವಾ ಸ್ವಾರ್ಥಕ್ಕೆ ಸಂಬಂಧಿಸಿದ ಅಪೇಕ್ಷೆಗಳು, ಮತ್ತಿತರ ಎಲ್ಲವನ್ನೂ ಜಯಿಸಿ ತಾನೊಬ್ಬನೇ ಆಳ್ವಿಕೆಯನ್ನು ಮಾಡುವ ಪ್ರೇಮ ಇದು. ದಿವ್ಯ ಪ್ರಜ್ಞೆಯ ಉಳಿದ ಎಲ್ಲಾ ಅನುಗ್ರಹಗಳನ್ನೂ ಕೆಳಗೆ ತರುವದು. ಪ್ರೇಮವು ಜಯಿಸುವಂತೆ ಮಾಡಲು ಸಾಧಕನಿಗೆ ಸಾಧ್ಯವಾಗುವದು ಸ್ವ–ಸಮರ್ಪಣೆ, ನಿಸ್ವಾರ್ಥತೆ ಮತ್ತು ಪ್ರೇಮದ ಶಕ್ತಿಗಳಿಂದ ಮಾತ್ರ.

*

ಅದನ್ನು (ಪ್ರೇಮ ಭಕ್ತಿ) ನಾನು ಪ್ರೇಮದ ಆಧಾರವನ್ನು ಹೊಂದಿರುವ ಭಕ್ತಿ ಎಂದೇ ಪರಿಗಣಿಸುವೆ. ಆರಾಧನೆ, ಆಧೀನವಾಗಿರುವದು. ವಿಧೇಯತೆ ... ಮುಂತಾದವುಗಳನ್ನು ಹೊಂದಿರುವ ಭಕ್ತಿಯು ಸಹ ಇರುವದು. ಆದರೆ ಪ್ರೇಮವಿರದಿರಬಹುದು.

*

ನೈಜ ಪ್ರೇಮ ಮತ್ತು ಭಕ್ತಿಯ ಹೆಗ್ಗುರುತುಗಳು ಯಾವುವೆಂದರೆ, ನಿಸ್ವಾರ್ಥತೆ, ಸ್ವ–ಸಮರ್ಪಣೆ, ಸಂಪೂರ್ಣ ಶ್ರದ್ಧೆ ಮತ್ತು ಭರವಸೆ, ಹಕ್ಕೊತ್ತಾಯ ಮತ್ತು ಅಪೇಕ್ಷೆಗಳಿಲ್ಲದಿರುವದು. ದಿವ್ಯ ಸಂಕಲ್ಪಕ್ಕೆ ಶರಣಾಗತಿ, ದಿವ್ಯತ್ವದ ಮೇಲೆ ಸಂಪೂರ್ಣವಾಗಿ ಕೇಂದ್ರೀಕೃತವಾದ ಪ್ರೇಮಗಳು.

### ಭಾವೋದ್ರಿಕ್ತ ಭಕ್ತಿ

ನಾನು ಭಕ್ತಿ ಅಥವಾ ಭಾವಪೂರಿತ ಭಕ್ತಿಯ ವಿರೋಧಿ ಎಂದು ಭಾವಿಸುವದು ತಪ್ಪು. ಇವೆರಡೂ ಒಂದನ್ನೇ ಪ್ರತಿನಿಧಿಸುವವು. ಏಕೆಂದರೆ ಭಾವಪೂರಿತವಾಗಿರದ ಭಕ್ತಿಯೇ ಇಲ್ಲ, ನನ್ನ ಯೋಗವನ್ನು ಉದ್ದೇಶಿಸಿದ ಲೇಖನಗಳಲ್ಲಿ ನಾನು ಭಕ್ತಿಗೆ (ನಿಜಕ್ಕೂ) ಅತ್ಯುನ್ನತ ಸ್ಥಾನವನ್ನು ನೀಡಿರುವೆ. ಅಪರಿಶುದ್ಧ ಭಾವೋದ್ರೇಕದ ವಿರುದ್ಧ ನಾನು ಕೆಲವೊಮ್ಮೆ ಮಾತನಾಡಿರುವೆ. ಏಕೆಂದರೆ ನನ್ನ ಅನುಭವದ ಪ್ರಕಾರ, ಅದರಲ್ಲಿ ಸಮತೋಲನವಿರುವದಿಲ್ಲ, ಪ್ರಕ್ಷುಬ್ಧಗೊಂಡಿರುವದು ಮತ್ತು ಅಸಾಮರಸ್ಯಪೂರಿತ ಅಭಿವ್ಯಕ್ತಿಯನ್ನು ಹೊಂದಿರುವದು ಅಥವಾ ವಿರುದ್ಧ ಪರಿಣಾಮಗಳನ್ನು ಸಹ ಉಂಟುಮಾಡಬಹುದು ಮತ್ತು ಅತಿಯಾದಾಗ ನರ ದೌರ್ಬಲ್ಯವೂ ಸಹ ಕಾಣಿಸಿ–ಕೊಳ್ಳಬಹುದು. ನನ್ನ ಈ ಅಭಿಪ್ರಾಯದಿಂದ ತಪ್ಪು ಕಲ್ಪನೆಗಳು ಉಂಟಾಗಿರಬಹುದು. ಪರಿಶುದ್ಧ ಮನಸ್ಸು ಮತ್ತು ಸಂಕಲ್ಪದ ಬಗ್ಗೆ ಒತ್ತು ನೀಡಿರುವೆನೆಂದರೆ ಚಿಂತನೆ ಮತ್ತು ಸಂಕಲ್ಪವನ್ನು ಹೀಗೆಳೆಯುತ್ತಿರುವೆನೆಂದಲ್ಲ. ಇದೇ ರೀತಿ ಪರಿಶುದ್ಧಗೊಳಿಸುವದಕ್ಕೆ ಒತ್ತು ನೀಡುತ್ತಿರುವದರ ಅರ್ಥ ನಾನು ನೈಜ ಭಾವನೆ ಮತ್ತು ಭಾವೋದ್ರೇಕಗಳನ್ನು ನಾನು ಹೀಗೆಳೆಯುತ್ತಿರುವೆನೆಂದು ಅಲ್ಲ. ಅದಕ್ಕೆ ಬದಲಾಗಿ, ಭಾವನೆಗಳು ಹೆಚ್ಚು ಆಳವಾಗುತ್ತಿದ್ದಂತೆ ಭಕ್ತಿಯೂ ಸಹ ತೀವ್ರವಾಗುವದು, ಅರಿವಿನ ಮತ್ತು ಪರಿವರ್ತನೆಯ ಶಕ್ತಿಗಳೂ ಸಹ ಅಧಿಕವಾಗುವವು. ಅನೇಕ ಸಲ, ಭಾವೋದ್ರೇಕದ ತೀವ್ರತೆಯ ಮೂಲಕವೇ ಚೈತ್ಯ ಸತ್ತೆಯು ಜಾಗ್ರತವಾಗುವದು ಮತ್ತು ದಿವ್ಯತ್ವದ ಕಡೆಗೆ ಆಂತರಿಕ ದ್ವಾರಗಳು ತೆರೆದುಕೊಳ್ಳುವದು.

*

ನಿಮ್ಮ ಪ್ರಾಣಿಕವು ಇನ್ನೂ ಹತೋಟಿಯಲ್ಲಿ ಇಲ್ಲ ಭಿನ್ನವಾಗಿ ವರ್ತಿಸುವದು ಎಂಬ ಕಾರಣಕ್ಕೆ ಯಾರಾದರೂ ಭಾವನಾತ್ಮಕ ಸತ್ತೆಯ ಭಕ್ತಿಯನ್ನು ಪ್ರೋತ್ಸಾಹಿಸದಿದ್ದರೆ, ಭಕ್ತಿಯು ವೃದ್ಧಿಸುವದಾದರೂ ಹೇಗೆ ಮತ್ತು ನಿಮ್ಮ ಪ್ರಾಣಿಕವು ಬದಲಾಗುವದಾದರೂ ಹೇಗೆ? ಸ್ವಭಾವದಲ್ಲಿ ಅಂತಿಮ ಸ್ಪಷ್ಟತೆ ಮತ್ತು ಸಾಮರಸ್ಯಗಳು ಉಂಟಾಗುವವರೆಗೂ

ಸತ್ತೆಯಲ್ಲಿ ಅಸಾಂಗತ್ಯಗಳು ಇದ್ದೇ ಇರುವವು. ಆದರೆ ಉತ್ತಮ ಚಲನೆಗಳ ಕ್ರೀಡೆಯನ್ನು ಈ ಕಾರಣಕ್ಕಾಗಿ ತಡೆಹಿಡಿಯಲೇಬಾರದು – ಅದಕ್ಕೆ ಬದಲಾಗಿ ಇವುಗಳನ್ನು ಅಭಿವೃದ್ಧಿಪಡಿಸಿ ಹೆಚ್ಚಾಗುವಂತೆ ಮಾಡಬೇಕು.

*

ಚೈತ್ಯ(ಭಕ್ತಿ)ಗಿಂತಲೂ ಭಾವನಾತ್ಮಕ(ಭಕ್ತಿ)ಯು ಬಾಹ್ಯದಲ್ಲಿ ಹೆಚ್ಚಾಗಿ ಕಾಣಿಸಿ–ಕೊಳ್ಳುವದು. ಅದು ಬಾಹ್ಯ ಅಭಿವ್ಯಕ್ತತೆಯ ಕಡೆಗೆ ವಾಲುವದು. ಚೈತ್ಯವು ಆಂತರಿಕ. ಇಡೀ ಆಂತರಿಕ ಮತ್ತು ಬಾಹ್ಯ ಜೀವನಕ್ಕೆ ದಿಕ್ಸೂಚಿಯಾಗಿರುವದು. ಭಾವನಾತ್ಮಕವು ತೀವ್ರವಾಗಿ ಇರಬಹುದು; ಆದರೆ ಅದರ ತಳಹದಿಯು ದೃಢವಾಗಿಲ್ಲ ಮತ್ತು ಇಡೀ ಜೀವನದ ದಿಕ್ಕನ್ನು ಬದಲಾಯಿಸಬಲ್ಲ ಸಾಮರ್ಥ್ಯವನ್ನು ಹೊಂದಿಲ್ಲ.

**ಭಾವನಾತ್ಮಕ ಭಕ್ತಿ**

ಸಾಮಾನ್ಯವಾಗಿ ಪ್ರಾಣಿಕ ಭಕ್ತಿಯು ಆಸೆಗಳು ಮತ್ತು ಬೇಡಿಕೆಗಳಿಂದ ತುಂಬಿರುವದು. ಅದು ತಾನು ಕೊಡುವದಕ್ಕೆ ಪ್ರತಿಯಾಗಿ ಮತ್ತೇನಾದರೂ ಸಿಗಬೇಕು ಎಂದು ನಿರೀಕ್ಷಿಸುವದು; ತನ್ನ ಸ್ವಂತ ಅಪೇಕ್ಷೆಗಳ ಸಲುವಾಗಿ ದಿವ್ಯತ್ವವನ್ನು ಹೆಚ್ಚು ಪ್ರೀತಿಸುವದು ದಿವ್ಯತ್ವದ ಸಲುವಾಗಿ ಅಲ್ಲ. ಅದರ ಅಪೇಕ್ಷೆಯು ಫಲಿಸದಿದ್ದರೆ ಅದು ವಿರೋಧಿಸಿ ಬೇರೊಂದು ಕಡೆ ತಿರುಗುವ ಸಾಧ್ಯತೆಯೂ ಇದೆ. ಸಾಮಾನ್ಯವಾಗಿ ಮಾತ್ಸರ್ಯ, ತಪ್ಪು ಗ್ರಹಿಕೆ, ವಂಚಕತೆ, ಕೋಪ ಮುಂತಾದವು ಇದನ್ನು ಅನುಸರಿಸುವವು. ಸಾಮಾನ್ಯ ಮಾನವ ಸಹಜ ಪ್ರೇಮದ ಅಪರಿಪೂರ್ಣತೆಗಳು ಇವುಗಳನ್ನು ತಾನು ಪೂಜಿಸುವ ಮೂರ್ತಿಯಿಂದ ದೂರ ಸರಿಸಬಲ್ಲವು. ಇದರ ಬದಲಾಗಿ, ಚೈತ್ಯದ ಆಡಳಿತದಲ್ಲಿರುವ ಭಾವನಾತ್ಮಕ ಭಕ್ತಿಯು ಕಾಣಿಸಿಕೊಂಡಿದ್ದರೆ, ಈ ದೋಷಗಳು ಅಗೋಚರವಾಗುವವು ಮತ್ತು ಪ್ರಾಣಿಕವು ಭಕ್ತಿ ಮತ್ತು ಪ್ರೇಮಗಳಿಗೆ ಕಡು ಪ್ರೀತಿ ಮತ್ತು ಉತ್ಸಾಹವನ್ನು ನೀಡುವದು. ಇದರಿಂದ ಅದು ಜೀವನ ಮತ್ತು ಕ್ರಿಯೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಲು ಸಾಧ್ಯವಾಗುವದು. ಪ್ರಾಣಿಕವು ಜೀವನದಲ್ಲಿನ ಸ್ವ–ಪ್ರಕಟಣೆಗೆ ಯಾವಾಗಲೂ ಆತ್ಮದ ಉಪಕರಣವಾಗಿರಬೇಕು ಮತ್ತು ತನ್ನಂತೆ ತಾನೇ (ಅಹಂಕಾರ, ಆಸೆ) ಕ್ರಿಯಾಶೀಲವಾಗಬಾರದು ಅಥವಾ ತನ್ನ ಸ್ವಂತ ಪ್ರೇರಣೆಗಳಿಗೆ ಅನುಸಾರವಾಗಿ ಕೆಲಸ ಮಾಡಬಾರದು.

*

ಪ್ರಾಣಿಕ ಭಕ್ತಿಯು ಅಹಂಕಾರಭರಿತ, ಸಾಮಾನ್ಯವಾಗಿ ದಿವ್ಯದಿಂದ ಅನೇಕ ಅಪೇಕ್ಷೆಗಳನ್ನು ಪೂರೈಸಿಕೊಳ್ಳಲು ಬಯಸುತ್ತಲೇ ಇರುವದು. ಅಪೇಕ್ಷೆಗಳು ನೆರವೇರದಿದ್ದರೆ ವಿರೋಧಿಸುವದು. ಚಿಂತನೆ ಮತ್ತು ಕಲ್ಪನೆಗಳಲ್ಲಿ ಮಾತ್ರವೇ ಮನಸ್ಸು ಆರಾಧಿಸುತ್ತಿದ್ದು ಹೃದಯದಲ್ಲಿ ಪ್ರೇಮವಿರುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/356–58**

**ವಿರಹ ಅಥವಾ ಅಗಲಿಕೆಯ ನೋವು**

ಚೇತನವನ್ನು ಅರಸುತ್ತಿರುವ ಪ್ರಾಣಿಕ ಸ್ತರದ ಮೇಲಿನ ಪರಿವರ್ತನೆಯ ಅನುಭವವಾಗಿದೆ ವಿರಹ – ಬಹಳ ಹಿಂದಿನ ಹಂತದಲ್ಲೇ ಇದು ಸಾಧ್ಯವಾಗದಿರಲು ಯಾವ ಕಾರಣವೂ ಇಲ್ಲ. ಯಾವುದೇ ಆಯಾಸವಿಲ್ಲದೆ ಉಂಟಾಗುವ ಅರಿವುಗಳು ಇದಾಗಿದೆ. ಹೆಚ್ಚು ಅಭಿವೃದ್ಧಿ ಹೊಂದಿದ ಸಾಧನೆಗಳಿಗೆ ಸೇರಿದ ಪರಶುದ್ಧ ಆನಂದದಲ್ಲಿನ ಅರಿವುಗಳು.

*

ಚೈತ್ಯಕ್ಕೆ ಸಂಬಂಧಿತವಾದುದಾಗಿದೆ ಪರಿಶುದ್ಧ ವಿರಹ ಭಾವನೆ – ಆದರೆ ರಾಜಸಿಕ ಅಥವಾ ತಾಮಸಿಕ ಚಲನೆಗಳು ಒಳಗೆ ಬಂದರೆ (ಉದಾ: ಖಿನ್ನತೆ, ದೋಷಾರೋಪಣೆ, ವಿರೋಧ ಮುಂತಾದವು) ಆಗ ಅದು ತಾಮಸಿಕ ಅಥವಾ ರಾಜಸಿಕವಾಗುವದು.

*

ಪ್ರಾಣಿಕಕ್ಕೆ ಸೇರಿದುದು ಅಗಲಿಕೆಯ ನೋವುಗಳು. ಚೈತ್ಯಕ್ಕೆ ಅಲ್ಲ. ನೋವುಗಳಿಲ್ಲದ ಚೈತ್ಯವು ಅದನ್ನು ವ್ಯಕ್ತಪಡಿಸಬೇಕಾಗಿಲ್ಲ. ಶ್ರದ್ಧೆ, ಸಂತಸ ಮತ್ತು ಭರವಸೆಗಳೊಂದಿಗೆ ಚೈತ್ಯವು ಯಾವಾಗಲೂ ದೈವತ್ವದ ಕಡೆಗೆ ತಿರುಗಿರುವದು. ಅದು ಹೊಂದಿರುವ ಅಭೀಪ್ಸೆಯು ಭರವಸೆ ಮತ್ತು ವಿಶ್ವಾಸಗಳಿಂದ ತುಂಬಿದೆ.

*

ನಿರಂತರವಾಗಿ ವ್ಯಾಕುಲತೆಯು ಇಲ್ಲದಿರುವಾಗ ಅದು ದಿವ್ಯದತ್ತಲಿನ ಅಭೀಪ್ಸೆ ಅಥವಾ ಸಂಕಲ್ಪವಲ್ಲವೆಂಬುದರ ಸಂಕೇತವೆಂದು ಭಾವಿಸುವದು ತಪ್ಪು. ನಿರಂತರವಾದ ವ್ಯಾಕುಲತೆ ಅಥವಾ ಆಳುವದು ಅಥವಾ ಹಾಹಾಕಾರವು (ಆಳುವದು ಚೈತ್ಯಕ್ಕಿಂತಲೂ

ಹೆಚ್ಚು ಪ್ರಾಣಿಕ) ನಿಯಮವಾಗಿರುವದು ಭಕ್ತಿ ಯೋಗದ ಕೆಲವು ರೂಪಗಳಲ್ಲಿ ಮಾತ್ರ. ಇಲ್ಲಿ ಚೈತ್ಯದ ಹಾತೊರೆಯುವಿಕೆಯು ಕೆಲವೊಮ್ಮೆ ಬರಬಹುದು ಅಥವಾ ತೀವ್ರವಾದ ಅಲೆಗಳಲ್ಲಿ ಅನೇಕ ಸಲವೂ ಬರಬಹುದು. ತಳಹದಿಯಾಗಿ ಬರುವದು ಸತ್ತೆಯ ಮೌನ ಮತ್ತು ಆ ಮೌನದಲ್ಲಿ ಉಂಟಾಗುವದು ಹೆಚ್ಚು ಹೆಚ್ಚು ನಿಶ್ಚಲವಾದ ಸತ್ಯದ ಗ್ರಹಿಕೆ, ದಿವ್ಯವನ್ನು ಅರಸುವಿಕೆ ಮತ್ತು ದಿವ್ಯದ ಅವಶ್ಯಕತೆ ಇದರಿಂದ ಎಲ್ಲವೂ ದಿವ್ಯದತ್ತ ಹೆಚ್ಚು ಹೆಚ್ಚಾಗಿ ತಿರುಗತೊಡಗುವವು. ಅನುಭವ ಮತ್ತು ವೃದ್ಧಿಸುತ್ತಿರುವ ಅರಿವು ಇದರೊಳಗೆ ಅಧಿಕಾಧಿಕವಾಗಿ ಬರಬೇಕು. ನಿನ್ನಲ್ಲಿ ವಿಕಸನವು ವೃದ್ಧಿಸುತ್ತಿರುವದರಿಂದ, ಶ್ರೀಮಾತೆಯ ಸನ್ನಿಧಿಯ ಆಭಾಸವು (ಆಚೆಗಿನ ರೂಪ) ನಿನಗೆ ದೊರಕುತ್ತಿದೆ – ಆಂತರಿಕ ಅರಿವು ವೃದ್ಧಿಸುತ್ತಿದ್ದಂತೆ ಭೌತಿಕ ಸನ್ನಿಧಿಯ ಮೌಲ್ಯವು ಪೂರ್ಣವಾಗಿ ತಿಳಿಯುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/359–60**

## ದಿವ್ಯದ ಕಡೆ ವೈರತ್ವ

ವೈರತ್ವದ ಸಿದ್ಧಾಂತದ ಬಗ್ಗೆ ಬರೆಯಲು ನನಗಿನ್ನೂ ಸಮಯ ದೊರೆತಿಲ್ಲ. ಇನ್ನೊಂದೆರೆಡು ಮೂರು ದಿನಗಳಲ್ಲಿ ನಾನು ಅದನ್ನು ಹೆಚ್ಚು ಪೂರ್ಣಗೊಳಿಸುವೆ. ಆದರೆ ನಾನು ಒಂದು ವಿಷಯವನ್ನು ಮಾತ್ರ ಒಮ್ಮೆಲೆ ತಿಳಿಸಬಯಸುವೆ ಅದೇನೆಂದರೆ ದಿವ್ಯವನ್ನು ದ್ವೇಷಿಸುವದರ ಮೂಲಕ ದಿವ್ಯವನ್ನು ತಲುಪಬಹುದು ಎಂಬ ಚಿಂತನೆ ಸತ್ಯವೆನಿಸುವದಿಲ್ಲ. ಅದರಲ್ಲೂ ಭಕ್ತಿಯ ಮೂಲಕ್ಕಿಂತಲೂ ಶೀಘ್ರವಾಗಿ ಎಂಬುದಂತೂ ಸಂಪೂರ್ಣವಾಗಿ ತಪ್ಪು ಕಲ್ಪನೆ. ವಸ್ತುಗಳ ಆಧ್ಯಾತ್ಮಿಕ ಸತ್ಯಕ್ಕೆ, ತರ್ಕಕ್ಕೆ, ಸ್ವಭಾವಕ್ಕೆ ಮತ್ತು ಅನುಭವಕ್ಕೆ ಈ ಕಲ್ಪನೆಯು ತದ್ವಿರುದ್ಧವಾದುದಾಗಿದೆ.

X ನ ಪರವಹಿಸಿ ನೀನು ಮಾತನಾಡುತ್ತಿರುವದನ್ನು ನೋಡಿದರೆ, ಅವು ಸ್ವತಃ X ನ ಚಿಂತನೆಗಳು ಇರುವಂತಿದೆ; ಅವು ಬಹಳ ವಿಚಿತ್ರ ಕಲ್ಪನೆಗಳಾಗಿವೆ. ಅವು ಸರಿಯಾದುವಾದರೆ, ನಾವು ಕೆಳಕಂಡ ತೀರ್ಮಾನಗಳನ್ನು ಅನುಮೋದಿಸಬೇಕಾಗಿತ್ತು.

1) ಅರಿವನ್ನು ಪಡೆಯಲು ಸತ್ವವು ಅತ್ಯುತ್ತಮವಾದ ಹಾದಿಯಲ್ಲ. ಆಧ್ಯಾತ್ಮಿಕಗೊಳ್ಳಲು ರಾಜಸಿಕವೇ ಅತ್ಯುತ್ತಮವಾದ ಪಥ. ದಿವ್ಯದ ನೈಜ ಸಾಧಕನು ಯಾರೆಂದರೆ ಕ್ರೂರ ಅಹಂಕಾರ ಮತ್ತು ಉದ್ವೇಗಪೂರಿತ ಭಾವೋದ್ರೇಕಗಳನ್ನು ಹೊಂದಿರುವ ರಾಜಸಿಕ ಮಾನವನು.

2) ಅಸುರನೇ ಅತ್ಯುತ್ತಮ ಭಕ್ತನು. ಅರಿವನ್ನು ಪಡೆಯಲು ದೈವೀ ಸ್ವಭಾವವನ್ನು ಹೊಂದಿರಲೇಬೇಕು ಮತ್ತು ಅಸುರ ಸ್ವಭಾವವು ಅದಕ್ಕೆ ವಿರುದ್ಧವಾದುದು ಎನ್ನುವ ಗೀತೆಯ ಅಭಿಪ್ರಾಯವು ತಪ್ಪು. ನಿಜಕ್ಕೂ ಅದು ತದ್ವಿರುದ್ಧವಾದ ಹಾದಿ.

3) ರಾವಣ, ಹಿರಣ್ಯಕಶಿವು ಮತ್ತು ಶಿಶುಪಾಲರು ದಿವ್ಯದ ಅತ್ಯುನ್ನತ ಭಕ್ತರು. ಏಕೆಂದರೆ ಅವರು ದಿವ್ಯವನ್ನು ವಿರೋಧಿಸಬಲ್ಲವರಾಗಿದ್ದರು. ಆದುದರಿಂದ ಅವರು ಕೆಲವೇ ಕೆಲವು ಜನ್ಮಗಳಲ್ಲಿ ಮುಕ್ತರಾದರು. ಅವರಿಗೆ ಹೋಲಿಸಿದರೆ ಶ್ರೇಷ್ಠ ಋಷಿಗಳು ಮತ್ತು ಭಕ್ತರು ಅತ್ಯಂತ ಕಡಿಮೆ ಆಧ್ಯಾತ್ಮಿಕತೆಯನ್ನು ಹೊಂದಿದ್ದರು. ಪುರಾಣದಲ್ಲಿಯ ರಾವಣನ ಅಸಂಗತೋಕ್ತಿಗಳನ್ನು ನಾನು ಬಲ್ಲೆ. ಆದರೆ ಬದಲಾಗಿ ನಾನು ಗುರುತಿಸಿದ ಅಂಶಗಳಿವು: ರಾಮ ಅಥವಾ ಕೃಷ್ಣ ಅಥವಾ ವಿಷ್ಣುವಿನ ಶಿಷ್ಯರಾಗಿ ಅಥವಾ ಭಕ್ತರಾಗಿ ಈ ಅಸುರರು ಮತ್ತು ರಾಕ್ಷಸರು ತೋರ್ಪಡಿಸಿಕೊಳ್ಳಲಿಲ್ಲ. ಅವರ ಶಿಷ್ಯತ್ವದ ಸ್ಥಾನವನ್ನು ಉಪಯೋಗಿಸಿ ಪ್ರತಿಭಟನೆಯ ಮೂಲಕ ಮೋಕ್ಷವನ್ನು ಪಡೆಯಲಿಲ್ಲ – ಅವರು ಶತ್ರುತ್ವದ ಮೂಲಕ ಅದನ್ನು ಪಡೆದರು. ಪರಮೋತ್ತಮ ದೈವವು ಅವರನ್ನು ಕೊಂದು ತನ್ನೊಳಗಡೆಗೆ ಹೀರಿಕೊಂಡಿತು.

4) ಗುರುವಿನ ಬಳಿ ವಿಧೇಯತೆಯನ್ನು ತೋರುವದು, ದಿವ್ಯವನ್ನು ಆರಾಧಿಸುವದು ಇವೆಲ್ಲ ಉಪಯೋಗರಹಿತ ಕಾರ್ಯಗಳು ಅಥವಾ ಕುರಿಗಳು ಮಾಡುವಂತಹವು. ಮಾನವರಲ್ಲ. ಗುರು ಅಥವಾ ದಿವ್ಯವನ್ನು ಉದ್ದೇಶಿಸಿ ರೋಷಾವೇಶದಿಂದ ವರ್ತಿಸುವದು, ಆತನನ್ನು ನಿಂದಿಸುವದು, ತಿರಸ್ಕಾರವನ್ನು ವ್ಯಕ್ತಪಡಿಸುವದು, ಆತನ ಪ್ರಾಮಾಣಿಕತೆಯನ್ನು ಪ್ರಶ್ನಿಸುವದು, ಆತನ ಕೃತಿಗಳು ದೋಷಪೂರಿತ, ಉಪಯೋಗರಹಿತ ಅಥವಾ ಒಂದು ತಂತ್ರವೆಂದು ಟೀಕಿಸುವದು. ಪ್ರತಿಯೊಂದು ಹಂತದಲ್ಲೂ ತಾನೇ ಸರಿ ಎಂಬ ಘೋಷಣೆ, ಆತನ ತೀರ್ಮಾನವು ತಪ್ಪಾದುದು, ಪೂರ್ವಾಗ್ರಹಪೂರಿತ, ಅಸಂಬದ್ಧ, ಸಮರ್ಪಕವಾಗಿಲ್ಲ, ದುಷ್ಟ ಶಕ್ತಿಗಳ ನೆರವು ... ಎಂದು ಹೇಳುವದು ಮುಂತಾದವೇ ಗುರು ಮತ್ತು ಶಿಷ್ಯನ ನಡುವಿನ ನೈಜ ಬಾಂಧವ್ಯ ಮತ್ತು ಅತ್ಯುತ್ತಮ ಭಕ್ತಿ. ಗುರುವಿಗೆ ತೋರಬೇಕಾದ ಅತ್ಯುನ್ನತ ಗೌರವವೆಂದರೆ ಅವಿಧೇಯತೆ. ದಿವ್ಯಕ್ಕೆ ನೀಡಬಹುದಾದ ಅತ್ಯುತ್ತಮ ಆರಾಧನೆಯೆಂದರೆ ಕೋಪ ಮತ್ತು ಪ್ರತಿಭಟನೆ.

5) ಯಾರು ತನ್ನ ದೋಷಗಳನ್ನು ಶೋಧಿಸಿಕೊಳ್ಳಲು, ಬೆಳಕು, ಬಲ ಮತ್ತು ಶುದ್ಧತೆಯನ್ನು ವೃದ್ಧಿಸಲು ಮಹಾಕಾಳಿಯ ಹೊಡೆತಗಳು ಒಂದು ಹಾದಿಯೆಂದು ಭಾವಿಸಿ ಸ್ವೀಕರಿಸುವನೋ ಆತನು ಒಂದು ಕುರಿ ಮತ್ತು ಶಿಷ್ಯನಾಗಲು ಅನರ್ಹನು

– (ಯಾರು) ಅತ್ಯಂತ ಕಡಿಮೆ ಒತ್ತಡಕ್ಕೂ ಪ್ರತಿರೋಧದ ಪ್ರತಿಕ್ರಿಯೆ ನೀಡುವನೋ ಮತ್ತು ತನ್ನ ತಪ್ಪುಗಳಲ್ಲೇ ಮುಂದುವರೆಯುವನೋ ಆತನು ಬಲಶಾಲಿ, ಬಲಿಷ್ಠ ಆಧಾರ ಮತ್ತು ಪರಿಪೂರ್ಣತೆಯ ಹಾದಿಯಲ್ಲಿ ಉತ್ತಮ ಶಿಷ್ಯನಾಗುವನು.

ನಾನು ಅಸಂಖ್ಯಾತ ಪರಿಣಾಮಗಳನ್ನು ನೀಡಲು ಸಾಧ್ಯ. ಆದರೆ ನನಗೆ ಸಮಯವಿಲ್ಲ. ನೀನು ನಿಜವಾಗಲೂ ಇದನ್ನೆಲ್ಲಾ ನಂಬುವೆಯಾ? ಅವುಗಳು X ನ ಸಿದ್ಧಾಂತ ಅಥವಾ ಪರಿಪೂರ್ಣತೆಯ ಕಡೆಗಿನ ಹಾದಿ, ಪ್ರತಿಭಟನೆಯ ಸಿದ್ಧಾಂತವಾದಾಗಿನ ಸಹಜ ಪರಿಣಾಮಗಳು.

ಹಿಂದೆ ಹೇಳಿದುದನ್ನು ಅಂಗೀಕರಿಸುವದಾದರೆ, ನೀನು ಅದರ ತರ್ಕಬದ್ಧ ಪರಿಣಾಮಗಳನ್ನೂ ಒಪ್ಪಿಕೊಳ್ಳಬೇಕಾಗುವದು. ಅದೇ X ಮಾಡಿದ್ದು – ಆತನು ತನ್ನ ತಪ್ಪುಗಳನ್ನು ಸತ್ಯವೆಂದು ಕರೆದ ಅಷ್ಟೇ. ಮತ್ತು ನಾನು ಸೂಚಿಸಿದ ಹಾದಿಯು ಸತ್ಯಾಂಶಕ್ಕೆ ವಿರುದ್ಧವಾದುದು ಎಂದು ತಿಳಿದನು. ಇದನ್ನು "ನಾನು" "ತನ್ನ ಉನ್ನತ ಆತ್ಮವನ್ನು ಮರೆತ ಗುರುವಾಗಿದ್ದೆ" ಎಂಬ ಸತ್ಯದಿಂದ ಮಾತ್ರ ವಿವರಿಸಲು ಸಾಧ್ಯ. ಇದರ ಪರಿಣಾಮವಾಗಿ ಆತನು ಇಲ್ಲಿಂದ ಹೊರಗೆ ಹೋದನು, ಅದು ನಮ್ಮ ಸಂಕಲ್ಪವಾಗಿರಲಿಲ್ಲ. ಆದರೆ ಆತನದೇ ಆಯ್ಕೆಯಾಗಿತ್ತು. ಮತ್ತು ಅಂತಹ ಪರಿಸ್ಥಿತಿಯಲ್ಲಿ ಆತನನ್ನು ಇಲ್ಲಿಗೆ ಬರಮಾಡಿಕೊಳ್ಳುವದು ಕಾರ್ಯತಃ ಅಸಾಧ್ಯವಾಗುವಂತೆ ಮಾಡಿರುವನು. ಆತನು ಬದಲಾಗದಿದ್ದರೆ ಇಲ್ಲಿಗೆ ಬರಲು ಸಾಧ್ಯವಿಲ್ಲ. ಆದರೆ ನನ್ನ ಹಿಂದಿನ ಅನುಭವಗಳ ಪ್ರಕಾರ ನನ್ನ ಚಿಂತನೆಗಳು ಅದು ಆಗದು ಎಂದು ಹೇಳುವವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/360–61 – ಶ್ರೀ ಅರವಿಂದರು**

ನಿನಗೆ ಶ್ರದ್ಧೆ ಮತ್ತು ಭರವಸೆಗಳು ಇದ್ದರೆ, ಮಾನವ ರೂಪದ ಗುರುವನ್ನಲ್ಲ ನೀನು ಆರಾಧಿಸುವದು, ಆದರೆ ಆತನ ಮೂಲಕ ಅಭಿವ್ಯಕ್ತವಾಗುವ ಪರಮೋತ್ತಮ ದೈವವನ್ನು.

ತೊಂದರೆಗೆ ಒಳಗಾಗಬೇಡ, ನಿನಗೆ ನೆರವಾಗುವ ಯಾವುದೇ ಹಾದಿಯ ಮೂಲಕ ನಿನ್ನನ್ನು ಸಂಪೂರ್ಣವಾಗಿ ಭಗವಂತನಿಗೆ ನೀಡು.

ಪ್ರೇಮ ಮತ್ತು ಆಶೀರ್ವಾದಗಳೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/60 – ಶ್ರೀಮಾತೆ**

# ಪ್ರಾರ್ಥನೆ ಮತ್ತು ಪೂಜೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಬಾಹ್ಯ ಆರಾಧನೆ

ಈ ಯೋಗದಲ್ಲಿ ಆಂತರಿಕ ಪೂಜೆಗೆ ಮತ್ತು ಧ್ಯಾನಕ್ಕೆ ಮಾತ್ರ ನಿರ್ಬಂಧವಿಲ್ಲ. ಈ ಯೋಗವು ಅಂತಃಪುರುಷನಿಗೆ ಮಾತ್ರವಲ್ಲದೆ, ಸಂಪೂರ್ಣ ಪುರುಷನಿಗೆ ಸಂಬಂಧಪಟ್ಟ ಯೋಗವಾಗಿರುವುದರಿಂದ, ಅಂತಹ ಯಾವುದೇ ನಿರ್ಬಂಧವನ್ನು ಹೇರಲು ಉದ್ದೇಶಿಸಲಾಗುವುದಿಲ್ಲ. ವಿವಿಧ ಧರ್ಮಗಳ ಹಳೆಯ ರೂಪಗಳು ಕಣ್ಮರೆಯಾಗಬಹುದು, ಆದರೆ ಎಲ್ಲಾ ರೂಪಗಳ ಅನುಪಸ್ಥಿತಿಯು ಸಾಧನೆಯ ನಿಯಮವಲ್ಲ.

"ಹಳೆಯ ರೂಪಗಳು ... ಬಿದ್ದು ಹೋಗಬಹುದು" ಎನ್ನುವ ನನ್ನ ಬರಹದಲ್ಲಿ, ಜೀವಂತ ಮೌಲ್ಯವನ್ನು ಹೊಂದಿರುವ ಪ್ರಣಾಮ್‌ದ ಬಗ್ಗೆ ನಾನು ಯೋಚಿಸುತ್ತಿರಲಿಲ್ಲ, ಆದರೆ ಯಾವುದೇ ಮೌಲ್ಯವನ್ನು ಹೊಂದಿರದ ಹಳೆಯ ರೂಪಗಳ ಬಗ್ಗೆ ಯೋಚಿಸುತ್ತಿದ್ದೆ – ಉದಾಹರಣೆಗೆ ಸತ್ತವರಿಗಾಗಿ ಶ್ರಾದ್ಧವನ್ನು ಮಾಡುವುದು. ಇಲ್ಲಿ ಈ ಯೋಗಕ್ಕೆ ಯಾವುದೇ ಸಂಬಂಧವಿಲ್ಲ ರೂಪಗಳೂ ಸಹ ಇವೆ – ಉದಾಹರಣೆಗೆ, ಕ್ರೈಸ್ತರು ಕ್ರೈಸ್ತ ಪದ್ಧತಿಗಳಿಗೆ ಅಥವಾ ಮುಸಲ್ಮಾನರು ನಮಾಜಿಗೆ ಅಥವಾ ಹಿಂದುಗಳು ಸಂಧ್ಯಾವಂದನೆಗೆ ಹಳೆಯ ರೀತಿಯಲ್ಲಿ ಅಂಟಿಕೊಂಡರೆ, ಅವು ಅವರ ಸಾಧನೆಯ ಸ್ವತಂತ್ರ ಬೆಳವಣಿಗೆಗೆ ಅಡ್ಡಿಯಾಗುತ್ತವೆ ಅಥವಾ ಕ್ರಮೇಣ ಕಣ್ಮರೆಯಾಗುತ್ತವೆ.

ಬಾಹ್ಯ ಆರಾಧನೆ ಎಂದರೇನು? ಒಂದು ವೇಳೆ ಇದು ಸಂಪೂರ್ಣವಾಗಿ ಬಾಹ್ಯವಾಗಿದ್ದರೆ, ಆಗ ಇದು ಸಹಜವಾಗಿ ಅತ್ಯಂತ ಕೆಳಮಟ್ಟದ್ದಾಗಿರುತ್ತದೆ; ಆದರೆ ಒಂದು ವೇಳೆ ಅದನ್ನು ನಿಜವಾದ ಆಂತರಿಕ ಪ್ರಜ್ಞೆಯೊಂದಿಗೆ ಮಾಡಿದರೆ, ಅದು ದೇಹ ಮತ್ತು ಬಾಹ್ಯ ಪ್ರಜ್ಞೆಯನ್ನು ಸ್ಫೂರ್ತಿ ಮತ್ತು ಆರಾಧನೆಯ ಕ್ರಿಯೆಯಲ್ಲಿ ಹಂಚಿಕೊಳ್ಳಲು ಅವಕಾಶ ನೀಡುವ ಮೂಲಕ ಆರಾಧನೆಯ ಪೂರ್ಣತೆಯನ್ನು ತರಬಹುದು.

ನೀವು ಹೇಳುವುದು ನಿಸ್ಸಂದೇಹವಾಗಿಯು ನಿಜ, ಆದರೆ ಅಂತಹ ಬೆಂಬಲಗಳ ಅಗತ್ಯವಿರುವವರ ನಂಬಿಕೆಗೆ ಇನ್ನೂ ಇರಬಹುದಾದ ಬೆಂಬಲವನ್ನು ತೆಗೆದುಕೊಳ್ಳ–ದಿರುವುದು ಉತ್ತಮ. ಈ ದರ್ಶನಗಳು, ಮೂರ್ತರೂಪಗಳು ಮತ್ತು ಉತ್ಸವಗಳು

ಆ ಉದ್ದೇಶಕ್ಕಾಗಿಯೇ ಇವೆ. ಯಾವುದೇ ನಂಬಿಕೆ ಅಥವಾ ನಂಬಿಕೆಯ ಬೆಂಬಲವನ್ನು ಹೊಂದಿರುವ ವ್ಯಕ್ತಿಗಳು ಅದನ್ನು ಅದಕ್ಕಿಂತ ದೊಡ್ಡದಾದ ಮತ್ತು ಹೆಚ್ಚು ಸಂಪೂರ್ಣವಾದ ಯಾವುದರಿಂದಲಾದರೂ ಬದಲಿಸಲು ಸಾಧ್ಯವಾಗದ ಹೊರತು ಅದನ್ನು ತೆಗೆದುಕೊಳ್ಳದಿರುವುದು ಆಧ್ಯಾತ್ಮಿಕ ತತ್ತ್ವವಾಗಿದೆ.

'ಪ್ರಾಪ್ರತೀಷ್ಠ'ವು (ಗರ್ಭಗುಡಿಯಲ್ಲಿ ಆರಾಧಿಸುವುದರ ಸಲುವಾಗಿ ಪ್ರತಿಷ್ಠಾಪಿಸಲಾದ ದೇವರ ಸಾಕಾರ ರೂಪ) ಶಕ್ತಿಯುತವಾದ ಸಾನಿಧ್ಯವನ್ನು (ಮೂರ್ತ ರೂಪದಲ್ಲಿ) ತಂದರೆ, ಅದನ್ನು ತಂದವನು ತನ್ನ ದೇಹವನ್ನು ತೊರೆದ ನಂತರವೂ ಅದು ಅಲ್ಲಿಯೇ ಉಳಿಯಬಹುದು. ಸಾಮಾನ್ಯವಾಗಿ ಇದು ಪುರೋಹಿತರ ಭಕ್ತಿ ಮತ್ತು ಆರಾಧನೆಗಾಗಿ ದೇವಸ್ಥಾನಕ್ಕೆ ಬರುವವರ ನಂಬಿಕೆ ಮತ್ತು ಆರಾಧನೆಯ ಪ್ರಾಮಾಣಿಕತೆಯಿಂದ ನಿರ್ವಹಿಸಲ್ಪಡುತ್ತದೆ. ಒಂದು ವೇಳೆ ಇವು ವಿಫಲವಾದರೆ, ಸಾನಿಧ್ಯವನ್ನು (ಅಸ್ತಿತ್ವವನ್ನು) ಹಿಂತೆಗೆದುಕೊಳ್ಳುವ ಸಾಧ್ಯತೆಯಿದೆ.

ದೇವಾಲಯದಲ್ಲಿ, ಭಕ್ತನು ದೇವರಿಗೆ ಅರ್ಪಿಸಿದ ನೈವೇದ್ಯವು ಮಾಯವಾಗುವುದಕ್ಕೆ **"ವೈಜ್ಞಾನಿಕ"** ವಿವರಣೆ ಏನೆಂದರೆ, ಯಾರೋ ಒಬ್ಬ, ಬಹುಶಃ ಒಬ್ಬ ಸೇವಕ, ನಿಷೇಧವನ್ನು ಉಲ್ಲಂಘಿಸಿ, ಯಾರೂ ನೋಡುತ್ತಿರದ ಸಮಯದಲ್ಲಿ ನೈವೇದ್ಯಗೆಂದು ಅರ್ಪಿಸಿದ ಆಹಾರವನ್ನು ಗುಟ್ಟಾಗಿ ತಿಂದುಬಿಟ್ಟಿರಬೇಕು! ಆದಾಗ್ಯೂ, ಅದು ನಿಗೂಢ ಅಭಿವ್ಯಕ್ತಿಗಳು ಅಸಾಧ್ಯವೆಂದು ಊಹಿಸುತ್ತದೆ, ಅದು ನಿಜವಲ್ಲ; ಅದು ಕೇವಲ ಸಂಭವನೀಯ ತೀರ್ಮಾನ ಅಥವಾ ಸಿದ್ಧಾಂತವಾಗಿದೆ. ಅದೃಶ್ಯ ಪುರುಷರಿಗೆ ಅರ್ಪಿಸಿದ ಆಹಾರವನ್ನು ಕೆಲವು ಸಲ ಅದರ ಬಾಹ್ಯ ರೂಪವನ್ನು ಹಾಗೇಯೆ ಉಳಿಸಿ ಅದರ ಸೂಕ್ಷ್ಮ ಅಂಶಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ನಿಗೂಢವಾದಿಗಳು, ಅಥವಾ ಅವರಲ್ಲಿ ಕೆಲವರು ನಂಬುತ್ತಾರೆ. ಆಹಾರವನ್ನು ಶಾರೀರಿಕವಾಗಿ ತೆಗೆದುಕೊಳ್ಳುವುದು ವಿರಳ, ಆದರೆ ಭಕ್ತಿಯು ಅತ್ಯಂತ ಪ್ರಬಲವಾಗಿರುವ ಸಂದರ್ಭಗಳಲ್ಲಿ ಇದು ಸಂಭವಿಸಿದೆ ಎಂದು ನಂಬಲಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/364–65**

## ಬಾಹ್ಯ ಭಕ್ತಿ

ಯಾಂತ್ರಿಕ ಮತ್ತು ಕೃತಕ ಎನ್ನುವಂತಹ ಭಕ್ತಿ ಇರಲು ಸಾಧ್ಯವಿಲ್ಲ – ಒಂದು ಅಲ್ಲಿ ಭಕ್ತಿ ಇರಬೇಕು ಅಥವಾ ಭಕ್ತಿಯೇ ಇರಲಿಕ್ಕಿಲ್ಲ, ಎರಡೇ ಸಾಧ್ಯತೆಗಳು. ಭಕ್ತಿಯು

ತೀವ್ರವಾಗಿರಬಹುದು ಅಥವಾ ತೀವ್ರವಾಗಿರದೆ ಇರಬಹುದು, ಪೂರ್ಣ ಅಥವಾ ಅಪೂರ್ಣವಾಗಿರಬಹುದು, ಕೆಲವೊಮ್ಮೆ ಅದು ವ್ಯಕ್ತವಾಗಬಹುದು ಅಥವಾ ವ್ಯಕ್ತವಾಗದೆಯೂ ಇರಬಹುದು. ಆದರೆ ಯಾಂತ್ರಿಕ ಮತ್ತು ಕೃತಕ ಎನ್ನುವಂತಹ ಭಕ್ತಿಯು, ಪರಿಭಾಷೆಯಲ್ಲಿ ವಿರೋಧಾಭಾಸವಾಗಿದೆ. ಬಾಹ್ಯ ಭಕ್ತಿಯ ವಿರುದ್ಧದ ವಾದಗಳು, ಸತ್ಯದ ಒಂದು ಬದಿಯನ್ನು ತೆಗೆದುಕೊಂಡು ಇನ್ನೊಂದು ಬದಿಯನ್ನು ನಿರ್ಲಕ್ಷಿಸಿ ಮನಸ್ಸಿನಿಂದ ನಿರ್ಮಿತವಾದ ಉತ್ಪ್ರೇಕ್ಷೆಗಳಾಗಿವೆ. ಆಂತರಿಕ ಭಕ್ತಿಯೇ ಪ್ರಧಾನವಾಗಿದೆ, ಮತ್ತು ಅದಿಲ್ಲದೆ ಬಾಹ್ಯ ಭಕ್ತಿಯು ಒಂದು ರೂಪವಾಗುತ್ತದೆ ಮತ್ತು ಕೇವಲ ಆಚರಣೆಯಾಗುತ್ತದೆ. ಆದರೆ ಬಾಹ್ಯ ಭಕ್ತಿಯು ನೇರ ಮತ್ತು ಪ್ರಾಮಾಣಿಕ–ವಾಗಿದ್ದಾಗ, ಅದು ತನ್ನ ಮಹತ್ವವನ್ನು ಮತ್ತು ಉಪಯುಕ್ತತೆಯನ್ನು ಹೊಂದಿರುತ್ತದೆ.

*

ಭಕ್ತಿಯು ದೇವರಿಗಾಗಿ ಮಾತ್ರ ಇರಬೇಕು – ಸಾಧಕರು ಸಾಧಕರೇ, ದೇವರನ್ನು ತಲುಪಲು ಪ್ರಯತ್ನಿಸುವವರು, ಆದರೆ ಇನ್ನೂ ದೋಷಗಳಿಂದ ಮತ್ತು ಪ್ರಯಾಸಗಳಿಂದ ಕೂಡಿದ ಸಾಧಕರು.

*

ದೇವರಿಂದ ಎಲ್ಲವನ್ನೂ ಪಡೆದುಕೊಂಡು, ತಿರುಗಿ ದೇವರಿಗೆ ಏನನ್ನೂ ಕೊಡದೇ ಇರುವಂಥ ಭಕ್ತಿಯು ನಿಜವಾದ ಭಕ್ತಿ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/355**

**ಪ್ರಾರ್ಥನೆ**

ಪ್ರಾರ್ಥನೆ ಮತ್ತು ಆಕಾಂಕ್ಷೆಗಳು ಆಧ್ಯಾತ್ಮಿಕ ಜೀವನದ ಅಂಗಗಳಾಗಿವೆ, ಮತ್ತು ಆತ್ಮಸಮರ್ಪಣೆಯ ಜೊತೆ ಸಾಮರಸ್ಯವನ್ನು ಹೊಂದಿರುತ್ತವೆ. ಇದು ಯಾವಾಗ ಸಾಧ್ಯವಾಗುವುದೆಂದರೆ, ಪ್ರಾರ್ಥನೆಯ ಈಡೇರಿಕೆಯಿಂದ ಅಥವಾ ಈಡೇರದೆ ಇರುವುದರಿಂದ ನಾವು ಯಾವುದೇ ರೀತಿಯಲ್ಲಿ ಕ್ಷೋಭೆಗೊಳಗಾಗದಿದ್ದಾಗ ಮತ್ತು ನಮ್ಮ ನಂಬಿಕೆ ಹಾಗೂ ಶಾಂತತೆಯು ಒಂದೇ ರೀತಿ ಇದ್ದಾಗ. ಸಾಮಾನ್ಯ ಜೀವನದಲ್ಲಿ ಪ್ರಾರ್ಥನೆಯು ದೇವರೊಂದಿಗಿನ ಮಾನವ ಸಂಬಂಧದ ಮುಖ್ಯ ಅಂಶಗಳಲ್ಲಿ ಒಂದಾಗಿದೆ ಮತ್ತು ಅನೇಕ ವೇಳೆ (ಆದರೆ ಯಾವಾಗಲೂ ಅಲ್ಲ) ನಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗುವುದಿಲ್ಲ; ಪ್ರಾರ್ಥನೆಗೆ ಉತ್ತರ ಸಿಗದಿದ್ದಾಗ ಧಾರ್ಮಿಕ ವ್ಯಕ್ತಿಯು ದೇವರಲ್ಲಿ

ತನ್ನ ನಂಬಿಕೆಯನ್ನು ಮುಂದುವರೆಸುತ್ತಾನೆ ಮತ್ತು ಉತ್ತರ ನೀಡದೇ ಇರುವುದು ದೇವರ ಇಚ್ಛೆ ಅಲ್ಲವೆನ್ನುವುದನ್ನು ಅರ್ಥಮಾಡಿಕೊಳ್ಳುತ್ತಾನೆ ಅಥವಾ ತನ್ನ ಪ್ರಾರ್ಥನೆಯು ಆ ದೇವರಿಗೆ ಕೇಳುವವರೆಗೂ ಆತ ಇನ್ನೂ ಹೆಚ್ಚಿನ ಉತ್ಸಾಹದಿಂದ ಪ್ರಾರ್ಥಿಸುತ್ತಾನೆ – ಅದು (ಪ್ರಾರ್ಥಿಸುವ) ಮನುಷ್ಯ ಮತ್ತು ಸಂದರ್ಭಗಳನ್ನು ಅವಲಂಬಿಸಿರುತ್ತದೆ. ಒಬ್ಬ ಸಾಧಕನು ಸಂಬಂಧರಹಿತನಾಗಿದ್ದಾಗ ಹಾಗೂ ಸಮಾನ ಮನಸ್ಕನಾಗಿ ಉಳಿದಾಗ, ಇತರರಿಗಾಗಿ ಅವರ ವ್ಯವಹಾರಗಳಲ್ಲಿ ಆಂತರಿಕವಾಗಿ ಮಧ್ಯಸ್ಥಿಕೆ ವಹಿಸಬಹುದು. ಇಲ್ಲದಿದ್ದರೆ, ಅವನು ಇತರರ ವ್ಯವಹಾರಗಳಲ್ಲಿ ಮಧ್ಯಸ್ಥಿಕೆ ವಹಿಸಲು ಬದ್ಧನಾಗಿರುವುದಿಲ್ಲ.

*

ಎಲ್ಲ ಪ್ರಾರ್ಥನೆಗಳು ದೇವರನ್ನು ತಲುಪುವುದಿಲ್ಲ ಎಲ್ಲರ (ಎಷ್ಟೇ ಪ್ರಾಮಾಣಿಕವಾಗಿದ್ದ) ಪ್ರಾರ್ಥನೆಗಳೂ ಕೇಳಲ್ಪಡುವುದಾದರೆ, ಈ ಜಗತ್ತು ಈಗಿರುವುದಕ್ಕಿಂತ ಇನ್ನೂ ಅಪಾಯಕಾರಿಯಾಗಿರುವುದು. ನೇರವಾಗಿ ದೇವರನ್ನುದ್ದೇಶಿಸಿ ಮಾಡಿದ ಪಾರ್ಥನೆಯೂ (ಯಾವಾಗಲೂ) ಕೇಳಲ್ಪಡುವುದಿಲ್ಲ – ನಂಬಿಕೆಯು ಯಾವಾಗಲೂ ಒಂದೇ ಬಾರಿಗೆ ಸಮರ್ಥಿಸಲ್ಪಡುವುದಿಲ್ಲ. ಪ್ರಾರ್ಥನೆ ಮತ್ತು ಶ್ರದ್ಧೆಗಳೆರಡೂ, ಮನುಷ್ಯನ ಪ್ರಯಾಸದಲ್ಲಿ ಆತನಿಗೆ ಸಹಾಯಕವಾಗಬಲ್ಲ ಶಕ್ತಿಗಳಾಗಿವೆ. ಅವುಗಳಿರದೇ, ಜೊತೆಗೆ ಆಕಾಂಕ್ಷೆ, ಹಂಬಲ ಮತ್ತು ನಂಬಿಕೆ (ಆಕಾಂಕ್ಷೆಯೇ ಪ್ರಾರ್ಥನೆಯಾಗಿದೆ) ಇರದೆ ಅವನು ಏನನ್ನಾದರೂ ಸಾಧಿಸುವುದು ಕಷ್ಟವಾಗುತ್ತದೆ. ಆದರೂ ಈ ಎಲ್ಲಾ ಸಂಗತಿಗಳು ದೈವೀ ಶಕ್ತಿಯನ್ನು ಕಾರ್ಯರೂಪಕ್ಕೆ ತರಲು ಕೇವಲ ಸಾಧನಗಳು ಮಾತ್ರ ಮತ್ತು ಆ ಶಕ್ತಿಗಳು ಕಾರ್ಯರೂಪಕ್ಕೆ ಬರಲು ಅಥವಾ ಕನಿಷ್ಠ ಆ ಶಕ್ತಿಗಳು ಕಾರ್ಯರೂಪಕ್ಕೆ ಬಂದಿರುವುದನ್ನು ಕಾಣಲು ಅಥವಾ ಅವುಗಳು ಫಲ ನೀಡುವುದನ್ನು ನೋಡಲು ತುಂಬಾ ಸಮಯ ಬೇಕಾಗುತ್ತದೆ, ಕೆಲವೊಮ್ಮೆ ಅತ್ಯಂತ ದೀರ್ಘವಾದ ಸಮಯವೂ ಸಹ ಬೇಕಾಗುತ್ತದೆ. ಆನಂದವಾದಿಯು ತನ್ನ ವಾದವನ್ನು ಅತಿಯಾಗಿ ಹೇಳಿಕೊಂಡಾಗಲೂ ಅದು ಸಂಪೂರ್ಣವಾಗಿ ತಪ್ಪಲ್ಲ. ಅತಿಯಾದ ಹೇಳಿಕೆಗಳೂ ಸಹ ಕೆಲವೊಮ್ಮೆ ಬ್ರಹ್ಮಾಂಡ ಶಕ್ತಿಯನ್ನು ಮನವರಿಕೆ ಮಾಡಲು ಸಹಾಯ ಮಾಡುತ್ತವೆ, ಹಾಗಾಗಿ ಅದು "ಓಹ್, ಹಾಗಿದ್ರೆ ಸರಿ" ಎಂದು ಹೇಳುತ್ತದೆ.

*

ಪ್ರಾರ್ಥನೆಗೆ ಸಂಬಂಧಿಸಿದಂತೆ, ಕಠಿಣ ಮತ್ತು ಕಟ್ಟುನಿಟ್ಟಾದ ನಿಯಮಗಳನ್ನು ಹೇರಲಾಗದು. ಕೆಲವು ಪ್ರಾರ್ಥನೆಗಳು ಮಾತ್ರ ಈಡೇರುತ್ತವೆ, ಎಲ್ಲವೂ ಈಡೇರುವುದಿಲ್ಲ.

ಹಾಗಾದರೆ ನೀವು ಹೀಗೆ ಕೇಳಬಹುದು – ಎಲ್ಲ ಪ್ರಾರ್ಥನೆಗಳು ಏಕೆ ಉತ್ತರಿಸಲ್ಪಡುವುದಿಲ್ಲ? ಆದರೆ ಅವುಗಳಿಗೆ ಏಕೆ ಉತ್ತರಿಸಬೇಕು? ಹಾಗೆ ಮಾಡಲು ಇದೊಂದು ಯಂತ್ರವಲ್ಲ. ಯಂತ್ರದಲ್ಲಿ ನಾಣ್ಯವನ್ನು ಹಾಕಿ ಸಾಮಾನು ಪಡೆದುಕೊಂಡಂತೆ, ಪ್ರಾರ್ಥನೆಯನ್ನು (ಯಂತ್ರದಲ್ಲಿ) ಹಾಕಿ ನಮಗೆ ಬೇಕಾದ್ದನ್ನು ಪಡೆದುಕೊಳ್ಳಲು ಬರುವುದಿಲ್ಲ. ಅದಲ್ಲದೆ, ಎಲ್ಲಾ ವಿರೋಧಾಭಾಸ ಸಂಗತಿಗಳನ್ನು ಮಾನವನು ಒಟ್ಟಿಗೆ ಪ್ರಾರ್ಥಿಸುವುದನ್ನು ಪರಿಗಣಿಸಿ ದೇವರು ಅವೆಲ್ಲವನ್ನೂ ಈಡೇರಿಸುವುದಾದರೆ, ಆತ ಇಕ್ಕಟ್ಟಿನ ಸ್ಥಿತಿಯಲ್ಲಿ ಸಿಲುಕುವನು; ಅದು ಹಾಗಾಗುವುದಿಲ್ಲ.

ನಾವು ಈ ಪ್ರಪಂಚದಲ್ಲಿ ವಾಸಿಸುತ್ತಿದ್ದರೆ ಅಂತಹ ಪ್ರಾರ್ಥನೆಗಳನ್ನು ಅರ್ಪಿಸಿಬಹುದು (ಲೌಕಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯಕ್ಕಾಗಿ); ಆದರೆ ದೇವರು ಆ ಎಲ್ಲಾ ಪ್ರಾರ್ಥನೆಗಳನ್ನು ಈಡೇರಿಸುತ್ತಾನೆ ಎಂದು ನಿರೀಕ್ಷಿಸಬಾರದು ಅಥವಾ ಅವನು ಹಾಗೆ ಮಾಡಲು ಬದ್ಧನಾಗಿರುತ್ತಾನೆ ಎಂದು ಭಾವಿಸಬಾರದು. ನಾವು ಸಾಧಕರಾಗಿದ್ದಾಗ ಪ್ರಾರ್ಥನೆಯು ಸಾಧನಕ್ಕೆ ಸೇರಿದ ಆಂತರಿಕ ವಿಷಯಗಳಿಗಾಗಿ ಮತ್ತು ಬಾಹ್ಯ ವಿಷಯಗಳಿಗೆ ಅಗತ್ಯವಿರುವಷ್ಟು ಮತ್ತು ದೈವೀ ಕಾರ್ಯಕ್ಕಾಗಿ ಮಾತ್ರ ಇರಬೇಕು.

*

ಪ್ರಾರ್ಥನೆಯ ಬಗ್ಗೆ ನೀನು ಹೇಳುವುದು ಸರಿಯಾಗಿದೆ. ಅದು (ವ್ಯಕ್ತಿಗತವಲ್ಲದ ಪ್ರಾರ್ಥನೆಯು) ಅತ್ಯುನ್ನತ ರೀತಿಯ ಪ್ರಾರ್ಥನೆಯಾಗಿದೆ, ಆದರೆ ಇನ್ನೊಂದು ವಿಧದ ಪ್ರಾರ್ಥನೆಯೂ ಸಹ (ಅಂದರೆ ಹೆಚ್ಚು ವೈಯಕ್ತಿಕ) ಒಪ್ಪಬಲ್ಲ ಮತ್ತು ಅಪೇಕ್ಷಣೀಯ ಪ್ರಾರ್ಥನೆಯಾಗಿದೆ. ಸರಿಯಾಗಿ ಅರ್ಪಿಸಲಾದ ಎಲ್ಲಾ ಪ್ರಾರ್ಥನೆಗಳು ನಮ್ಮನ್ನು ದೇವರ ಹತ್ತಿರ ತರುತ್ತವೆ ಮತ್ತು ಅವನೊಂದಿಗೆ ಸರಿಯಾದ ಸಂಬಂಧವನ್ನು ಸ್ಥಾಪಿಸುತ್ತವೆ.

*

ಪ್ರಾರ್ಥನೆಗಳಿಗೆ ಸಂಬಂಧಿಸಿದಂತೆ, ಪ್ರಾರ್ಥನೆಯ ಸತ್ಯ ಮತ್ತು ಅದು ತರುವ ವರ್ತನೆ, ವಿಶೇಷವಾಗಿ ಇತರರಿಗೆ ಮಾಡಿದ ನಿಸ್ವಾರ್ಥ ಪ್ರಾರ್ಥನೆಯು ನಿಮ್ಮನ್ನು ಉನ್ನತ ಶಕ್ತಿಗೆ ತೆರೆಯುತ್ತದೆ – ವ್ಯಕ್ತಿಗಾಗಿ ಮಾಡಿದ ಪ್ರಾರ್ಥನೆಯ ಅನುಗುಣವಾಗಿ ಯಾವುದೇ ಫಲಿತಾಂಶವಿಲ್ಲದಿದ್ದರೂ ಸಹ. ಅದರ ಬಗ್ಗೆ ಧನಾತ್ಮಕವಾಗಿ ಏನನ್ನೂ ಹೇಳಲಾಗುವುದಿಲ್ಲ, ಏಕೆಂದರೆ ಫಲಿತಾಂಶವು ಅಗತ್ಯವಾಗಿ ವ್ಯಕ್ತಿಗಳ ಮೇಲೆ ಅವಲಂಬಿತವಾಗಿರಲೇಬೇಕು,

ಅವರು ಮುಕ್ತವಾಗಿದ್ದಾರೊ ಅಥವಾ ಗ್ರಹಿಸುವವರಾಗಿದ್ದಾರೊ ಅಥವಾ ಅವರಲ್ಲಿಯ ಯಾವುದೋ ಒಂದು ಪ್ರಾರ್ಥನೆಯು ಕೆಳಗಿಳಿಸುವಂಥ ಯಾವುದೇ ಶಕ್ತಿಗೆ ಪ್ರತಿಕ್ರಿಯಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/365–67**

**ಪ್ರಾರ್ಥನೆಗಳು ಆತ್ಮವಿಶ್ವಾಸದಿಂದ ತುಂಬಿರಬೇಕು**

"ನೀವು ಶ್ರೀ ಅರೊಬಿಂದೋ ಛಾಯಾಚಿತ್ರದ ಮುಂದೆ ಕುಳಿತು ಏಕೆ ಧ್ಯಾನ ಮಾಡಲು ಬಯಸುತ್ತೀರಿ? ಎಂದು ಸಹ ಸಾಧಕನೊಬ್ಬ ವರದಿಗಾರನೊಬ್ಬನನ್ನು ಕೇಳಿದರು. ನೀವು ಅಂತರಂಗದಲ್ಲಿ ಧ್ಯಾನ ಮಾಡಬಹುದಾದರೆ, ಈ ಬಾಹ್ಯ ಭಕ್ತಿಯ ಅಗತ್ಯವಿಲ್ಲ." – ಸಂಪಾದಕ.

*

ವರದಿಗಾರನು ಶ್ರೀ ಅರೊಬಿಂದೋ ಅವರ ಛಾಯಾಚಿತ್ರವನ್ನು ನೋಡುತ್ತಿರಬೇಕಾದರೆ, "ನಿಜವಾದ ಕಣ್ಣುಗಳಂತೆ" ಕಣ್ಣುಗಳನ್ನು ಹೊಂದಿದ ಸಾಕಾರ ಪುರುಷನನ್ನು ನೋಡುತ್ತಿರುವ ಅನುಭವ ಆತನಿಗಾಯಿತು. – ಸಂಪಾದಕ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/355–363**

"ನಾನು ಬದಲಾಗುತ್ತೇನೆ ಎನ್ನುವ ಷರತ್ತಿನ ಮೇಲೆ ಮಾತ್ರ ಪೂಜಿಸಬೇಡ". – ಅನೇಕರು ಬದಲಾಗಲೂ ಬಯಸುವುದಿಲ್ಲ ಅಥವಾ ಆರಾಧಿಸಲೂ ಬಯಸುವುದಿಲ್ಲ!

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 14 ಜನವರಿ, 1970**

**ವಿಶ್ವದ ಆರಾಧನೆ**

ದಿವ್ಯವನ್ನು ಕುರಿತ ಮಾನವ ಕಲ್ಪನೆಗಳು ಎರಡು ರೀತಿಯ ಆರಾಧನೆಗಳಲ್ಲಿ ವಿಂಗಡಣೆಯಾಗುತ್ತವೆ: ಮೊದಲನೆಯದು – ಸಾಕಾರ ಆರಾಧನೆ ಮತ್ತು ನಿರಾಕಾರ ಆರಾಧನೆಯ ಕಡೆಗೆ ಒಲವು. ಎರಡನೆಯದು – ಗುಣವಿರುವ (ವಿಶಿಷ್ಟ) ದೇವತಾರಾಧನೆ ಮತ್ತು ಗುಣಾತೀತ, ಸಂಪೂರ್ಣವಿರುವ ಕಡೆಗೆ ಅಪರೂಪದ ಆತ್ಮಗಳ ಪ್ರಚೋದನೆ. ಈ ಎಲ್ಲಾ ಹಂತಗಳಿಗೆ ತಾಂತ್ರಿಕ ಪೂಜೆ ಮತ್ತು ಶಿಸ್ತು ಅಣಿಗೊಳಿಸುತ್ತವೆ. ನಿರಾಕಾರವು

ತನ್ನನ್ನು ಹೇಗೆ ಸಾಕಾರ ರೂಪದೊಂದಿಗೆ ತೊಡಗಿಸಿಕೊಳ್ಳಬಹುದು ಎಂದು ಧಾರ್ಮಿಕ ವಿಚಾರವಾದಿ ಕೇಳುತ್ತಾನೆ. ವಿಶ್ವವೇ ಉತ್ತರ ನೀಡುತ್ತದೆ. ಹಿಂದೂ ಧರ್ಮವು ಕಲ್ಲು, ಮರ, ಪ್ರಾಣಿ, ಮನುಷ್ಯನಲ್ಲಿ ನಾರಾಯಣನನ್ನು ಪೂಜಿಸುತ್ತದೆ. ಇತರ ಧರ್ಮಗಳ ಬೌದ್ಧಿಕ ಮತ್ತು ಆಧ್ಯಾತ್ಮಿಕ ಅಹಂಕಾರ ಅಥವಾ ಕಠಿಣತೆಯು ಇದನ್ನು ಧಿಕ್ಕರಿಸುತ್ತದೆ, ಅದು ತನ್ನ ಅಭಿಮಾನವನ್ನು ನಿರ್ಮಿಸುತ್ತದೆ ಮತ್ತು ತನ್ನದೇ ಆದ ತಾರ್ಕಿಕ ಕಠಿಣತೆಯ ಸ್ವಂತ ರೂಪದಲ್ಲಿ ಪರಿವರ್ತಿಸುತ್ತದೆ. ಕಾಂಡ ಮತ್ತು ಕಲ್ಲುಗಳು, ಚತುಷ್ಪಾದಿ ಮತ್ತು ಮಾನವರು, ಇವೆಲ್ಲವೂ ದೇವರ ಸಮ್ಮುಖದಲ್ಲಿ ಸಮಾನರು, ದೈವಿಕದಲ್ಲಿ ನಮ್ಮ ಸಹೋದರರು, ಸರ್ವವ್ಯಾಪಿಯು ಹೊಂದಲು ತಿರಸ್ಕರಿಸಲಾರದಂಥ ರೂಪಗಳು. ಆದರೆ ಭೌತಿಕ ರೂಪಗಳಾಚೆ, ಆದರ್ಶ ಹಾಗೂ ಸಾಂಕೇತಿಕವಾದ ಇತರ ರೂಪಗಳಿವೆ. ಆದರೆ, ಯಾವುದೋ ಒಂದು ಹೆಚ್ಚು ನೈಜವಾಗಿದ್ದರೆ, ಯಾವುದೇ ಭೌತಿಕ ಅಭಿವ್ಯಕ್ತಿಗಿಂತ ಹೆಚ್ಚು ದೈವೀ ಶಕ್ತಿಯಿಂದ ತುಂಬಿದ್ದರೆ, ಇದು ಅದಕ್ಕಿಂತ ಕಡಿಮೆಯಲ್ಲ. ಇವುಗಳು, ನಾವು ದೇವರನ್ನು ಪೂಜಿಸುವ ಮಾನಸಿಕ ರೂಪಗಳಾಗಿವೆ. ತನ್ನ ಭಕ್ತಿಯನ್ನು ಯಾವುದೇ ರೂಪಕ್ಕೆ ಅರ್ಪಿಸಿದರೂ, ದೇವರ ಪ್ರೀತಿಯು ಆ ರೂಪವನ್ನು ತಾಳುತ್ತದೆ ಮತ್ತು ಅದನ್ನು ಚೈತನ್ಯಮಯವಾಗಿಸುತ್ತದೆ ಎಂದು ಒಬ್ಬ ಹಿಂದೂ ನಂಬುತ್ತಾನೆ, ಆಗ ನಾವು ಆ ನಂಬಿಕೆಯು ಅತಾರ್ಕಿಕವೆಂದು ಹೇಳಲಾಗದು. ವಿಶ್ವದಲ್ಲಿ ಪ್ರಜ್ಞೆಯೊಂದು ಇದ್ದರೆ ಮತ್ತು ಅದು ಎಲ್ಲ ಪ್ರಾಣಿಗಳ ಹಂಬಲಗಳಿಗೆ ಸ್ಪಂದಿಸುವಂಥದ್ದನ್ನು ಮೀರಿದ್ದರೆ ಮತ್ತು ಬಹುಶಃ ಅವುಗಳೆಡೆಗೆ ತಂದೆಯ, ತಾಯಿಯ, ಮಿತ್ರನ, ಪ್ರೇಮಿಯ ಪ್ರೇಮದೊಂದಿಗೆ ಮತ್ತು ಇವೆಲ್ಲವುಗಳನ್ನು ಮೀರಿದ ಪ್ರೀತಿಯೊಂದು ಇದ್ದರೆ, ಅದು ತನ್ನ ಸ್ವಂತ ತೃಪ್ತಿಗಾಗಿ ಹಾಗೂ ವೈಭವಕ್ಕಾಗಿ ವಿಶ್ವದ ರೂಪಗಳನ್ನು ಹೊಂದುತ್ತದೆ ಅಥವಾ ನಿರ್ಮಿಸಿಕೊಳ್ಳುತ್ತದೆ. ಆದರೆ ಆರಾಧಕನ ಪ್ರೀತಿಯು ಅದಕ್ಕೆ ನೀಡುವ ಮತ್ತು ಅವನ ಹೃದಯದಲ್ಲಿ ಅಥವಾ ಅವನ ಕಲ್ಪನೆಯಲ್ಲಿ ಸ್ವತಃ ರೂಪಗೊಂಡದ್ದನ್ನು ಅದರ ಘನತೆ ಅಥವಾ ಪರಿಶುದ್ಧತೆಗೆ ಅಪರಾಧವೆಂದು ತಿರಸ್ಕರಿಸುತ್ತದೆ. ಈ ಮಾನಸಿಕ ರೂಪಗಳಿಗೆ ಮಾನಸಿಕ ಪೂಜೆಯನ್ನು ಸಲ್ಲಿಸಬಹುದು ಮತ್ತು ಇದು ಉನ್ನತ ಮಾರ್ಗವಾಗಿದೆ; ಅಥವಾ ಆರಾಧನೆಯ ಭೌತಿಕ ಕ್ರಿಯೆಗಾಗಿ ಭೌತಿಕ ಸಮಸ್ಯೆಯ ಅಂಶವನ್ನು ರೂಪಿಸಲು ನಾವು ಪ್ರತಿಮೆಯ ಅಥವಾ ಚಿತ್ರಿತ ರೂಪದ ಭೌತಿಕ ಅಡಿಪಾಯವನ್ನು, ಪೂಜಿಸಲ್ಪಡುವ ರೂಪವನ್ನು ನೀಡಬಹುದು.

ನಿರಾಕಾರದಲ್ಲಿಯೂ ಸಹ ನಾವು ದೇವರನ್ನು, ಆತನ ಗುಣಗಳಲ್ಲಿ, ಆತನ ಪ್ರೀತಿ, ಪ್ರಭಾವ, ಆನಂದ, ಜ್ಞಾನದಲ್ಲಿ, ಜ್ಞಾನದ ಕಣ್ಣಿಗೆ ಆತನು ಪ್ರಕಟಗೊಳ್ಳುವ

ಬ್ರಹ್ಮಾಂಡದ ಸಿದ್ಧಾಂತಗಳಲ್ಲಿ ಪೂಜಿಸುತ್ತೇವೆ. ಈ ವಸ್ತುಗಳಲ್ಲಿ ವ್ಯಕ್ತವಾಗುವ ನಿರಾಕಾರತೆಯಾಗಿ ಅಥವಾ ಇವುಗಳನ್ನೊಳಗೊಂಡ ವ್ಯಕ್ತಿತ್ವವಾಗಿ ನಾವು ಆತನನ್ನು ಪೂಜಿಸುತ್ತೇವೆ. ರೂಪರಹಿತ ಮಾತ್ರವಲ್ಲದ ಆದರೆ ನಿರ್ಗುಣವಾದ, ನಿರೂಪಿಸಲಾಗದ ಗೀತೆಯ ಪರಮಾವಸ್ಥೆಗೆ ನಾವು ಏರಿಬಿಡುತ್ತೇವೆ. ನಮ್ಮ ಮಾನವ ಅಜ್ಞಾನದಲ್ಲಿ, ಪದವಿಗಳಿಗೆ ಹಾಗೂ ಹಿರಿಮೆಗಳಿಗೆ, ಶ್ರೇಷ್ಠತೆಗಳಿಗೆ ಹಾಗೂ ಬಹಿಷ್ಕಾರಗಳಿಗೆ ನಮ್ಮ ಮಾನಸಿಕ ಉತ್ಸಾಹದಿಂದ ನಾವು ಈ ವಿಷಯಗಳನ್ನು ಹೀಗೆ ವರ್ಗೀಕರಿಸುತ್ತೇವೆ ಮತ್ತು ಇದು ಉತ್ತಮವಾದುದು, ಅದು ಅಜ್ಞಾನಿ ಮತ್ತು ನಿಮ್ನ ಆತ್ಮಗಳಿಗೆ ಎಂದು ಹೇಳುತ್ತೇವೆ. ಆಸ್ತಿಕನು ರೂಪ–ಆರಾಧಿಸುವ, ವ್ಯಕ್ತಿ–ಪೂಜಿಸುವ ವಿಗ್ರಹಾರಾಧಕ ಮತ್ತು ಬಹು ದೇವತಾವಾದಿಯನ್ನು ಒಪ್ಪುವುದಿಲ್ಲ; ಅದ್ವೈತಿಯು ಗುಣಾರಾಧಕ ವ್ಯಕ್ತಿತ್ವ ಭ್ರಾಂತ ಆಸ್ತಿಕನ ಅಜ್ಞಾನವನ್ನು ಶಾಂತ ಮತ್ತು ಸಹನೆಯಿಂದ ನೋಡುತ್ತಾನೆ. ಆದರೆ ದೇವರು ಏನನ್ನೂ ತಿರಸ್ಕರಿಸುವುದಿಲ್ಲವೆಂದು, ಎಲ್ಲಾ ವಸ್ತುಗಳ ಆತ್ಮವು ಚಿಕ್ಕ ಮಗುವಿನ ಪ್ರಾರ್ಥನೆಯಲ್ಲಿ ಅಥವಾ ಚಿತ್ರಿಸಿದ ಚಿತ್ರದ ಮುಂದೆ ಹೂವು ಅಥವಾ ಎಲೆಯ ಅರ್ಪಣೆಯಲ್ಲಿ ಹೆಚ್ಚು ಆನಂದವನ್ನು ಪಡೆಯುತ್ತಾನೆಂದು ನಮಗೆ ತೋರುತ್ತದೆ (ಚಿಂತನೆಯ ಶಿಖರದಿಂದ ಅನಿರ್ವಚನೀಯದಲ್ಲಿ ಮತ್ತು ಅಜ್ಞಾತದಲ್ಲಿ ತತ್ತ್ವಜ್ಞಾನಿಯ ನೆಗೆತದಲ್ಲಿದ್ದಂತೆ), ಮತ್ತು ಯಾರು (ಚಿಕ್ಕ ಮಗುವಿನ ಹೃದಯವನ್ನು ಮತ್ತು ರೂಪಗಳ ದಾರ್ಶನಿಕನ ಸಾಮರ್ಥ್ಯವನ್ನು ಹೊಂದಿ) ಅನಂತ ಸಾಕ್ಷಾತ್ಕಾರದಲ್ಲಿ ಬೆಳೆದು ವಿಸ್ತಾರಗೊಳ್ಳುವರೋ ಅವರಿಗೆ ಅತ್ಯುತ್ತಮವಾದುದನ್ನೇ ಮಾಡುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 1/572–73 – ಶ್ರೀ ಅರವಿಂದರು**

---

*ಶ್ರೀ ಅರವಿಂದರ ಯೋಗದ ಪಥವನ್ನು ಆಯ್ದುಕೊಂಡ ನಂತರ ನಾವು ಇತರ ದೇವರು ಮತ್ತು ದೇವತೆಗಳನ್ನು ಪೂಜಿಸುವುದನ್ನು ನಿಲ್ಲಿಸಬೇಕೆ?*

ಶ್ರೀ ಅರವಿಂದರು ನೀಡಿದ ಯೋಗ ಮಾರ್ಗವನ್ನು ನಿಜವಾಗಿಯೂ ಅನುಸರಿಸುವವನು, ಈ ಯೋಗ ಮಾರ್ಗದ ಅನುಭವವನ್ನು ಹೊಂದಲು ಪ್ರಾರಂಭಿಸಿದ ತಕ್ಷಣ, ತನ್ನ

ಪ್ರಜ್ಞೆಯನ್ನು ಯಾವುದೇ ದೇವರು ಅಥವಾ ದೇವತೆ ಅಥವಾ ಅವರೆಲ್ಲರನ್ನೂ ಒಟ್ಟಿಗೆ ಆರಾಧನೆಗೆ ಸೀಮಿತಗೊಳಿಸುವುದು ಅಸಾಧ್ಯವೆನ್ನುವುದನ್ನು ಕಂಡುಕೊಳ್ಳುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/254**

ಶ್ರೀಮಾತೆಯವರೆ,

ಶ್ರೀ ಅರಬಿಂದೋ ಅವರ ಅನುಯಾಯಿಗಳು ರಾಮ, ಕೃಷ್ಣ ಮತ್ತು ಇತರ ದೇವರುಗಳನ್ನು ಪೂಜಿಸಬಹುದೇ ಅಥವಾ ಪೂಜಿಸಬಾರದೇ, ಅವರು ಧಾರ್ಮಿಕ ಆಚರಣೆಗಳನ್ನು ಮಾಡಬೇಕೇ ಅಥವಾ ಅವುಗಳನ್ನು ನಿಲ್ಲಿಸಬೇಕೇ ಎಂದು ನನಗೆ ಕೇಳಲಾಗಿದೆ. ಪ್ರತಿಯೊಬ್ಬರೂ ಅನುಸರಿಸಬೇಕಾದ ಯಾವುದೇ ನಿಶ್ಚಿತ ನಿಯಮಗಳನ್ನು ನಾವು ಹೊಂದಿಲ್ಲವೆಂದು ನಾನು ಉತ್ತರಿಸಿದೆ. ಪ್ರತಿಯೊಬ್ಬರೂ ತಮ್ಮಂತರಾಳದಲ್ಲಿ ಅನಿಸಿದ್ದನ್ನು ಮಾಡಬೇಕು. ಯಾರಾದರು ಪ್ರಾಮಾಣಿಕನಾಗಿದ್ದರೆ ಮತ್ತು ಭಗವಂತನ ಸೇವಕನಾಗಲು ಬಯಸಿದರೆ, ಅವರು ಶ್ರೀಮಾತೆಯವರ ಮತ್ತು ಶ್ರೀ ಅರವಿಂದರ ಹೆಸರನ್ನು ತಿಳಿಯದೆಯೂ ಅವರೊಂದಿಗೆ ಒಂದಾಗ–ಬಹುದು, ಏಕೆಂದರೆ ಶ್ರೀಮಾತೆಯವರು ರಾಧೆಯ ರೂಪದಲ್ಲಿ ಅಥವಾ ವರ್ಜಿನ್ ಮೇರಿಯ ರೂಪದಲ್ಲಿ ಅಥವಾ ಹನುಮಂತನ ರೂಪದಲ್ಲಿ ಅವರಿಗೆ ಉತ್ತರಿಸುತ್ತಾರೆ ಎಂದು ಹೇಳಿದೆ. ಇದು ಎಲ್ಲಾ ಪ್ರಾಮಾಣಿಕತೆ ಮತ್ತು ನಂಬಿಕೆಯನ್ನು ಅವಲಂಬಿಸಿದೆ. ವ್ರತಾಚರಣೆಯನ್ನು ಮಾಡಿ ಅಥವಾ ಮಾಡುವುದನ್ನು ತಡೆಯಿರಿ ಎಂದು ನಾವು ಯಾರನ್ನೂ ಕೇಳಿಕೊಳ್ಳುವುದಿಲ್ಲ. ನೀವು ಏನು ಹೇಳುತ್ತೀರಿ?

ಸರಿಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/234** **– ಶ್ರೀಮಾತೆ**

---

**ಭೂಮಿಯ ಮೇಲಿನ ದೇವರು**

ದೇವತ್ವವನ್ನು ಅಭಿವ್ಯಕ್ತಪಡಿಸುವ ಯಾವುದೇ ಸಂಗತಿಯನ್ನು ಜನರು ಎಷ್ಟೊಂದು ಗುರುತಿಸಲು ಇಷ್ಟಪಡುವುದಿಲ್ಲವೆಂದರೆ, ಅವರು ಯಾವಾಗಲೂ ತಪ್ಪುಗಳನ್ನು ಹುಡುಕಲು, ಸ್ಪಷ್ಟವಾದ ದೋಷಗಳನ್ನು ಕಂಡುಹಿಡಿಯಲು ಮತ್ತು ಉನ್ನತ ಮಟ್ಟದಲ್ಲಿರುವುದನ್ನು ತಮ್ಮ ಮಟ್ಟಕ್ಕೆ ಇಳಿಸುವಷ್ಟರಮಟ್ಟಿಗೆ ಎಚ್ಚರವಾಗಿರುತ್ತಾರೆ.

ಯಾವುದೇ ತಪ್ಪುಗಳನ್ನು ಹುಡುಕದೇ ಹೋದಾಗ ಕೋಪಗೊಳ್ಳುತ್ತಾರೆ ಮತ್ತು "ನ್ಯೂನತೆಗಳನ್ನು" ಕಂಡುಹಿಡಿಯುವಲ್ಲಿ ಸಫಲರಾದಾಗ ಬಹಳೇ ಸಂತೋಷ ಪಡುತ್ತಾರೆ. ಆದರೆ ಭೂಮಿಯ ಮೇಲೆ ದೈವೀ ಸಾನಿಧ್ಯವಿದ್ದಾಗ, ಅವರು ಅದನ್ನು ತಮ್ಮ ಒರಟು ಭೌತಿಕ ಮನಸ್ಸಿನಿಂದ ಎದುರಿಸಿದಾಗಲೂ ಸಹ, ಅಸಂಸ್ಕೃತವಾದುದನ್ನೇ ಭೇಟಿಯಾಗಲು ಬದ್ಧರಾಗಿರುತ್ತಾರೆ ಎಂಬುದನ್ನು ಅವರು ಮರೆಯುತ್ತಾರೆ. ತಾವೇನಾಗಿದ್ದೇವೆ ಎನ್ನುವುದನ್ನು ಅವರು ನೋಡಲು ಅಸಮರ್ಥರು ಅಥವಾ ನೋಡಲು ಇಷ್ಟಪಡದಿರುವುದನ್ನು ಅವರು ಆಶಿಸುವುದಿಲ್ಲ. ಅವರು ದೈವೀ ಕ್ರಿಯೆಗಳ ಮೇಲ್ಮೈ ಅಂಶವನ್ನು ಪರಿಗಣಿಸಿದರೆ ಅವರು ದೈವೀ ಶಕ್ತಿಯನ್ನು ತಪ್ಪಾಗಿ ನಿರ್ಣಯಿಸುತ್ತಾರೆ, ಏಕೆಂದರೆ ಮಾನವ ಚಟುವಟಿಕೆಯನ್ನು ಹೋಲುವ ವಿಷಯವು ಸಂಪೂರ್ಣವಾಗಿ ಭಿನ್ನವಾಗಿದೆ ಮತ್ತು ಮಾನವೇತರ ಮೂಲದಿಂದ ಮುಂದುವರಿಯುತ್ತದೆ ಎನ್ನುವುದನ್ನು ಅವರು ಎಂದಿಗೂ ಅರ್ಥಮಾಡಿಕೊಳ್ಳುವುದಿಲ್ಲ.

ಭೂಮಿಯ ಮೇಲೆ ತನ್ನ ಕಾರ್ಯಕ್ಕಾಗಿ ಪ್ರಕಟಗೊಳ್ಳುವ ದೇವರು, ಮನುಷ್ಯರಂತೆ ಕೆಲಸ ಮಾಡುವ ಹಾಗೆ ತೋರುತ್ತದೆ, ಆದರೆ ನಿಜವಾಗಿಯೂ ಹಾಗೆ ಮಾಡುವುದಿಲ್ಲ. ಸ್ಪಷ್ಟವಾದಂತಹ ಮಾನದಂಡಗಳಿಂದ ಅದನ್ನು ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ. ಆದರೆ ಮನುಷ್ಯರು ತಮ್ಮದೇ ಆದ ಕೀಳರಿಮೆಯನ್ನು ಸಂಪೂರ್ಣವಾಗಿ ಪ್ರೀತಿಸುತ್ತಾರೆ ಮತ್ತು ಉನ್ನತವಾದ ಸತ್ಯಕ್ಕೆ ತಮ್ಮನ್ನು ಅರ್ಪಿಸಿಕೊಳ್ಳುವುದನ್ನು ಅಥವಾ ಅದನ್ನು ಒಪ್ಪಿಕೊಳ್ಳುವುದನ್ನು ಸಹಿಸುವುದಿಲ್ಲ. ತಪ್ಪು ಹುಡುಕುವ ಈ ಬಯಕೆಯು, ನಮ್ಮಲ್ಲಿಯ ಏನೋ ಒಂದು ಹೇಳುವುದನ್ನು ಟೀಕಿಸುವ ಮತ್ತು ಸಂದೇಹಿಸುವ ಈ ದುರುದ್ದೇಶಪೂರಿತ ಅನುರಾಗವು ಉನ್ನತ ಸತ್ಯವಾಗಿದೆ, ಮಾನವತೆಯ ಮುದ್ರೆಯಾಗಿದೆ – ಇದು ಕೇವಲ ಮಾನವನೆಂಬ ಮುದ್ರೆಯನ್ನು ಹಾಕುತ್ತದೆ. ಮತ್ತೊಂದೆಡೆ, ನಿಜವಾದ, ಸುಂದರ, ಉದಾತ್ತತೆಯ ಬಗ್ಗೆ ಸ್ವಯಂಪ್ರೇರಿತ ಮೆಚ್ಚುಗೆ ಇರುವಲ್ಲೆಲ್ಲಾ, ದೈವೀಕತೆಯು ವ್ಯಕ್ತವಾಗುತ್ತದೆ. ಏನನ್ನು ದೈವೀ ಮೂಲವೆಂದು ನೀವು ಭಾವಿಸುತ್ತೀರೋ ಅದನ್ನು ಪೂಜಿಸಲು ಮತ್ತು ಮೆಚ್ಚಿಸಲು ನಿಮ್ಮ ಹೃದಯವು ಹಾತೊರೆದಾಗ ನಿಮ್ಮ ಭೌತಿಕ ಪ್ರಜ್ಞೆಯ ಸಂಪರ್ಕಕ್ಕೆ ಬರುವುದು ಚೈತ್ಯ ಪುರುಷ, ನಿಮ್ಮಲ್ಲಿರುವ ಆತ್ಮ ಎಂದು ನೀವು ಖಚಿತವಾಗಿ ತಿಳಿಯಬೇಕು.

ನೀವು ಅಂತಹದ್ದೆಂದು ಭಾವಿಸುವ ಕ್ಷಣದಲ್ಲಿ, ನಿಮ್ಮ ಕಣ್ಣಿನಿಂದ ಆನಂದಭಾಷ್ಪ ಸುರಿಯಬೇಕು. ಆಲೋಚನೆ ಮಾಡುವುದನ್ನು ತಡೆಯುವುದು ಕ್ಷುದ್ರ ಪ್ರಾಣಿಯಾಗಿರುತ್ತದೆ:

"ಹೌದು, ಇದು ಅದ್ಭುತವಾಗಿದೆ ಆದರೆ ಅದು ನನ್ನ ಪಾಲಿಗೆ ಬಂದರೆ, ನಾನು ಈ ಗುಣದ ಸಂತೋಷದ ಮಾಲೀಕರಾಗಿದ್ದರೆ, ಉನ್ನತ ಅಭಿವ್ಯಕ್ತಿಯ ಸಾಧನವಾಗಿದ್ದರೆ, ಅದನ್ನು ಹೊಗಳುವುದು ಯೋಗ್ಯವಾಗಿದೆ." ಪರಮಾತ್ಮನು ತಾನು ಎಲ್ಲಿ ಬೇಕಾದರೂ, ತಾನು ಅರಿಸಿಕೊಂಡ ಯಾವುದೇ ರೀತಿಯಲ್ಲಿ ಪ್ರಕಟಗೊಳ್ಳಬೇಕೆಂಬುದೇ ಮುಖ್ಯ ಗುರಿಯಾಗಿರುವಾಗ ನೀವು ನಿಮ್ಮ ಅಹಂಕಾರದ ಬಗ್ಗೆ ಏಕೆ ಚಿಂತಿಸಬೇಕು? ಅದು ಹಾಗೆ ವ್ಯಕ್ತವಾದಾಗ ನೀವು ಸಂಪೂರ್ಣ ತೃಪ್ತಿಯನ್ನು ಅನುಭವಿಸಬೇಕು, ನೀವು ನಿಮ್ಮ ದುರ್ಬಲ ವ್ಯಕ್ತಿತ್ವದ ಸಂಕುಚಿತ ಬಂಧನಗಳನ್ನು ಒಡೆದು, ನಿಷ್ಕಾಮ ಸುಖದಲ್ಲಿ ಎತ್ತರಕ್ಕೆ ಏರಲು ಸಾಧ್ಯವಾಗುವುದು. ಈ ಸಂತೋಷವು ನಿಮ್ಮ ಆತ್ಮವು ಜಾಗೃತಗೊಂಡಿದೆ ಮತ್ತು ಸತ್ಯವನ್ನು ಗ್ರಹಿಸಿದೆ ಎಂಬುದಕ್ಕೆ ನಿಜವಾದ ಸಂಕೇತವಾಗಿದೆ. ಆಗ ಮಾತ್ರ ನೀವು ಅವರೋಹಣವಾಗುತ್ತಿರುವ ಸತ್ಯದ ಪ್ರಭಾವಕ್ಕೆ ತೆರೆದುಕೊಳ್ಳಬಹುದು ಮತ್ತು ಅದರಿಂದ ರೂಪುಗೊಳ್ಳಬಹುದು. ಮಕ್ಕಳು, ಶಿಶುಗಳೂ ಸಹ ದೈವಿಕವಾಗಿ ಸುಂದರವಾದ ಮತ್ತು ಸರಳವಾದ ಏನನ್ನಾದರೂ ಮಾಡುವುದನ್ನು ನೋಡಿದಾಗ ನಾನು ಕಣ್ಣೀರು ಹಾಕಿದ ಸಂದರ್ಭಗಳನ್ನು ನಾನು ನೆನಪಿಸಿಕೊಳ್ಳುತ್ತೇನೆ. ಆ ಸಂತೋಷವನ್ನು ಅನುಭವಿಸಿ ಮತ್ತು ನಿಮ್ಮ ಮಧ್ಯದಲ್ಲಿರುವ ದೈವೀ ಉಪಸ್ಥಿತಿಯಿಂದ ನೀವು ಲಾಭ ಪಡೆಯಲು ಸಾಧ್ಯವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/158–59**

### ವಿಗ್ರಹಗಳು ಮತ್ತು ಪೂಜೆ

*ಆದರೆ ಈ ವಿಗ್ರಹಗಳು ಕೇವಲ ಮಾನವ ಸೃಷ್ಟಿಯಲ್ಲವೇ? ಅವುಗಳು ತಮ್ಮಲ್ಲಿ ಏನಾದರೂ ಅಸ್ತಿತ್ವವನ್ನು (ಜೀವಂತಿಕೆಯನ್ನು) ಹೊಂದಿವೆಯೇ?*

ಯಾವುದೇ ಚಿತ್ರವಿರಲಿ – ನಾವು ಯಾವುದನ್ನು ವಿಗ್ರಹವೆಂದು ತಿರಸ್ಕಾರಪೂರ್ಣವಾಗಿ ಕರೆಯುತ್ತೇವೆಯೋ – ಆ ದೇವತೆಯ ಬಾಹ್ಯ ರೂಪ ಏನೇ ಇರಲಿ, ಅದು ನಮ್ಮ ಭೌತಿಕ ಕಣ್ಣಿಗೆ ಕುರೂಪ ಅಥವಾ ಸಾಮಾನ್ಯ ಅಥವಾ ಭಯಾನಕ, ಒಂದು ವ್ಯಂಗ್ಯ ಚಿತ್ರವಾಗಿ ತೋರಿದರೂ, ಅದು ಪ್ರತಿನಿಧಿಸುವ ವಸ್ತುವಿನ ಉಪಸ್ಥಿತಿಯು ಯಾವಾಗಲೂ ಅದರಲ್ಲಿರುತ್ತದೆ. ಶಕ್ತಿಯನ್ನು ಹೊಂದಿದವರು ಮತ್ತು ಅದನ್ನು ಸೆಳೆಯುವಂಥ – ಒಳಗಿರುವ ಉಪಸ್ಥಿತಿಯನ್ನು, ಬಲವನ್ನು ಸೆಳೆಯುವಂಥ ಒಬ್ಬ ಪುರೋಹಿತನಾಗಲಿ ಅಥವಾ ದೀಕ್ಷೆಯನ್ನು ಹೊಂದಿದವನಾಗಲಿ ಅಥವಾ ಒಬ್ಬ ಸಾಧು, ಒಬ್ಬ ಸನ್ಯಾಸಿಯಾಗಲಿ,

ಅಥವಾ ಯಾರೊಬ್ಬರಾಗಲಿ ಯಾವಾಗಲೂ ಅಲ್ಲಿರುತ್ತಾರೆ. ಮತ್ತು ಅದು ಸತ್ಯವಾದ ಸಂಗತಿ: ಶಕ್ತಿ ಅಲ್ಲಿರುವುದು ನಿಜ, ಅದರ ಉಪಸ್ಥಿತಿ ಅಲ್ಲಿರುವುದು ಸತ್ಯ; ಅದು, ಜನರು ಪೂಜಿಸುವ ಮರ ಅಥವಾ ಕಲ್ಲು ಅಥವಾ ಲೋಹದ ರೂಪವಲ್ಲ – ಅದು (ದೇವರ) ನಿಜ ಉಪಸ್ಥಿತಿಯಾಗಿದೆ.

ಆದರೆ ಯುರೋಪಿನ ಜನರಿಗೆ ಈ ಆಂತರಿಕ ಭಾವವಿಲ್ಲ, ಇಲ್ಲವೇ ಇಲ್ಲ. ಅವರಿಗೆ ಎಲ್ಲವೂ ಮೇಲೆ ತೋರುವಂಥ ಸಂಗತಿಯಾಗಿದೆ – ಅದೂ ಸಹ ಅಲ್ಲ, ಹಿಂದೆ ಏನೂ ತಿರುಳಿಲ್ಲದ ಸತ್ವರಹಿತ ಹೊರ ಚಿತ್ರವಾಗಿ ತೋರುತ್ತದೆ – ಆದ್ದರಿಂದ ಅವರು ಅದನ್ನು ಅನುಭವಿಸಲಾರರು. ವಾಸ್ತವವೇನೆಂದರೆ, ಆ ದೇವರ ಉಪಸ್ಥಿತಿಯು ಅಲ್ಲಿರುವುದು ನಿಜ; ಅದು ಸಂಪೂರ್ಣ ಸತ್ಯ ಸಂಗತಿ, ನಾನು ಅದನ್ನು ಖಾತರಿಪಡಿಸುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/95**

**ದೇವರು ಮತ್ತು ದೇವತೆಗಳ ವಿಗ್ರಹಗಳು ಮತ್ತು ರೂಪಗಳು**

*ಆದರೆ ಈ ವಿಗ್ರಹಗಳು ಕೇವಲ ಮಾನವ ಸೃಷ್ಟಿಗಳಲ್ಲ – ಅವುಗಳು ಸ್ವಯಂ ಅಸ್ತಿತ್ವವುಳ್ಳವು, ಅಲ್ಲವೇ?*

ಓಹ್, ಜನರು ಯೋಚಿಸುವ ಮತ್ತು ಅದರ ಬಗ್ಗೆ ಅನುಭವಿಸುವ ರೀತಿಯಲ್ಲಿ, ಈ ಅಂಶಕ್ಕೆ ಸಂಬಂಧಪಟ್ಟಂತೆ, ನಾನು ಕೆಲವು ರೋಚಕವಾದ ದಿವ್ಯ ದರ್ಶನಗಳನ್ನು ಹೊಂದಿದ್ದೇನೆ. ಒಮ್ಮೆ ಯಾರೋ ಶ್ರೀ ಅರವಿಂದರ ಸಣ್ಣ ಪ್ರತಿಮೆಯನ್ನು ಮಾಡಿದ್ದು ನನಗೆ ನೆನಪಿದೆ; ಆ ಪ್ರತಿಮೆಯಲ್ಲಿ ಡೊಳ್ಳು ಹೊಟ್ಟೆಯನ್ನು ತೋರಿಸಲಾಗಿತ್ತು ... ಅದೇನೆ ಇರಲಿ, ಆ ಮೂರ್ತಿಯು ನನಗೆ ಹಾಸ್ಯಾಸ್ಪದವಾಗಿ ಕಂಡಿತು. ಮೂರ್ತಿಯಲ್ಲಿ ಇಂತಹ ಒಂದು ಸಂಗತಿಯನ್ನು ನೀವು ಹೇಗೆ ತೋರಿಸಬಹುದು ಎಂದು ನಾ ಹೇಳಿದೆ. ಆ ಆಕೃತಿಯು ನೀನು ದೇವರೆಂದು ಅಥವಾ ಅವತಾರವೆಂದು ಪರಿಗಣಿಸುವ ಪುರುಷನಾಗಿದ್ದರಿಂದ, ಆ ಆಕೃತಿಯು ನೀನು ಪೂಜೆ ಮಾಡುವ ಪುರುಷನಾಗಿದ್ದರಿಂದ, ಆ ಆಕೃತಿಯು ಆತನ ಇರುವಿಕೆಯ ಚೈತನ್ಯವನ್ನು ಹಾಗೂ ಶಕ್ತಿಯನ್ನು ಹೊಂದಿರುತ್ತದೆ. ನಿನ್ನ ಸಾಮಾನ್ಯ ಅಥವಾ ಭೌತಿಕ ಕಣ್ಣಿಗೆ ಆ ಆಕೃತಿಯು ವ್ಯಂಗ ಚಿತ್ರವಾಗಿ ಕಂಡರೂ ಸಹ, ಅದು ಒರಟಾದ ರೂಪದಲ್ಲಿದ್ದರೂ ಸಹ, ನೀನು ಪೂಜಿಸುತ್ತಿರುವುದನ್ನು ಇದನ್ನೇ ಎಂದು ಅವನು ವಿವರಣೆ ನೀಡಿದ.

ಯಾರೋ ಒಬ್ಬರು ಶ್ರೀ ಅರಬಿಂದೋ ಮತ್ತು ನನ್ನ ದೊಡ್ಡ ವರ್ಣಚಿತ್ರವನ್ನು ಮಾಡಿ ಅದನ್ನು ನನಗೆ ತೋರಿಸಲು ಇಲ್ಲಿಗೆ ತಂದರು. 'ಓಹ್, ಇದು ಭಯಾನಕವಾಗಿದೆ!' ಅದು... ಭೌತಿಕ ಕಣ್ಣಿಗೆ ನಿಜಕ್ಕೂ ಭಯಾನಕವಾಗಿತ್ತು ಎಂದು ನಾ ಹೇಳಿದೆ. ಇದು ಭಯಾನಕವಾಗಿದೆ, ನಾವು ಅದನ್ನು ಇರಿಸಿಕೊಳ್ಳಲು ಸಾಧ್ಯವಿಲ್ಲ ಎಂದು ನಾನು ಹೇಳಿದೆ. ನಾನು ಅದನ್ನು ನನ್ನ ಮನೆಯಲ್ಲಿ ಇಟ್ಟು ಅದರ ಮುಂದೆ ಕುಳಿತು ನನ್ನ ಪೂಜೆಯನ್ನು ಮಾಡುತ್ತೇನೆ ಎಂದು ಹೇಳುತ್ತ ತಕ್ಷಣವೇ ಆ ವರ್ಣಚಿತ್ರಕ್ಕಾಗಿ ನನಗೆ ಕೇಳಿಕೊಂಡರು. ಆಹ್, ಆದರೆ ಅದನ್ನು ಆ ರೀತಿ ಹೇಗೆ ಇಡುವಿರಿ! (ಆ ವರ್ಣಚಿತ್ರವು ಭೀಕರವಾಗಿ ಜೀರ್ಣವಾದಷ್ಟು ರೂಪಹೀನವಾಗಿರಲಿಲ್ಲ) ಎಂದು ಹೇಳಲು ನನಗಾಗಲಿಲ್ಲ. ಈ ರೀತಿಯ ನೀರಸ ಹಾಗೂ ಬರಿದಾದ ವಸ್ತುವಿನ ಮುಂದೆ ನೀವು ಪೂಜೆಯನ್ನು ಹೇಗೆ ಮಾಡಬಹುದು?! ಈ ವ್ಯಕ್ತಿ ಉತ್ತರಿಸಿದ, 'ಓಹ್, ನನಗೆ ಇದು ಖಾಲಿ ಅಥವಾ ಬರಿದಾದ ವಸ್ತುವಲ್ಲ! ಇದು ಎಲ್ಲಾ ಚೇತನವನ್ನು ಮತ್ತು ಎಲ್ಲಾ ಶಕ್ತಿಯನ್ನು ಒಳಗೊಂಡಿದೆ, ಮತ್ತು ನಾನು ಅದನ್ನು ಆರಾಧಿಸುತ್ತೇನೆ: ಚೇತನ ಮತ್ತು ಶಕ್ತಿಯನ್ನು.

ಮೂರ್ತರೂಪ ಯಾವುದೇ ಇರಲಿ – ದೇವರ ಬಾಹ್ಯ ಸ್ವರೂಪ ಯಾವುದೇ ಇರಬಹುದು – ನಾವು ಯಾವುದನ್ನು ತಿರಸ್ಕಾರಪೂರ್ಣವಾಗಿ ವಿಗ್ರಹವೆಂದು ಕರೆಯುತ್ತೇವೆಯೋ, ಅದನ್ನು ಪ್ರತಿನಿಧಿಸುವ ಸಂಗತಿಯ ಉಪಸ್ಥಿತಿಯು ಯಾವಾಗಲೂ ಅಲ್ಲಿರುತ್ತದೆ ಎನ್ನುವ ಸಂಗತಿಗಳು ಹಳೆಯ ಕಲ್ಪನೆಯನ್ನು ಆಧರಿಸಿದೆ. ಶಕ್ತಿಯನ್ನು ಹೊಂದಿದವರು ಮತ್ತು ಅದನ್ನು ಸೆಳೆಯುವಂಥ – ಒಳಗಿರುವ ಉಪಸ್ಥಿತಿಯನ್ನು, ಬಲವನ್ನು ಸೆಳೆಯುವಂಥ ಒಬ್ಬ ಪುರೋಹಿತನಾಗಲಿ ಅಥವಾ ದೀಕ್ಷೆಯನ್ನು ಹೊಂದಿದವನಾಗಲಿ ಅಥವಾ ಒಬ್ಬ ಸಾಧು, ಒಬ್ಬ ಸನ್ಯಾಸಿಯಾಗಲಿ, ಅಥವಾ ಯಾರೊಬ್ಬರಾಗಲಿ ಯಾವಾಗಲೂ ಅಲ್ಲಿರುತ್ತಾರೆ. ಮತ್ತು ಅದು ಸತ್ಯವಾದ ಸಂಗತಿ: ಶಕ್ತಿ ಅಲ್ಲಿರುವುದು ನಿಜ, ಅದರ ಉಪಸ್ಥಿತಿ ಅಲ್ಲಿರುವುದು ಸತ್ಯ; ಅದು, ಜನರು ಪೂಜಿಸುವ ಮರ ಅಥವಾ ಕಲ್ಲು ಅಥವಾ ಲೋಹದ ರೂಪವಲ್ಲ – ಅದು (ದೇವರ) ನಿಜ ಉಪಸ್ಥಿತಿಯಾಗಿದೆ.

ಯುರೋಪಿನ ಜನರಿಗೆ ಈ ಆಂತರಿಕ ಭಾವನೆಯೇ ಇಲ್ಲ. ಅವರಿಗೆ ಎಲ್ಲವೂ ಈ ರೀತಿಯಾಗಿರುತ್ತದೆ (ಸನ್ನೆ) – ಎಲ್ಲವೂ ಒಂದು ತೋರಿಕೆಯಾಗಿರುತ್ತದೆ – ಅದೂ ಕೂಡ ಅಲ್ಲ, ಅದು ತೋರಿಕೆಯ ಮೇಲಿನ ಲೇಪ. ಅದರ ಹಿಂದೆ ಇರುವ ಯಾವುದನ್ನೂ ಅವರು ಅನುಭವಿಸಲಾರರು. ಆದರೆ ದೈವೀ ಉಪಸ್ಥಿತಿ ಅಲ್ಲಿರುವುದು

ಸಂಪೂರ್ಣ ಸತ್ಯವಾದ ಸಂಗತಿ – ನಾನು ಅದನ್ನು ಖಾತರಿಪಡಿಸುತ್ತೇನೆ. ಜನರು ನನಗೆ ವಿವಿಧ ದೇವರುಗಳ ಪ್ರತಿಮೆಗಳನ್ನು ನೀಡಿದ್ದಾರೆ, ಲೋಹ, ಮರ ಅಥವಾ ದಂತದ ಸಣ್ಣ ವಸ್ತುಗಳನ್ನು ನೀಡಿದ್ದಾರೆ; ನಾನು ನನ್ನ ಕೈಯಲ್ಲಿ ಒಂದನ್ನು ತೆಗೆದುಕೊಂಡ ತಕ್ಷಣ, ಅವುಗಳಲ್ಲಿ ದೇವನ ಉಪಸ್ಥಿತಿಯ ಅನುಭವ ನನಗಾಗುತ್ತದೆ. ನನ್ನ ಬಳಿ ಗಣಪತಿಯ ಒಂದು ವಿಗ್ರಹವಿದೆ (ಅಂತಹ ಹಲವಾರು ವಿಗ್ರಹಗಳನ್ನು ನನಗೆ ಕೊಟ್ಟಿದ್ದಾರೆ) ಮತ್ತು ನಾನು ಅದನ್ನು ನನ್ನ ಕೈಯಲ್ಲಿ ತೆಗೆದುಕೊಂಡು ಒಂದು ಕ್ಷಣ ನೋಡಿದರೆ, ಅಲ್ಲಿ ಸಾಕ್ಷಾತ್ ಗಣಪತಿಯ ಉಪಸ್ಥಿತಿ ಇರುತ್ತದೆ. ನಾನು ಕೆಲಸ ಮಾಡುವ, ಊಟ ಮಾಡುವ ಮತ್ತು ಧ್ಯಾನ ಮಾಡುವ ಕೋಣೆಯಲ್ಲಿನ ನನ್ನ ಹಾಸಿಗೆಯ ಪಕ್ಕದಲ್ಲಿ ಒಂದು ಚಿಕ್ಕ ಗಣಪನ ವಿಗ್ರಹವಿದೆ. ತದನಂತರ ಹಿಮಾಲಯದಿಂದ ಬದರಿನಾಥದಿಂದ ಬರುವ ನಾರಾಯಣನಿದ್ದಾನೆ. ನಾನು ಅವೆರಡೂ ವಿಗ್ರಹಗಳನ್ನು ನನ್ನ ಕರವಸ್ತ್ರಕ್ಕಾಗಿ ಪೇಪರ್ ವೇಟ್‌ಗಳನ್ನಾಗಿ ಬಳಸುತ್ತೇನೆ! ನನ್ನ ಹಾಸಿಗೆಯ ಪಕ್ಕದ ಪುಟ್ಟ ಮೇಜಿನ ಮೇಲೆ ನನ್ನ ಕರವಸ್ತ್ರಗಳನ್ನು ಇಡಲಾಗಿದೆ, ಮತ್ತು ನಾನು ಗಣಪತಿಯ ಹಾಗೂ ನಾರಾಯಣನ ವಿಗ್ರಹಗಳನ್ನು ಅವುಗಳ ಮೇಲೆ ಇಡುತ್ತೇನೆ. ನನ್ನನ್ನು ಹೊರತುಪಡಿಸಿ ಯಾರೂ ಆ ವಿಗ್ರಹಗಳನ್ನು ಮುಟ್ಟುವುದಿಲ್ಲ – ಅವುಗಳನ್ನು ಎತ್ತಿ ಸ್ವಚ್ಛವಾದ ಕರವಸ್ತ್ರಗಳ ಮೇಲೆ ಮತ್ತೆ ಇಡುತ್ತೇನೆ. ಒಮ್ಮೆ ನಾನೇ ಒಂದಿಷ್ಟು ಉಗುರಿಗೆ ಹಚ್ಚುವ ಬಣ್ಣವನ್ನು ಕಲಸಿದೆ, ಅದನ್ನು ಹಚ್ಚಿಕೊಳ್ಳುವ ಮೊದಲು, ಅದನ್ನು ಗಣಪತಿಯ ಹಣೆಯ ಮೇಲೆ, ಹೊಟ್ಟೆಯ ಮೇಲೆ ಮತ್ತು ಬೆರಳಿನ ತುದಿಗೆ ಸ್ವಲ್ಪ ಹಚ್ಚಿದೆ! ನಮ್ಮ ನಡುವೆ ಉತ್ತಮ ಬಾಂಧವ್ಯವಿದೆ ಮತ್ತು ತುಂಬಾ ಸ್ನೇಹಪರರಾಗಿದ್ದೇವೆ. ಆದ್ದರಿಂದ ನನಗೆ ಇದೆಲ್ಲವೂ ತುಂಬಾ ನಿಜವಾದ ಸಂಗತಿಯಾಗಿದೆ.

ಮೊದಲಿಗೆ ನಾರಾಯಣ (ವಿಗ್ರಹ) ಮಾತ್ರ ಬಂದ. ನೀನು ಇಲ್ಲಿರು ಮತ್ತು ಆನಂದದಿಂದ ಇರು ಎಂದು ಹೇಳಿ ಆತನನ್ನು ಅಲ್ಲಿ ಇರಿಸಿದೆ. ಸ್ವಲ್ಪ ಸಮಯದ ನಂತರ, ನನಗೆ ಬಹಳ ಸುಂದರವಾದ ಗಣಪತಿಯ ವಿಗ್ರಹವನ್ನು ನೀಡಲಾಯಿತು; ಗಣಪತಿಯನ್ನು ನಾರಾಯಣನ ಪಕ್ಕದಲ್ಲಿರಿಸಲು ಆತನ ಅನುಮತಿಯನ್ನು ಕೇಳಲಿಲ್ಲ – ನಿನಗೊಬ್ಬ ಸಂಗಾತಿಯನ್ನು ಕೊಡುವವನಿದ್ದೇನೆ ಸಿಟ್ಟಾಗಬೇಡ ಎಂದು ನಾರಾಯಣನಿಗೆ ಹೇಳಿದೆ; ನಿಮ್ಮಿಬ್ಬರನ್ನೂ ನಾನು ಬಹಳೇ ಇಷ್ಟ ಪಡುತ್ತೇನೆ, ಆಯ್ಕೆ ಎನ್ನುವುದು ಅಲ್ಲಿಲ್ಲ; ಇನ್ನೊಂದು ವಿಗ್ರಹವು ನೋಡಲು ಹೆಚ್ಚು ಚೆನ್ನಾಗಿದೆ, ಆದರೆ ನೀನು, ನೀನು ನಾರಾಯಣ! ನಾನು ಅವನನ್ನು ಹೊಗಳಿದೆ, ನಾನು ಅವನಿಗೆ ಆಹ್ಲಾದಕರ ವಿಷಯಗಳನ್ನು ಹೇಳಿದೆ ಮತ್ತು ಅವನು ಬಹಳೇ ಸಂತೋಷಪಟ್ಟನು.

ಇದು ನನಗೆ ಯಾವಾಗಲೂ, ಅಂದರೆ ಯಾವಾಗಲೂ ಹಾಗೆಯೇ ಇದೆ. ನಾನು ಯಾವತ್ತಿಗೂ ಧಾರ್ಮಿಕ ಪ್ರಜ್ಞೆಯನ್ನು ಹೊಂದಿರಲಿಲ್ಲ – ನಿನಗೆ ಗೊತ್ತೆ. ಈ ರೀತಿಯಾಗಿರುವುದನ್ನು ಜನರು ಏನೆಂದು ಕರೆಯುತ್ತಾರೆ ... ಅವರ ಧರ್ಮಗಳಲ್ಲಿ ಏನಿದೆಯೋ, ವಿಶೇಷವಾಗಿ ಯುರೋಪನಲ್ಲಿ. ನಾನು ಅದರ ಇಂಗ್ಲೀಷ್ ಪದವನ್ನು ಮಾತ್ರ ನೋಡುತ್ತೇನೆ: ಭಯ, ಒಂದು ರೀತಿಯ ಹೆದರಿಕೆಯಂತೆ. ಇದು ಯಾವಾಗಲೂ ನನ್ನನ್ನು ನಗುವಂತೆ ಮಾಡಿತು! ಆದರೆ ಅದರ ಹಿಂದೆ ಇರುವುದನ್ನು, ಹಿಂದೆ ಇರುವ ಉಪಸ್ಥಿತಿಗಳನ್ನು ನಾನು ಯಾವಾಗಲೂ ಅನುಭವಿಸಿದ್ದೇನೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 29 ಏಪ್ರಿಲ್, 1961**

**ಪೂಜೆಯ ಮೂರು ಅಂಶಗಳು**

*"ದೈವೀ ಪ್ರೀತಿ ಮತ್ತು ಆರಾಧನೆಯ ಪೂರ್ಣ ಕ್ರಿಯೆಯು, ಪೂರ್ಣತೆಯ ಅಭಿವ್ಯಕ್ತಿಗಳಾದಂಥ ಮೂರು ಅಂಶಗಳನ್ನು ಅದರಲ್ಲಿ ಹೊಂದಿದೆ ಎಂದು ಹೇಳಬಹುದು, – ಆ ಮೂರು ಅಂಶಗಳು ಯಾವವೆಂದರೆ: (1) ಕಾರ್ಯದಲ್ಲಿ ದೇವರ ಒಂದು ವಾಸ್ತವಿಕ ಪೂಜೆ, (2) ದೂರದೃಷ್ಟಿ ಹಾಗೂ ಅನ್ವೇಷಣೆ ಅಥವಾ ದೇವರೊಂದಿಗಿನ ಸಂಬಂಧವನ್ನು ವ್ಯಕ್ತಪಡಿಸುವ ಕ್ರಿಯೆಯ ರೂಪದಲ್ಲಿ ಒಂದು ಆರಾಧನೆಯ ಸಂಕೇತ, ಮತ್ತು (3) ಆಂತರಿಕ ಆರಾಧನೆ ಮತ್ತು ಏಕತೆಗಾಗಿ ಹಾತೊರೆಯುವಿಕೆ ಅಥವಾ ಹೃದಯ ಮತ್ತು ಆತ್ಮದಲ್ಲಿ ಒಂದು ಏಕತೆಯ ಭಾವನೆ."*

**ಶ್ರೀ ಅರವಿಂದರು, ಯೋಗ ಸಮನ್ವಯ, SABCL (ಶ್ರೀ ಅರವಿಂದೋ ಜನ್ಮ ಶತಾಬ್ದಿ ಗ್ರಂಥಾಲಯ) ಸಂಪುಟ 20, ಪುಟ 152–53**

*ಮೊದಲಿನ ಎರಡು ಭಾಗಗಳು ನನಗೆ ಸರಿಯಾಗಿ ಅರ್ಥವಾಗಲಿಲ್ಲ.*

ಅದು ಆಟದ ಒಂದು ಸಂಪೂರ್ಣ ಭೌತಿಕ ಸ್ವರೂಪವಾಗಿದೆ. ಹೇಗೆಂದರೆ, ಆಚಾರ ಸಂಪ್ರದಾಯಗಳಲ್ಲಿರುವಂತೆ ಸಮರ್ಪಣೆಯನ್ನು ವ್ಯಕ್ತಪಡಿಸಲು ಉದ್ದೇಶಿಸಲಾದ ಒಂದು ನಿರ್ದಿಷ್ಟವಾದ ಸಂಕೇತ, ಒಂದು ನಿರ್ದಿಷ್ಟವಾದ ಚಲನೆ ಇದ್ದಂತೆ. ಅದು ಸಂಪೂರ್ಣವಾಗಿ ಭೌತಿಕವಾಗಿದೆ, ಉದಾಹರಣೆಗೆ, ಧೂಪವನ್ನು ಬೆಳಗಿಸುವುದು, ನೈವೇದ್ಯಗಳನ್ನು ಏರ್ಪಡಿಸುವುದು, ಅಥವಾ ದೇವಸ್ಥಾನವನ್ನು ನೋಡಿಕೊಳ್ಳುವುದು,

ವಿಗ್ರಹವನ್ನು ಅಲಂಕರಿಸುವುದು, ವಾಸ್ತವವಾಗಿ ಅಂತಹ ಎಲ್ಲಾ ಸಂಪೂರ್ಣವಾಗಿ ಭೌತಿಕ ಕ್ರಿಯೆಗಳು.

ಎರಡನೆಯ ಭಾಗವು ಒಂದು ರೀತಿಯ ಮಾನಸಿಕ ಸಮರ್ಪಣೆಯಾಗಿದೆ, ಅದು ನಿರ್ವಹಿಸಿದ ಕ್ರಿಯೆಯನ್ನು ಸಂಕೇತವನ್ನಾಗಿ ಮಾಡುತ್ತದೆ. ಕೇವಲ ಧೂಪವನ್ನು ಬೆಳಗಿಸುವುದರಿಂದ ನಾವು ತೃಪ್ತರಾಗುವುದಿಲ್ಲ, ಆದರೆ ಧೂಪವನ್ನು ಬೆಳಗಿಸುವಾಗ ನಾವು ಈ ಸೂಚಕವನ್ನು ಸಾಂಕೇತಿಕವಾಗಿ ಮಾಡುತ್ತೇವೆ – ಉದಾಹರಣೆಗೆ, ದೇಹದಲ್ಲಿ ಜ್ವಲಿಸುತ್ತಿರುವ ಆಸೆಯ ಅಥವಾ ವಿಘಟನೆಯಲ್ಲಿ, ಅಗ್ನಿಯನ್ನು ಶುದ್ಧೀಕರಿಸುವಲ್ಲಿ ಸ್ವಯಂ–ಸಮರ್ಪಣೆ. ಅಂದರೆ, ಮೊದಲು ಕಾರ್ಯ, ನಂತರ ಈ ಕಾರ್ಯದಲ್ಲಿನ ಸಂಕೇತ ಮತ್ತು ಮಾಡಿದ್ದ ಕಾರ್ಯದ ಸಾಂಕೇತಿಕ ತಿಳುವಳಿಕೆ.

ಮತ್ತು ಕೊನೆಯದಾಗಿ, ಈ ಎರಡರ ಹಿಂದೆ ಇರುವುದು, ಒಂದಾಗುವಿಕೆಗಾಗಿ ಅಭೀಪ್ಸೆ; ಈ ಕಾರ್ಯಗಳು ಮತ್ತು ನೀವು ಮಾಡುವ ಸಂಕೇತವು ದೇವರಿಗೆ ಹೆಚ್ಚು ಹತ್ತಿರವಾಗಲು ಮತ್ತು ಆತನೊಂದಿಗೆ ಒಂದಾಗಲು ನಿಮ್ಮನ್ನು ನೀವು ಯೋಗ್ಯರನ್ನಾಗಿ ರೂಪಿಸಿಕೊಳ್ಳಲು ಒಂದು ಸಾಧನ ಮಾತ್ರವಾಗಿರಬಹುದು.

ಕ್ರಿಯೆಯು ಪೂರ್ಣಗೊಳ್ಳಲು ಈ ಮೂರು ವಿಷಯಗಳು ಅಲ್ಲಿರಲೇಬೇಕು: ಅಂದರೆ, ಒಂದಷ್ಟು ಶುದ್ಧ ಭೌತಿಕವಾದ್ದು, ಒಂದಷ್ಟು ಮಾನಸಿಕವಾದದ್ದು ಮತ್ತು ಒಂದಷ್ಟು ಅತೀಂದ್ರಿಯ ಅಭೀಪ್ಸೆ. ಈ ಮೂರರಲ್ಲಿ, ಒಂದು ವಿಷಯವಿದ್ದು, ಇನ್ನೆರಡು ವಿಷಯಗಳು ಇಲ್ಲದೇಹೋದರೆ, ಅದು ಅಪೂರ್ಣವಾಗಿರುತ್ತದೆ. ನಿಯಮದಂತೆ, ಬಹಳ ಅಪರೂಪವಾಗಿ ಈ ಮೂರು ವಿಷಯಗಳು ಪ್ರಜ್ಞಾಪೂರ್ವಕವಾಗಿ ಒಂದುಗೂಡುತ್ತವೆ. ಅದು ಅಸಾಧಾರಣ ಪ್ರಾಮಾಣಿಕತೆ ಮತ್ತು ಪವಿತ್ರತೆಯ ಪುರುಷರನ್ನು ಉತ್ಪಾದಿಸುತ್ತದೆ: ತನ್ನೆಲ್ಲ ಅಂಶಗಳಲ್ಲಿ ಸಮಗ್ರವಾದ, ಕ್ರಿಯೆಯಲ್ಲಿ ಭಾಗವಹಿಸುವಂಥ ಪುರುಷರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/234–35**

## ದೇವರು ಮತ್ತು ದೇವತೆಗಳ ಆಕೃತಿಗಳು

ನಾನು ಇಂತಹ ಕೆಲವು ರೂಪಗಳನ್ನು ಪ್ರಾಣಿಕ ಮತ್ತು ಬೌದ್ಧಿಕ ಜಗತ್ತಿನಲ್ಲಿ ನೋಡಿದ್ದೇನೆ, ಅವುಗಳು ನಿಜವಾಗಿಯೂ ಮಾನವ ರಚನೆಯಾಗಿವೆ. ಆಚೆಯಿಂದ ಪ್ರಕಟವಾಗುಂಥ ಶಕ್ತಿಯೊಂದು ಅಲ್ಲಿದೆ. ಆದರೆ ಮಿಥ್ಯೆಯ ಈ ತ್ರಿವಳಿ ಪ್ರಪಂಚಗಳಲ್ಲಿ,

ಮನುಷ್ಯನು ನಿಜವಾಗಿಯೂ ದೇವರನ್ನು ತನ್ನದೇ ಆದ ರೂಪದಲ್ಲಿ ಸೃಷ್ಟಿಸಿದ್ದಾನೆ – ಹೆಚ್ಚು ಕಡಿಮೆ – ಮತ್ತು ಮನುಷ್ಯನ ರೂಪಿಸುವಿಕೆಯ ಚಿಂತನೆಯ ಪರಿಣಾಮದ ರೂಪಗಳಲ್ಲಿ ಪ್ರಕಟವಾಗುವ ಪುರುಷರಿದ್ದಾರೆ. ಮತ್ತೆ ಇಲ್ಲಿ ನೋಡಿ, ಇದು ನಿಜವಾಗಿಯೂ ಭಯಾನಕವಾಗಿದೆ! ನಾನು ಈ ಕೆಲವು ರಚನೆಗಳನ್ನು ನೋಡಿದ್ದೇನೆ ... (ಮೌನ) ಮತ್ತು ಇದೆಲ್ಲವೂ ತುಂಬಾ ಅಸ್ಪಷ್ಟವಾಗಿದೆ, ತುಂಬಾ ಗ್ರಹಿಸಲಾಗದ, ವಿವರಿಸಲಾಗದ ವಿಷಯವಾಗಿದೆ...

ಕೆಲವು ದೇವರುಗಳನ್ನು ಇತರ ದೇವರುಗಳಿಗಿಂತ ಹೆಚ್ಚು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತದೆ. ಉದಾಹರಣೆಗೆ, ಪಾಪ, ಆ ಮಹಾಕಾಳಿ, ಅವಳಿಗೆ ಏನೆಲ್ಲಾ ಮಾಡಲಾಗಿದೆ ಎಂದು ಗೊತ್ತೆ!... ಅದು ತುಂಬಾ ಭಯಾನಕವಾಗಿದೆ, ಊಹಿಸಲೂ ಸಾಧ್ಯವಿಲ್ಲ! ಆದರೆ ಈ ರೂಪವು ಅತ್ಯಂತ ನಿಮ್ನ ಜಗತ್ತಿನಲ್ಲಿ ಮಾತ್ರವಿರುತ್ತದೆ ... ಹೌದು, ಅತ್ಯಂತ ಕೆಳಮಟ್ಟದ ಪ್ರಾಣಿಕ ಜಗತ್ತಿನಲ್ಲಿ; ಅದು ಮೂಲ ಪುರುಷನಲ್ಲಿಯ (ಜೀವಿಯಲ್ಲಿಯ) ಏನನ್ನು ಹೊಂದಿದೆ ಎಂದರೆ ... ಅದು ಗುರುತಿಸಲಾಗದಷ್ಟು, ಮೂಲ ಪುರುಷನ ರೂಪದಿಂದ ಅತಿ ದೂರದಲ್ಲಿರುವ ಒಂದು ಪ್ರತಿಬಿಂಬ. ಆದಾಗ್ಯೂ, ಸಾಮಾನ್ಯವಾಗಿ, ಇದು ಮಾನವ ಪ್ರಜ್ಞೆಯಿಂದ ಆಕರ್ಷಿತವಾಗುತ್ತಿರುವುದಾಗಿದೆ. ಯಾವಾಗ ಒಂದು ವಿಗ್ರಹವನ್ನು ಮಾಡಲಾಗುತ್ತದೆಯೋ, ಮತ್ತು ಅರ್ಚಕನು ಅದಕ್ಕೆ ಒಂದು ರೂಪವನ್ನು ಕೊಡುತ್ತಾನೋ – ಯಾವಾಗ ಪೂಜಾ ವಿಧಿ–ವಿಧಾನಗಳು ನಿಯಮಿತವಾಗಿ ನಡೆಯುತ್ತವೆಯೋ, ಅವನು ತನ್ನನ್ನು ತಾನು ಆವಾಹನೆಯ ಆಂತರಿಕ ಸ್ಥಿತಿಯಲ್ಲಿ ಇರಿಸುತ್ತಾನೆ ಮತ್ತು ವಿಗ್ರಹಕ್ಕೆ ಶಕ್ತಿಯನ್ನು ನೀಡುವ ಸಲುವಾಗಿ ಒಂದು ರೂಪವನ್ನು ಅಥವಾ ದೈವೀ ಸ್ವರೂಪದ ಹೊರಹೊಮ್ಮುವಿಕೆಯನ್ನು ಕೆಳಗೆ ತರಲು ಪ್ರಯತ್ನಿಸುತ್ತಾನೆ. ವಿಗ್ರಹಕ್ಕೆ ಶಕ್ತಿಯನ್ನು ನೀಡುವ ಸಲುವಾಗಿ – ಅರ್ಚಕನು ನಿಜವಾಗಿಯೂ ಆವಾಹನೆಯ ಶಕ್ತಿಯನ್ನು ಹೊಂದಿರುವ ವ್ಯಕ್ತಿಯಾಗಿದ್ದರೆ, ಅವನು ಯಶಸ್ವಿಯಾಗಬಹುದು. ಆದರೆ ಸಾಮಾನ್ಯವಾಗಿ – ಎಲ್ಲದಕ್ಕೂ ಅಪವಾದ ಅಥವಾ ವಿನಾಯಿತಿಗಳಿವೆ – ಆದರೆ ಸಾಮಾನ್ಯವಾಗಿ ಈ ಜನರಿಗೆ ಸಂಪ್ರದಾಯದ ಪ್ರಕಾರ ಸಾಮಾನ್ಯ ವಿಚಾರಗಳಲ್ಲಿ ಶಿಕ್ಷಣವನ್ನು ಕೊಡಲಾಗುತ್ತದೆ. ಆದ್ದರಿಂದ, ಅವರು ಆವಾಹನೆ ಮಾಡುತ್ತಿರುವ ದೇವರ ಬಗ್ಗೆ ಯೋಚಿಸಿದಾಗ, ಅವರು ಅದಕ್ಕೆ ನೀಡಲಾದ ಎಲ್ಲಾ ಗುಣ ಲಕ್ಷಣಗಳು ಮತ್ತು ತೋರಿಕೆಗಳ ಬಗ್ಗೆ ಯೋಚಿಸುತ್ತಾರೆ, ಮತ್ತು ಆವಾಹನೆಯನ್ನು ಸಾಮಾನ್ಯವಾಗಿ ಪ್ರಾಣಿಕ ಅಥವಾ ಬೌದ್ಧಿಕ ಪ್ರಪಂಚದ ಘಟಕಗಳಿಗೆ ಸಂಬೋಧಿಸ–ಲಾಗುತ್ತದೆಯೇ ಹೊರತು ಆ ಪುರುಷನಿಗಲ್ಲ. ಮತ್ತು ಒಂದು ವಿಗ್ರಹದಲ್ಲಿ ಅಥವಾ

ಇನ್ನೊಂದರಲ್ಲಿ ಪ್ರಕಟವಾಗುವುದು ಈ ಸಣ್ಣ ಘಟಕಗಳು. ಸಣ್ಣ ದೇವಾಲಯಗಳಲ್ಲಿನ ಅಥವಾ ಮನೆಗಳಲ್ಲಿನ ಈ ಎಲ್ಲಾ ವಿಗ್ರಹಗಳು – ಕೆಲವು ಜನರು ತಮ್ಮ ಮನೆಗಳಲ್ಲಿ ಚಿಕ್ಕ ಮಂದಿರಗಳನ್ನು ಹೊಂದಿರುತ್ತಾರೆ ಮತ್ತು ಅಲ್ಲಿ ತಾವು ಪೂಜಿಸುವ ದೈವೀ ಸ್ವರೂಪದ ವಿಗ್ರಹವನ್ನು ಅಲ್ಲಿರಿಸುತ್ತಾರೆ – ಈ ಘಟಕಗಳು ಅವುಗಳಲ್ಲಿ ಪ್ರಕಟವಾಗುತ್ತವೆ; ಕೆಲವೊಮ್ಮೆ ಇದರ ಪರಿಣಾಮಗಳು ದುರದೃಷ್ಟಕರವಾಗಿರುತ್ತವೆ, ಏಕೆಂದರೆ ಈ ರೂಪಗಳು ಮೂಲ ದೈವೀ ಸ್ವರೂಪದಿಂದ ಬಹು ದೂರವಿರುತ್ತವೆ ... ಅವುಗಳು ವಿಚಿತ್ರವಾದ ರಚನೆಗಳಾಗಿವೆ. ಕೆಲವು ಕುಟುಂಬಗಳಲ್ಲಿ ಅವರು ಪೂಜಿಸುವಂಥ ಕಾಳಿ ದೇವತೆಗಳಲ್ಲಿ ಕೆಲವು ಕಾಳಿಗಳು ನಿಜವಾದ ರಾಕ್ಷಸರು!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/275–76**

**ಧಾರ್ಮಿಕ ಸ್ಮಾರಕಗಳು**

ಎಲ್ಲಾ ಧಾರ್ಮಿಕ ಸ್ಮಾರಕಗಳಲ್ಲಿ, ಶ್ರೇಷ್ಠ ಧರ್ಮಕ್ಕೆ ಸೇರಿರಬಹುದಾದಂಥ ಬಹುತೇಕ ಸ್ಮಾರಕಗಳಲ್ಲಿ, ಅದು ಫ್ರಾನ್ಸ್ ದೇಶದಲ್ಲಾಗಲಿ ಅಥವಾ ಬೇರೆ ದೇಶದಲ್ಲಾಗಲಿ ಅಥವಾ ಜಪಾನ್ ದೇಶದಲ್ಲಾಗಲಿ, ಅವು ಎಂದಿಗೂ ಒಂದೇ ರೀತಿಯ ದೇವಾಲಯಗಳು ಅಥವಾ ಚರ್ಚ್‌ಗಳು ಆಗಿರಲಿಲ್ಲ ಅಥವಾ ಅದೇ ರೀತಿಯ ದೇವರುಗಳಾಗಿರಲಿಲ್ಲ, ಆದಾಗ್ಯೂ ನನ್ನ ಅನುಭವವು ಎಲ್ಲೆಡೆಯೂ ಬಹುತೇಕ ಒಂದೇ ರೀತಿಯಾಗಿತ್ತು (ಸಣ್ಣ ವ್ಯತ್ಯಾಸಗಳೊಂದಿಗೆ) – ಚರ್ಚ್‌ನಲ್ಲಿ ಯಾವುದೇ ಬಲಶಾಲಿ ಶಕ್ತಿಯಿರಲಿ, ಅದು ಭಕ್ತರ ನಂಬಿಕೆಯ ಮೇಲೆ ಮಾತ್ರ ಅವಲಂಬಿತವಾಗಿದೆ ಎನ್ನುವುದನ್ನು ನಾನು ಕಂಡೆ. ಅಲ್ಲಿ ನಿಜವಾಗಿಯೂ ಇರುವ ಪ್ರಭಾವ ಮತ್ತು ಅವರು ಅನುಭವಿಸಿದ ಪ್ರಭಾವದ ನಡುವೆ ಒಂದು ವ್ಯತ್ಯಾಸ ಅಲ್ಲಿತ್ತು. ಉದಾಹರಣೆಗೆ, ನಾನು ಫ್ರಾನ್ಸ್‌ನ ಅತ್ಯಂತ ಸುಂದರವಾದ ಕ್ಯಾಥೆಡ್ರಲ್‌ಗಳಲ್ಲಿ ಒಂದನ್ನು ನೋಡಿದೆ, ಅದು ಕಲಾತ್ಮಕ ದೃಷ್ಟಿಕೋನದಿಂದ ಒಂದು ಅತ್ಯಂತ ಭವ್ಯವಾದ ಸ್ಮಾರಕಗಳಲ್ಲಿ ಒಂದಾಗಿದೆ – ಅಂತಹ ಅತ್ಯಂತ ಪವಿತ್ರವಾದ ಸ್ಥಳದಲ್ಲಿ ಅಗಾಧವಾಗಿ ಕಪ್ಪಾಗಿದ್ದ ಜೇಡನ್ನು ನೋಡಿದೆ, ಅದು ತನ್ನ ಜಾಲವನ್ನು ಆ ಸ್ಥಳದಲ್ಲಿ ಪೂರ್ತಿಯಾಗಿ ಹರಡಿತ್ತು, ಮತ್ತು ಜನರ ಭಕ್ತಿಯಿಂದ, ಅವರ ಪ್ರಾರ್ಥನೆಯಿಂದ ಹೊರಸೂಸುವಂಥ ಎಲ್ಲ ಶಕ್ತಿಗಳನ್ನು ಸೆಳೆದುಕೊಂಡು ತನ್ನಲ್ಲಿ (ಜಾಲದಲ್ಲಿ) ಹಿಡಿಯುತ್ತಿತ್ತು. ಇದು ತುಂಬಾ ಹರ್ಷದಾಯಕ ದೃಶ್ಯವಾಗಿರಲಿಲ್ಲ; ಅಲ್ಲಿ ಪ್ರಾರ್ಥನೆ ಮಾಡುತ್ತಿದ್ದ ಜನರು, ದೈವೀ ಸ್ಪರ್ಶವನ್ನು ಅನುಭವಿಸಿದರು, ಅವರು

ತಮ್ಮ ಪ್ರಾರ್ಥನೆಯಿಂದ ಎಲ್ಲಾ ರೀತಿಯ ಫೂತ್ಕಾರಗಳನ್ನೇ ಪಡೆದರು. ಆದರೆ ಅವರು ಕೆಟ್ಟ ಸಂಗತಿಯನ್ನು ಒಳ್ಳೆಯ ವಿಷಯವನ್ನಾಗಿ ಬದಲಾಯಿಸಬಹುದಾದಂಥ ನಂಬಿಕೆಯನ್ನು ಹೊಂದಿದ್ದರು; ಅವರು ತಮ್ಮ ನಂಬಿಕೆಯನ್ನು ಹೊಂದಿದ್ದರು. ನಾನು ಅಲ್ಲಿ ಹೋಗಿದ್ದರೆ, "ನೀವು ದೇವರನ್ನು ಪ್ರಾರ್ಥಿಸುತ್ತಿದ್ದೀರಿ ಎಂದು ನೀವು ಭಾವಿಸುತ್ತೀರಾ? ಎಂದು ಹೇಳುತ್ತಿದ್ದೆ. ನಿಮ್ಮ ಎಲ್ಲಾ ಶಕ್ತಿಗಳನ್ನು ನುಂಗುವಂಥ ಅಗಾಧವಾದ ಒಂದು ಜೇಡವು ಅದಾಗಿದೆ!" ಅದು ನಿಜವಾಗಿಯೂ ಒಂದು ಉದಾರವಾದ ಸಂಗತಿಯಾಗಿರಲಿಲ್ಲ. ಮತ್ತು ಅದು ಹೆಚ್ಚು ಸಮಯ, ಬಹುತೇಕ ಎಲ್ಲೆಡೆ ಹೀಗೆಯೇ ಇರುತ್ತದೆ; ಅಲ್ಲಿರುವಂಥ ಒಂದು ಪ್ರಮುಖ ಶಕ್ತಿಯು ಇದಾಗಿದೆ, ಏಕೆಂದರೆ ಈ ಪ್ರಮುಖ ಘಟಕಗಳಿಗೆ ಮಾನವನ ಭಾವನೆಗಳ ಕಂಪನಗಳೇ ಆಹಾರ. ಕೆಲವೇ ಜನರು, ಅತ್ಯಲ್ಪ ಸಂಖ್ಯೆಯಲ್ಲಿ, ನಿಜವಾದ ಧಾರ್ಮಿಕ ಭಾವನೆಯೊಂದಿಗೆ ಚರ್ಚ್ ಅಥವಾ ದೇವಸ್ಥಾನಕ್ಕೆ ಹೋಗುತ್ತಾರೆ. ಅಂದರೆ ಅವರು ಅಲ್ಲಿಗೆ ಹೋಗುವುದು ಪ್ರಾರ್ಥನೆ ಮಾಡಿ ದೇವರಿಂದ ಏನನ್ನೋ ಬೇಡಲು ಅಲ್ಲ, ಆದರೆ ತಮ್ಮನ್ನು ತಾವು ಅರ್ಪಿಸಿಕೊಳ್ಳಲು, ಧನ್ಯವಾದಗಳನ್ನು ಅರ್ಪಿಸಲು. ಅಪರೂಪವಾಗಿ ಹಾಗೆ ಮಾಡುವವರು ದಶ ಲಕ್ಷದಲ್ಲಿ ಒಬ್ಬರು. ಹಾಗಾಗಿ ವಾತಾವರಣವನ್ನು ಬದಲಾಯಿಸುವ ಶಕ್ತಿ ಅವರಿಗಿಲ್ಲ. ಬಹುಶಃ ಅಂಥವರೇನಾದರು ಅಲ್ಲಿದ್ದರೆ, ಅವರು ಎಲ್ಲವನ್ನೂ ಪಾರಾಗಿ, ಭೇದಿಸಿ ಎಲ್ಲೋ ಹೋಗಿ ದೈವಿಕವಾದದ್ದನ್ನು ಸ್ಪರ್ಶಿಸುತ್ತಾರೆ. ಆದರೆ ಮೂಢ ನಂಬಿಕೆ, ಅಹಂಕಾರ ಮತ್ತು ಸ್ವ–ಹಿತಾಸಕ್ತಿಯಿಂದ ಮಾತ್ರ (ದೇವಸ್ಥಾನಕ್ಕೆ ಅಥವಾ ಚರ್ಚಿಗೆ) ಹೋಗುವ ಬಹುಪಾಲು ಜನರು ಈ ರೀತಿಯ ವಾತಾವರಣವನ್ನು ಸೃಷ್ಟಿಸುತ್ತಾರೆ. ಹಾಗಾಗಿ, ಚರ್ಚ್ ಅಥವಾ ದೇವಸ್ಥಾನಕ್ಕೆ ನೀವು ಹೋದಾಗ ನೀವು ಉಸಿರಾಡುವುದು ಅದನ್ನೇ. ನೀವು ತುಂಬಾ ಒಳ್ಳೆಯ ಭಾವನೆಯಿಂದ ಅಲ್ಲಿಗೆ ಹೋದಾಗ, "ಓಹ್, ಧ್ಯಾನಕ್ಕೆ ಎಂತಹ ಶಾಂತ ಸ್ಥಳ!" ಎಂದು ನೀವೇ ಹೇಳಿಕೊಳ್ಳುತ್ತೀರಿ.

ಕ್ಷಮಿಸಿ, ಆದರೆ ಅದು ಇರುವುದೇ ಹೀಗೆ. ನಾನು ಉದ್ದೇಶಪೂರ್ವಕವಾಗಿ ಈ ಪ್ರಯೋಗವನ್ನು ಎಲ್ಲೆಡೆಯೂ ಸ್ವಲ್ಪ ಪ್ರಯತ್ನಿಸಿದ್ದೇನೆ ಎಂದು ನಾನು ನಿಮಗೆ ಹೇಳಲು ಬಯಸುತ್ತೇನೆ. ಬಹುಶಃ, ಕೆಲವೊಮ್ಮೆ, ಧ್ಯಾನ ಮಾಡುವುದಕ್ಕಾಗಿ ಅತ್ಯಂತ ಚಿಕ್ಕದಾದ, ನಿಶ್ಚಲವಾದ ಮತ್ತು ಮೌನವಾಗಿರುವ ಸ್ಥಳವನ್ನು ಒಂದು ಸಣ್ಣ ಹಳ್ಳಿಯ ಚರ್ಚ್‌ನಲ್ಲಿ ಕಂಡುಕೊಂಡಿದ್ದೇನೆ. ಆ ಸ್ಥಳದಲ್ಲಿ ಕೊಂಚ ಅಭೀಪ್ಸೆ ಇತ್ತು; ಅದು ತುಂಬಾ ಅಪರೂಪದ ಸ್ಥಳವಾಗಿತ್ತು! ನಾನು ಇಟಲಿಯ ಸುಂದರ ಚರ್ಚುಗಳನ್ನು, ಭವ್ಯವಾದ ಸ್ಥಳಗಳನ್ನು ನೋಡಿದ್ದೇನೆ; ಅವುಗಳು ಈ ಪ್ರಾಣಿಕ ಜೀವಿಗಳಿಂದ ಮತ್ತು ಭೀತಿಯ ವಾತಾವರಣದಿಂದ

ತುಂಬಿದ್ದವು. ನಾನು ವೆನಿಸ್‌ನ ಬೆಸಿಲಿಕಾದಲ್ಲಿ ಚಿತ್ರಕಲೆಯ ಕೆಲಸವನ್ನು ಮಾಡುತ್ತಿದ್ದಾಗ, ತಪ್ಪೊಪ್ಪಿಗೆಯಲ್ಲಿ ಒಬ್ಬ ಪಾದ್ರಿಯು ಬಡ ಮಹಿಳೆಯ ತಪ್ಪೊಪ್ಪಿಗೆಯನ್ನು ಕೇಳುತ್ತಿದ್ದನು. ನಿಜವಾಗಿಯೂ ಅದೊಂದು ಭಯಾನಕವಾದ ದೃಶ್ಯವಾಗಿತ್ತು! ಆ ಪಾದ್ರಿಯು ಹೇಗಿದ್ದನೋ, ಅವನ ಗುಣ ಹೇಗಿದ್ದವೋ, ಒಂದೂ ಗೊತ್ತಿಲ್ಲ, ಆ ಪಾದ್ರಿಯ ಮುಖವೇ ಕಾಣುತ್ತಿರಲಿಲ್ಲ – ತಪ್ಪೊಪ್ಪಿಗೆ ಮಾಡುವಾಗ ಪಾದ್ರಿಯು ಕಾಣುವುದಿಲ್ಲ ಎನ್ನುವುದು ನಿನಗೆ ಗೊತ್ತಿಲ್ಲವೆ. ಪಾದ್ರಿಯು, ಜಾಳಿಗೆ ಇರುವಂಥ ಒಂದು ಪೆಟ್ಟಿಗೆಯಲ್ಲಿ ಕುಳಿತುಕೊಂಡಿರುತ್ತಾನೆ, ಜಾಳಿಗೆಯ ಇನ್ನೊಂದು ಕಡೆಯಿಂದ ಆತ ತಪ್ಪೊಪ್ಪಿಗೆಯನ್ನು ಕೇಳುತ್ತಾನೆ. ಪಾದ್ರಿಯ ಸುತ್ತ ಕತ್ತಲೆಯಂಥ ಮತ್ತು ಶಕ್ತಿಯನ್ನು ಹೀರುವಂಥ ವಾತಾವರಣ ಇರುತ್ತದೆ, ಆ ಬಡ ಮಹಿಳೆ ಭಯಭೀತ ಸ್ಥಿತಿಯಲ್ಲಿದ್ದಳು, ಅದನ್ನು ನೋಡುವುದು ನಿಜವಾಗಿಯೂ ಒಂದು ನೋವಿನ ಸಂಗತಿ. ಅದಲ್ಲದೆ, ಅದೃಶ್ಯ ಪ್ರಪಂಚದಲ್ಲಿ ಪ್ರಾಣಿಕ ಪುರುಷರನ್ನು ಹೊರತುಪಡಿಸಿ ಯಾವುದೇ ಜೀವಿಗಳು ಪೂಜಿಸಿಕೊಳ್ಳಲು ಇಷ್ಟಪಡುವುದಿಲ್ಲ. ನಾನು ಹೇಳಿದಂತೆ, ಅವುಗಳು ಇದರಿಂದ ಸಾಕಷ್ಟು ಸಂತುಷ್ಟವಾಗಿವೆ. ಅವರು ಹೆಮ್ಮೆಯಿಂದ ಉಬ್ಬಿಹೋಗುತ್ತಾರೆ ಮತ್ತು ಅತೀವ ಆನಂದವನ್ನು ಅನುಭವಿಸುತ್ತಾರೆ ಮತ್ತು ಅವರನ್ನು ಪೂಜಿಸಲು ಜನರ ದಂಡೇ ಸಿಕ್ಕಾಗ ಅವರು ಸಾಕಷ್ಟು ತೃಪ್ತರಾಗುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/194–95**

**ಆರಾಧನೆ ಮತ್ತು ನಿಜವಾದ ದೇವರುಗಳು**

ಆದರೆ ನೀವು ನಿಜವಾದ ದೈವೀ ಪುರುಷರನ್ನು ತೆಗೆದುಕೊಂಡರೆ, ಅವರು ಗೌರವಿಸುವ ವಿಷಯ ಇದು ಅಲ್ಲವೇ ಅಲ್ಲ. ಅವರು ಪೂಜಿಸಿಕೊಳ್ಳುವುದನ್ನು ಇಷ್ಟಪಡುವುದಿಲ್ಲ.

ಅವರು ಪೂಜಿಸಲು ಇಷ್ಟಪಡುವುದಿಲ್ಲ. ಇಲ್ಲ, ಇದು ಅವರಿಗೆ ಯಾವುದೇ ವಿಶೇಷವಾದ ಆನಂದವನ್ನು ನೀಡುವುದಿಲ್ಲ! ಅವರು ಸಂತೋಷವಾಗಿದ್ದಾರೆ ಎಂದು ಭಾವಿಸಬೇಡಿ, ಏಕೆಂದರೆ ಅವರಿಗೆ ಯಾವುದೇ ಹೆಮ್ಮೆ ಇಲ್ಲ. ಮನುಷ್ಯನು ಪೂಜಿಸಿಕೊಳ್ಳಲು ಇಷ್ಟಪಡುವುದು ಹೆಮ್ಮೆಯ ಕಾರಣದಿಂದಾಗಿ; ಒಬ್ಬ ಮನುಷ್ಯನಿಗೆ ಅಹಂಕಾರವಿಲ್ಲದಿದ್ದರೆ ಅವನು ಪೂಜಿಸಿಕೊಳ್ಳಲು ಇಷ್ಟಪಡುವುದಿಲ್ಲ; ಉದಾಹರಣೆಗೆ, ಅವರು ಒಂದು ಒಳ್ಳೆಯ ಉದ್ದೇಶ ಅಥವಾ ಒಂದು ಉತ್ತಮ ಭಾವನೆ ಅಥವಾ ನಿಸ್ವಾರ್ಥದ ಅಥವಾ ಉತ್ಸಾಹದ ಚಲನೆಯನ್ನು, ಆನಂದವನ್ನು, ಆಧ್ಯಾತ್ಮಿಕ

ಸಂತೋಷವನ್ನು ನೋಡಿದರೆ, ಈ ವಿಷಯಗಳು ಅವರಿಗೆ, ಪ್ರಾರ್ಥನೆಗಳಿಗಿಂತ ಮತ್ತು ಪೂಜೆ ಮತ್ತು ಪೂಜಾ ಕೈಂಕರ್ಯಗಳಿಗಿಂತ ಅಪರಿಮಿತವಾದ ಹೆಚ್ಚಿನ ಮೌಲ್ಯವನ್ನು ಹೊಂದಿವೆ...

ನಾನು ನಿಮಗೆ ಹೇಳುತ್ತಿರುವ ವಿಷಯ ತುಂಬಾ ಗಂಭೀರವಾಗಿದೆ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ: ಒಂದು ವೇಳೆ ನೀವು ಸಾಕ್ಷಾತ್ ದೇವರನ್ನು ಕುರ್ಚಿಯಲ್ಲಿ ಕೂರಿಸಿ, ನೀವು ಪೂಜೆ ಮಾಡುತ್ತಿರುವಾಗ ಆತನನ್ನು ಅಲ್ಲಿಯೇ ಕೂಡುವಂತೆ ಒತ್ತಾಯಿಸಿದರೆ, ನೀವು ಹಾಗೆ ಮಾಡುವುದನ್ನು ಅವನು ನೋಡುತ್ತ ಸ್ವಲ್ಪ ಆನಂದಿಸಬಹುದು, ಆದರೆ ಅದು ಖಂಡಿತವಾಗಿಯೂ ಅವನಿಗೆ ಯಾವುದೇ ತೃಪ್ತಿಯನ್ನು ನೀಡುವುದಿಲ್ಲ. ಎಂದಿಗೂ ಇಲ್ಲ! ನಿಮ್ಮ ಪೂಜೆಗಳಿಂದ ಆತ ಶ್ಲಾಘನೆಗೊಂಡ ಅಥವಾ ಆನಂದಗೊಂಡ ಅಥವಾ ವೈಭವೀಕರಿಸಿದ ಅನುಭವವನ್ನು ಆತ ಹೊಂದುವುದಿಲ್ಲ. ನೀವು ಆ ಕಲ್ಪನೆಯನ್ನು ತೊಡೆದುಹಾಕಬೇಕು. ಪ್ರಾಣಿಕ ಪುರುಷರಿಗೆ ಸೇರಿದ ಆಧ್ಯಾತ್ಮಿಕ ಮತ್ತು ಭೌತಿಕ ಪ್ರಪಂಚದ ನಡುವೆ ಒಂದು ಕ್ಷೇತ್ರವಿದೆ ಮತ್ತು ಈ ಕ್ಷೇತ್ರವು ಇಂತಹ ವಿಷಯಗಳಿಂದ ತುಂಬಿದೆ, ಏಕೆಂದರೆ ಈ ಪುರುಷರು ಅದರ ಮೇಲೆ ವಾಸಿಸುತ್ತಾರೆ, ಈ ವಿಷಯಗಳೊಂದಿಗೆ ಆನಂದದಿಂದ ಇರುತ್ತಾರೆ ಮತ್ತು ಅದು ತಕ್ಷಣವೇ ಅವರಿಗೆ ಪ್ರಾಮುಖ್ಯತೆಯನ್ನು ನೀಡುತ್ತದೆ; ಯಾರು ಅತಿ ಹೆಚ್ಚಿನ ಸಂಖ್ಯೆಯ ಭಕ್ತರನ್ನು, ಆರಾಧಕರನ್ನು ಹೊಂದಿರುತ್ತಾರೋ, ಆತ ಅತ್ಯಂತ ಆನಂದದಾಯಕ ಮತ್ತು ಉಬ್ಬಿಹೋದ ಪುರುಷ. ಆದರೆ ದೇವರುಗಳು ಮೌಲ್ಯಯುತವಾಗಬಹುದೆಂದು ಯಾರಾದರೂ ಹೇಗೆ ಊಹಿಸಬಹುದು ... ದೇವರುಗಳು – ನಾನು ನಿಜವಾದ ದೇವರುಗಳ ಬಗ್ಗೆ ಮಾತನಾಡುತ್ತಿದ್ದೇನೆ, ಅಧಿಮಾನಸ ಹೊಂದಿದ ದೇವರುಗಳೂ ಸಹ, ಅವರು ಇನ್ನೂ ಅಲ್ಪವೇ ಆಗಿದ್ದರೂ ... ಅವರು ಅನೇಕ ಮಾನವ ನ್ಯೂನತೆಗಳನ್ನು ಪಡೆದುಕೊಂಡಿದ್ದಾರೆಂದು ತೋರುತ್ತದೆ. ಆದರೂ ಅದೆಲ್ಲದರ ಹೊರತಾಗಿಯೂ, ಅವರು ನಿಜವಾಗಿಯೂ ಒಂದು ಹೆಚ್ಚಿನ ಪ್ರಜ್ಞೆಯನ್ನು ಹೊಂದಿದ್ದಾರೆ – ಅದು ಅವರನ್ನು ತೃಪ್ತಿಪಡಿಸುವುದಿಲ್ಲ. ನಿಜವಾದ ಒಳ್ಳೆಯತನ, ಬುದ್ಧಿವಂತಿಕೆ, ನಿಸ್ವಾರ್ಥತೆ ಅಥವಾ ಸೂಕ್ಷ್ಮ ತಿಳುವಳಿಕೆ ಅಥವಾ ಅತ್ಯಂತ ಪ್ರಾಮಾಣಿಕವಾದ ಆಕಾಂಕ್ಷೆಯು ಅವರಿಗೆ ಒಂದು ಸಣ್ಣ ಧಾರ್ಮಿಕ ವ್ರತಾಚರಣೆಗಿಂತ ಅತ್ಯಂತ ಹೆಚ್ಚಿನದಾಗಿದೆ. ಅನಂತವಾಗಿ! ಅಲ್ಲಿ ಯಾವುದೇ ಹೋಲಿಕೆ ಇಲ್ಲ. ಧಾರ್ಮಿಕ ವ್ರತಾಚರಣೆ! ಈ ಕಾಳಿಗಳಿಗೆ ಸಾಕಷ್ಟು ಭಯಾನಕ ರೂಪವನ್ನು ನೀಡಲಾಗಿದೆ – ಅನೇಕರ ಮನೆಗಳಲ್ಲಿ ಈ ಕಾಳಿಗಳನ್ನು ಮನೆ ದೇವರನ್ನಾಗಿ ಇರಿಸಲಾಗುತ್ತದೆ; ಈ (ಕಾಳಿ) ದೇವತೆಗಳು ಭಯಂಕರವಾದ

ಪ್ರಾಣಿಕ ಶಕ್ತಿಯನ್ನು ಹೊಂದಿವೆ! ತಮ್ಮ ಮನೆಯಲ್ಲಿದ್ದ ಕಾಳಿಯನ್ನು ನೋಡಿ ಎಷ್ಟು ಭಯಪಡುತ್ತಿದ್ದರೆಂದರೆ, ಅವರು ಕನಿಷ್ಠ ತಪ್ಪನ್ನು ಮಾಡಲೂ ಹೆದರುತ್ತಿದ್ದರು, ಅಂಥ ಜನರು ನನಗೆ ಗೊತ್ತು. ತೊಂದರೆಗಳು ಅಥವಾ ಕಷ್ಟಗಳು ಬಂದಾಗ, ಅವುಗಳನ್ನು ಕಾಳಿಯೇ ಕಳಿಸಿದ್ದಾಳೆಂದು ಅವರು ಯೋಚಿಸುತ್ತಿದ್ದರು! ಇದೊಂದು ಭಯಾನಕ ವಿಷಯವೆಂದು ನನಗನಿಸಿತು. ನಾನು ಆ ವ್ಯಕ್ತಿಗಳನ್ನು ಬಲ್ಲೆ. ಅವರು ನನಗೆ ಚೆನ್ನಾಗಿ ಗೊತ್ತು, ಆದರೆ ಅವರು ಪ್ರಾಣಿಕ ಪುರುಷರು. ಈ ರೂಪವನ್ನು ಮಾನವನ ಚಿಂತನೆಯಿಂದ ನೀಡಲಾಗಿದೆ! ಮನುಷ್ಯರು ಅಂತಹ ಭಯಾನಕ ಮತ್ತು ದೈತ್ಯಾಕಾರದ ಸಂಗತಿಗಳನ್ನು ಪೂಜಿಸುತ್ತಾರೆ ಎಂದು ಯೋಚಿಸುವುದೇ ಒಂದು ದೌರ್ಭಾಗ್ಯ; ಈ ಪಾಪದ ದೇವರುಗಳಿಗೆ ಹೆಚ್ಚಿಗೆ ಕೊಟ್ಟಿರುವುದಾರೂ ಏನು, ಅದು ಇದೆಂದು ... ನಂಬುವ ಅಭಿನಂದನೆಗಳನ್ನು ಸಂದಾಯ ಮಾಡಿರುವುದು.

ಈ ದೃಷ್ಟಿಕೋನದಿಂದ, ಸ್ವಲ್ಪ ಸಮಯದವರೆಗೆ ಭಯದಿಂದ ತುಂಬಿರುವ ಈ ಧಾರ್ಮಿಕ ವಾತಾವರಣದಿಂದ ಮನುಷ್ಯರು ಹೊರಬರುವುದು ಒಳ್ಳೆಯದು ಮತ್ತು ಈ ರೀತಿಯ ಕುರುಡು, ಮೂಢ ನಂಬಿಕೆಯ ಶರಣಾಗತಿಯಿಂದ ಶತ್ರುತ್ವದ ಶಕ್ತಿಗಳು ಘೋರವಾದ ಲಾಭವನ್ನು ಪಡೆದುಕೊಂಡಿವೆ. ನಿರಾಕರಣೆಯ ಅವಧಿಯು, ಸಕಾರಾತ್ಮಕತೆಯು, ಈ ದೃಷ್ಟಿಕೋನದಿಂದ ಮೂಢ ನಂಬಿಕೆಯಿಂದ ಮನುಷ್ಯರನ್ನು ಮುಕ್ತಗೊಳಿಸಲು ಸಾಕಷ್ಟು ಅನಿವಾರ್ಯವಾಗಿದೆ. ನಾವು ಅದರಿಂದ ಹೊರಬಂದಾಗ ಮಾತ್ರ ಮತ್ತು ರಾಕ್ಷಸೀಯ ಪ್ರಾಣಿಕ ಶಕ್ತಿಗಳಿಗೆ ದಯನೀಯ ಶರಣಾಗತಿಯಿಂದ ಮಾತ್ರ ನಾವು ನಿಜವಾದ ಆಧ್ಯಾತ್ಮಿಕ ಎತ್ತರಕ್ಕೆ ಏರಬಹುದು, ಆಗ ಸತ್ಯದ ಶಕ್ತಿಗಳ, ನೈಜ ಪ್ರಜ್ಞೆಯ, ನೈಜ ಪ್ರಭಾವದ ಸಹಕರ್ತೃ ಹಾಗೂ ನಿಜವಾದ ಸಾಧನವಾಗುತ್ತೇವೆ.

ನಾವು ಉನ್ನತ ಸ್ಥಾನಕ್ಕೆ ಏರುವ ಮೊದಲು ಇದೆಲ್ಲವನ್ನೂ ಬಿಟ್ಟುಬಿಡಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/195–97 – ಶ್ರೀಮಾತೆ**

*ಭೂತ ಮತ್ತು ವರ್ತಮಾನದಲ್ಲಿ ವಿವಿಧ ಧರ್ಮಗಳು ಪೂಜಿಸುವ ದೇವರ ವಿವಿಧ ರೂಪಗಳ ಬಗ್ಗೆ ಶ್ರೀ ಅರವಿಂದರ ಯೋಗದ ಸಾಧಕರ ವರ್ತನೆ ಹೇಗಿರಬೇಕು? ಅವನು ಆ ದೇವರುಗಳನ್ನು ಆರಾಧಿಸುವುದನ್ನು ಮುಂದುವರೆಸಿದರೆ, ಅದು ಅವನ ಪ್ರಗತಿಗೆ ಅಡಚಣೆಯನ್ನು ಉಂಟುಮಾಡುತ್ತದೆಯೇ ಮತ್ತು ಅವನ ಗುರಿಯ ಸಾಕ್ಷಾತ್ಕಾರವನ್ನು ತಡೆಯುತ್ತದೆಯೇ?*

ಎಲ್ಲಾ ಆರಾಧಕರ ಕಡೆಗೆ ಒಂದು ಸಹೃದಯದ ಸದ್ಭಾವನೆ.

ಎಲ್ಲಾ ಧರ್ಮಗಳ ಬಗ್ಗೆ ಒಂದು ಪ್ರಬುದ್ಧ ತಾತ್ಸಾರ.

ಅಧಿಮಾನಸ ಪುರುಷರೊಂದಿಗಿನ ಸಂಬಂಧಕ್ಕೆ ಸಂಬಂಧಿಸಿದಂತೆ, ಈ ಸಂಬಂಧವು ಈಗಾಗಲೇ ಅಸ್ತಿತ್ವದಲ್ಲಿದ್ದರೆ, ಪ್ರತಿಯೊಂದು ಪ್ರಕರಣವೂ ತನ್ನದೇ ಆದ ಪರಿಹಾರವನ್ನು ಹೊಂದಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/308 – ಶ್ರೀಮಾತೆ**

## ಪೂಜಾರಾಧನೆಯ ಆಧ್ಯಾತ್ಮಿಕ ಮೌಲ್ಯ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

*ಪ್ರಿಯ ಮಾತೆಯವರೇ, ದುರ್ಗಾದೇವಿ ಮತ್ತು ಕಾಳೀದೇವಿಗೆ ಸಲ್ಲಿಸುವ ಪೂಜಾರಾಧನೆಗೆ ಆಧ್ಯಾತ್ಮಿಕದ ಮೌಲ್ಯವಿದೆಯೇ?*

ಅದು ಯಾರು ಪೂಜೆಯನ್ನು ಸಲ್ಲಿಸುತ್ತಾರೋ ಎಂಬುದರ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ.

ಆಧ್ಯಾತ್ಮಿಕ ಮೌಲ್ಯಕ್ಕೆ ಇದಾವುದೂ ಮುಖ್ಯವಲ್ಲ. ಪೂರ್ಣತ್ವ ಮತ್ತು ಯೋಗದ ಸಂಪೂರ್ಣ ಸತ್ಯದ ಸಾಕ್ಷಾತ್ಕಾರಕ್ಕಾಗಿ ಒಬ್ಬರ ಅಭೀಪ್ಸೆಯನ್ನು ಯಾವುದೋ ಒಂದು ಹಂತಕ್ಕೆ ಸೀಮಿತಗೊಳಿಸುವುದು ತರವಲ್ಲ. ಆದರೆ ಆಧ್ಯಾತ್ಮಿಕದ ದೃಷ್ಟಿಕೋನದಿಂದ ನೋಡುವುದಾದರೆ, ನಾವು ಆರಾಧಿಸುವ ವಸ್ತುವು ಯಾವುದೇ ಆಗಿರಲಿ, ಅದರ ಮೇಲಿನ ನಮ್ಮ ಭಕ್ತಿಯು ಪ್ರಾಮಾಣಿಕವಾಗಿರಬೇಕು ಮತ್ತು ಅದರ ಬಗೆಗಿನ ತಮಗಿರುವ ಸಮರ್ಪಣಾ ಮನೋಭಾವನೆಯು ಸಮಗ್ರವೂ ಸಂಪೂರ್ಣವೂ ಆಗಿದ್ದೇ ಆದಲ್ಲಿ ನಮಗೆ ದೊರೆವ ಆಧ್ಯಾತ್ಮಿಕ ಫಲಿತಾಂಶವು ನಾವು ತೋರಿದ ಭಕ್ತಿ–ಸಮರ್ಪಣೆಗಳಿಗೆ ಸಮಾನವಾಗಿಯೇ ಇರುತ್ತದೆ. ನೀವು ಯಾವುದೇ ಆರಾಧನಾ ವಸ್ತುವಿನ ಮೇಲೆ ಕೇಂದ್ರಿಕೃತವಾಗಿ ನಿಮ್ಮ ಪವಿತ್ರವಾದ ಸಮರ್ಪಣೆಯನ್ನು ಪ್ರಾಮಾಣಿಕವಾಗಿ ಸಲ್ಲಿಸಿದಾಗ ನೀವು ಅದರ ಮೂಲಕವೇ ಅತ್ಯುನ್ನತ ವಾಸ್ತವ್ಯದ ಸ್ತರವನ್ನು ತಲುಪುತ್ತೀರಿ.

ಹಾಗಾಗಿಯೇ, ಇಲ್ಲಿ ನೀವು ದಿವ್ಯತೆಯ ಯಾವ ಅಂಶವನ್ನು ನಿಮ್ಮ ಮಾರ್ಗದರ್ಶಿಯೆಂದು ಕರೆದು ಅದಕ್ಕೆ ನಿಮ್ಮ ಸಮರ್ಪಣೆಯನ್ನು ಪೂರ್ಣ

ರೂಪದಲ್ಲಿ ಸಲ್ಲಿಸುತ್ತಿರೋ. ಆ ಆರಾಧನೆಯ ವ್ಯವಸ್ಥೆಯಲ್ಲಿ ನೀವು ಸಂಪೂರ್ಣವಾಗಿ ಪ್ರಾಮಾಣಿಕರಾಗಿದ್ದೇ ಆದಲ್ಲಿ ನೀವು ನಿಮ್ಮ ಆಧ್ಯಾತ್ಮಿಕ ಗುರಿಯನ್ನು ಸಾಧಿಸುವುದು ಖಂಡಿತ.

ಆದರೆ ಅಲ್ಲಿಂದ ಮುಂದೆ ಸಾಗುವ ನೀವು ಪೂರ್ಣ ಯೋಗವನ್ನು ಸಾಧಿಸಲು ನಿಮ್ಮನ್ನು ನೀವು ಯಾವುದೋ ಒಂದು ಪರಿಧಿಗೆ ಸೀಮಿತಿಗೊಳಿಸಿಕೊಳ್ಳಬಾರದು. ನೀವು ಸಾಗುವ ಮಾರ್ಗವೂ ಸಹ ಇದಕ್ಕೆ ಹೊರತಾಗಿರಬಾರದು. ಪೂರ್ಣ ಯೋಗದ ಫಲವನ್ನು ಪಡೆಯಲು ಇವೆರಡೂ ಬಹುಮುಖ್ಯ ಅಂಶಗಳಾಗಿವೆ.

**ಆಧ್ಯಾತ್ಮಿಕ ದರ್ಶನ** – ಇದನ್ನು ಈ ಹಿಂದೆಯೇ ಅರ್ಥೈಸಿಕೊಂಡಿದ್ದೇವೆ. ಅದನ್ನು ಇನ್ನೂ ಸರಳವಾಗಿ ಅರ್ಥೈಸಬೇಕಾದರೆ, ಈ ಆಧ್ಯಾತ್ಮಿಕ ದರ್ಶನವೆಂದರೆ ಯಾವುದೋ ಒಂದು ಮಾರ್ಗದ ಮೂಲಕ ನಾವು ಆ ಪರಮದೊಂದಿಗೆ ಒಂದಾಗುವುದೇ ಆಗಿದೆ. ಇದು ನಿಮ್ಮ ಅಸ್ತಿತ್ವವನ್ನು ಆ ಪರಮದೊಡನೆ ಐಕ್ಯಗೊಳಿಸುವ ಪ್ರಕ್ರಿಯೆಯೇ ಆಗಿದೆ. ಈ ಪರಮೈಕ್ಯದ ಹಂತದಲ್ಲಿ ನಿಮ್ಮಲ್ಲಿರುವ ಪ್ರತ್ಯೇಕತಾ ಮನೋಭಾವನೆಯು ಕಳೆದುಹೋಗಿ ನೀವು ಪೂರ್ಣ ರೂಪದಲ್ಲಿ ಆ ಪರಮದೊಡನೆ ಸೇರಿಹೋಗುತ್ತೀರಿ. ಆದರೆ ಈ ಪ್ರಕ್ರಿಯೆಯು ಕಾರ್ಯರೂಪಕ್ಕೆ ಬರಬೇಕಾದರೆ ಸಂಪೂರ್ಣ ಸಮರ್ಪಣೆ ಮತ್ತು ಪ್ರಾಮಾಣಿಕ ಮನೋಭಾವನೆಯ ಅವಶ್ಯಕತೆಯಿದೆ. ನಿಮ್ಮ ಅಭೀಪ್ಸೆಯು ನೇರವಾದ ಮಾರ್ಗದಲ್ಲೇ ಸಾಗಿದ್ದೇ ಆದಲ್ಲಿ ಆಗ ನೀವು ನಿಮ್ಮ ಎಲ್ಲಾ ಪರಿಧಿಗಳನ್ನು ದಾಟಿ ಆ ಪರಮ ಚೈತನ್ಯದೊಡನೆ ಒಂದಾಗುತ್ತೀರಿ ಆ ಪರಮವನ್ನು ನಿಮ್ಮೊಳಗೆ ಧಾರಣೆಗೈಯುತ್ತೀರಿ.

ನೀವು ಅವನನ್ನು ನಿಮ್ಮ ಆಂತರ್ಯದಲ್ಲೇ ಆಗಲಿ ಬಾಹ್ಯ ಜಗತ್ತಿನಲ್ಲೇ ಆಗಲಿ ಹುಡುಕಬಹುದು. ನೀವು ಅವನನ್ನು ಸಾಕಾರ–ನಿರಾಕಾರ ಯಾವ ರೂಪದಲ್ಲಿಯಾದರೂ ಧೇನಿಸಬಹುದು. ಆದರೆ ನಿಮ್ಮ ಅಭೀಪ್ಸೆ ಮತ್ತು ನಿರ್ಣಯಗಳು ಪ್ರಾಮಾಣಿಕವಾಗಿರಬೇಕು. ಆಗ ಮಾತ್ರ ನೀವು ನಿಮ್ಮ ಗುರಿಯನ್ನು ತಲುಪಲು ಸಾಧ್ಯ.

ಅಥವಾ ನೀವು ಶ್ರೀ ಅರವಿಂದರು ತೋರಿದ ಇನ್ನೊಂದು ಮಾರ್ಗವನ್ನು ಅನುಸರಿಸಬಹುದು. ಅದರ ಪ್ರಕಾರ ಮೊದಲು ನೀವು ನಿಮ್ಮ ಆಂತರ್ಯವನ್ನು ಅರಿತುಕೊಳ್ಳಬೇಕು. ಆನಂತರ ಬಾಹ್ಯ ಪ್ರಜ್ಞೆಯೆಡೆಗೆ, ಅನ್ಯ ಲೋಕಗಳೆಡೆ ನಿಮ್ಮ ಚೇತನವನ್ನು ಪ್ರವಹಿಸಬೇಕು. ಆ ಮೂಲಕ ನೀವು ಬಾಹ್ಯ ಪ್ರಜ್ಞೆಯನ್ನು – ಅನ್ಯ

ಲೋಕಗಳನ್ನು ಪರಿವರ್ತಿಸಲು ಪ್ರಯತ್ನಿಸಬೇಕು. ಈ ಹಂತದಲ್ಲಿ ನೀವು ನಿಮ್ಮನ್ನು ಯಾವುದೋ ಒಂದು ಸ್ತರಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಬಾರದು. ಹಾಗೇನಾದರೂ ನೀವು ನಿಮಗೆ ಒಂದು ಗಡಿಯನ್ನು ನಿರ್ಮಿಸಿಕೊಂಡಿದ್ದೇ ಆದಲ್ಲಿ ನೀವು ನಿಮ್ಮ ಕಾರ್ಯದಲ್ಲಿ ಸಫಲವಾಗಲು ಸಾಧ್ಯವಾಗುವದಿಲ್ಲ.

ನೀವು ಸರ್ವ ವಿಧದಲ್ಲಿಯೂ ಸರ್ವ ಅಂಶಗಳಲ್ಲೂ ಆ ದಿವ್ಯತೆಯೊಳಗೆ ಏಕತೆಯನ್ನು ಅನುಭವಿಸಲು ಸಶಕ್ತರಾಗಿರಬೇಕು. ಹಾಗೂ ಆ ದಿವ್ಯತೆಯನ್ನು ಮುಟ್ಟಲು ನಿಮಗಿರುವ ಸರ್ವ ಮಾರ್ಗಗಳನ್ನೂ ನೀವು ಅರಿತಿರಬೇಕು. ಹಾಗೂ ಆ ಎಲ್ಲಾ ಸೀಮೆಗಳನ್ನು ಮೀರಿ ನೀವು ಹೊಸದೊಂದು ಮಾರ್ಗವನ್ನೇ ಕಂಡುಕೊಳ್ಳಬೇಕು.

ಮೊದಲಿಗೆ ನೀವು ಒಂದು ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅದೇನೆಂದರೆ, ನೀವು ಪೂರ್ಣ ಯೋಗವನ್ನು ಇತರ ಆಧ್ಯಾತ್ಮಿಕ ಕಾಣ್ಕೆಗಳೊಂದಿಗೆ ಹೋಲಿಸಿಕೊಂಡು ಗೊಂದಲಕ್ಕೊಳಗಾಗಬಾರದು. ಕೆಲವೊಮ್ಮೆ ಆ ಸಾಮಾನ್ಯ ಕಾಣ್ಕೆಗಳೇ ಬಹು ವೈವಿಧ್ಯತೆಯಿಂದ ಕಂಡುಬಂದರೂ ಸಹ ಅದು ಬಹು ಸೀಮಿತವಾದ ಕ್ಷೇತ್ರವನ್ನು ಮಾತ್ರ ನಮ್ಮೆದುರಿಗೆ ತೆರೆದಿಟ್ಟಿರುತ್ತದೆ. ಅದು ಕೊಂಚ ಆಳದವರೆಗೆ ಮಾತ್ರ ತನ್ನ ದೃಷ್ಟಿಯನ್ನು ಹರಿಬಿಟ್ಟಿರುತ್ತದೆ. ಅದನ್ನೇ ನಾವು ಪೂರ್ಣ ಯೋಗವೆಂದು ಭಾವಿಸಿ ಗೊಂದಲಕ್ಕೊಳಗಾಗಬಾರದು. ಈ ಅಂಶವು ನಿಮ್ಮ ಸಾಧನೆಯಲ್ಲಿ ಬಹು ಮುಖ್ಯವಾದ ಅಂಶವಾಗಿದೆ.

ನೀವು ಯಾವುದೋ ಒಂದು ಬಿಂದುವಿನ ಮೇಲೆ ಕೇಂದ್ರಿಕೃತವಾಗಿ ಸಾಧನೆಯನ್ನು ನಡೆಸುತ್ತ ನಿಮ್ಮ ಅಭೀಪ್ಸೆಯ ಮೂಲಕ ಸಾಧನೆಯಲ್ಲಿ ಕೊಂಚ ಆಳಕ್ಕೆ ಇಳಿಯಲೂಬಹುದು. ಅದು ನಿಮ್ಮ ಧೃಡ ವಿಶ್ವಾಸ ಮತ್ತು ಪ್ರಾಮಾಣಿಕ ಸಮರ್ಪಣೆಯನ್ನು ಅವಲಂಬಿಸಿರುತ್ತದೆ. ಮತ್ತು ಅದು ನಿಮ್ಮನ್ನು ಪೂರ್ಣದೆಡೆಗೆ–ಆನಂದದೆಡೆಗೆ ಕರೆದೊಯ್ಯಲು ಸಕ್ಷಮವಾಗಿದೆಯೋ ಎಂಬುದನ್ನು ಪರಿಗಣಿಸಿ ಫಲವನ್ನು ನೀಡುತ್ತದೆಯೇ ಹೊರತು ನೀವು ಯಾವ ಅಂಶ ಬಿಂದುವಿನ ಮೇಲೆ ಕೇಂದ್ರೀಕೃತವಾಗಿ ಸಾಧನೆಯಲ್ಲಿ ತೊಡಗಿದ್ದೀರಿ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳುವದಿಲ್ಲ. ಹಾಗಾಗಿ ಈ ಮಾರ್ಗದಲ್ಲಿ ಮುಂದುವರಿಯಬೇಕಾದರೆ ನೀವು ನಿಮ್ಮ ಯಾವ ಗುಣ–ಸ್ವಭಾವಗಳನ್ನು ಪರಿತ್ಯಜಿಸಬೇಕೆಂಬುದನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ನಡೆಯಿರಿ.

ನೀವು ನಿಮ್ಮ ಗುಣ–ಸ್ವಭಾವ ಮತ್ತು ನಿಮ್ಮ ಅಸ್ತಿತ್ವವನ್ನು ಪರಿವರ್ತಿಸಿಕೊಂಡು ಆ ಮೂಲಕ ಬೇರೊಂದು ನವ್ಯ ಪ್ರಪಂಚದ ಸೃಷ್ಟಿಯನ್ನು ಕೈಗೊಳ್ಳಬೇಕೆಂದರೆ ನಿಮ್ಮಲ್ಲಿರುವ ತೀಕ್ಷ್ಣವಾದ ಮತ್ತು ಗೆರೆಯೆಳೆದಂತಹ ಪರಿಧಿಯು ಮಾತ್ರ ಸಾಕಾಗುವದಿಲ್ಲ. ಅದನ್ನು ಸಾಧಿಸಬೇಕಾದರೆ ನೀವು ಎಲ್ಲರೊಳಗೊಂದಾಗಬೇಕು. ಎಲ್ಲವೂ ನಿಮ್ಮ ಪ್ರಜ್ಞೆಯೊಳಗೊಂದಾಗಿರಬೇಕು.

ಹಾಗೆ ನೋಡಿದರೆ ಇದು ಬಹು ಕಷ್ಟಕರವಾದ ಕಾರ್ಯವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/243–45**

## ಧಾರ್ಮಿಕತೆಯಲ್ಲಿ ಪೂಜಾರಾಧನೆಗಿರುವ ಮಹತ್ವ

*ಶ್ರೀಮಾತೆಯವರೇ, ತನ್ನ ಆಧ್ಯಾತ್ಮಿಕ ತೃಪ್ತಿಯ ಸಂಪೂರ್ಣತೆಯನ್ನು ಬಿಂಬಿಸುವ ಸಂಕೇತವೊಂದನ್ನು ಬಯಸುವ "ಈ ಮರ್ತ್ಯ ಸ್ವಭಾವದಲ್ಲಿರುವ ದಿವ್ಯತೆಯ ಆ ಅಂಶವು" ಯಾವುದು?*

ಮರ್ತ್ಯದ ಈ ಸ್ವಭಾವವೇ ಹಾಗೇ, ಇದು ಅಮೂರ್ತತೆಯ ಪರಿಕಲ್ಪನೆಯಿಂದ ಮಾತ್ರ ತೃಪ್ತವಾಗುವದಿಲ್ಲ. ಮತ್ತು ಭೌತಿಕ ಬದುಕಿನಿಂದ ಪಾರಾಗುವ ಮಾರ್ಗದಲ್ಲಿ ಯಾವುದನ್ನೂ ಅದು ಇರುವಂತೆಯೇ ಸ್ವೀಕರಿಸಲು ಸಿದ್ಧವಿರುವದಿಲ್ಲ. ಮರ್ತ್ಯದ ಈ ಸ್ವಭಾವವು ಸದಾ ಪೂರ್ಣತ್ವವನ್ನೇ ಬಯಸುತ್ತದೆ. ಹಾಗೂ ತಾನು ಯಾವಾಗಲೂ ಸಮಗ್ರವಾಗಿಯೂ–ಸಂಪೂರ್ಣವಾಗಿಯೂ ರೂಪಾಂತರಗೊಳ್ಳಬೇಕೆಂದೂ, ತನ್ನ ಭಾವ ಪೂಜೆಯಲ್ಲಿ ತಾನು ಪೂರ್ಣತ್ವವನ್ನೇ ಪರಿಪಾಲಿಸಬೇಕೆಂದು ಧೇನಿಸುತ್ತದೆ.

ಓರ್ವ ವ್ಯಕ್ತಿಯು ತನ್ನ ಆಂತರ್ಯದಲ್ಲಿ ಸದಾ ಯಾವುದನ್ನು ಕುರಿತು ಯೋಜಿಸುತ್ತಿರುತ್ತಾನೋ ಅದನ್ನು ಭೌತಿಕ ರೂಪಕ್ಕೆ ಪರಿವರ್ತಿಸಿ ಕೈಗೂಡಿಸಿಕೊಳ್ಳುವ ಪ್ರಕ್ರಿಯೆಯು ಬಹು ಅವಶ್ಯಕವಾಗಿದೆ. ಈ ಜೀವನದ ಜಂಜಡದಿಂದ ತಪ್ಪಿಸಿಕೊಂಡು ತಾನು ಮಾತ್ರ ಸಾಕ್ಷಾತ್ಕಾರಗಳನ್ನು ಅನುಭವಿಸಲೆಂದು ನೋಂತ ವ್ಯಕ್ತಿಯು ಗುಣಗಳು ಅಪೂರ್ಣ ಮತ್ತು ದುರ್ಬಲವಾದ ಸ್ವಭಾವಗಳಾಗಿವೆ. ಆದರೆ ಯಾರು ತಮ್ಮ ಆಂತರ್ಯದಲ್ಲಿ ಶಕ್ತಿ, ಬಲ ಮತ್ತು ಆರೋಗ್ಯಕರ ಭಾವನೆಗಳನ್ನು ಹೊಂದಿರುವರೋ ಅವರು ತಮ್ಮ ಭೌತಿಕದಲ್ಲಿ ಆಧ್ಯಾತ್ಮಿಕ ಸಾಕ್ಷಾತ್ಕಾರಗಳನ್ನು ಅರಿತುಕೊಳ್ಳಲು ಹಾತೊರೆಯುತ್ತಿರುತ್ತಾರೆ. ಮೋಡದೊಳಗಣ ತಾಣ(ಸ್ಮೃತಿ–ಬುದ್ಧಿ–ಕಲ್ಪಕತೆ)ಗಳಲ್ಲಿ

ಅಥವಾ ಯಾವುದೇ ರೂಪ–ಅಸ್ತಿತ್ವಗಳನ್ನು ನಿರ್ಮಿಸದ ಪ್ರಪಂಚಗಳಲ್ಲಿ ಅವರು ತೃಪ್ತಿಯನ್ನು ಅನುಭವಿಸುವದಿಲ್ಲ. ಹಾಗಾಗಿ ಅವರು ಇದಕ್ಕೂ ಮುಂದಣ ದರ್ಶನಗಳಿಗೆ ಯೋಗ್ಯರಾಗಬೇಕಿದ್ದರೆ ಅವರು ಮೊದಲು ಭೌತಿಕ ಪ್ರಜ್ಞೆಯನ್ನು ಹೊಂದಿರಬೇಕು. ಮತ್ತು ಅವರ ದೈಹಿಕ ಬಲವು ಆಂತರ್ಯದ ಅನುಭೂತಿಯಲ್ಲಿ ಜೊತೆಯಾಗಿ ನಡೆಯಲು ಸಿದ್ಧವಿರಬೇಕು.

ಈಗ ಆರಾಧನೆಯ ವಿಷಯಕ್ಕೆ ಬಂದರೆ ಪ್ರತಿಯೋರ್ವರೂ ಒಂದು ಧರ್ಮವನ್ನು ಅಪ್ಪಿಕೊಂಡು ಅದರ ಆದರ್ಶಗಳಿಗೆ ಒಳಗಾಗಿ ಅದರಂತೆಯೇ ಅನುಸರಿಸಬೇಕಾಗುತ್ತದೆ. ಇದು ಅತ್ಯಗತ್ಯವೂ ಹೌದು. ಹಾಗೆಂದ ಮಾತ್ರಕ್ಕೆ ಯಾರದೋ ನಿರ್ದೇಶನದಂತೆ ನಡೆದು 'ಕುರಿಹಿಂಡಿನ ಪ್ರವೃತ್ತಿ'ಯ ಬೆನ್ನುಹತ್ತಿ ಧರ್ಮವೊಂದನ್ನು ಪ್ರವೇಶಿಸುವುದು ಉಚಿತವಲ್ಲ. ಬದಲಾಗಿ ಎಲ್ಲರೂ ತಾವು ಸೇರಬೇಕಿರುವ ಧರ್ಮದ ನೀತಿ–ನಿಯಮಗಳನ್ನು ಸರಿಯಾಗಿ ಅರ್ಥೈಸಿಕೊಂಡು ಸ್ವಯಂಪ್ರೇರಿತವಾಗಿ ಆ ಆರಾಧನಾ ಸ್ವರೂಪವನ್ನು ಸ್ವೀಕರಿಸಬೇಕು. ಇದರಿಂದ ವ್ಯಕ್ತಿಯು ಆ ಧರ್ಮದ ದೈವಿಕತೆಯೊಂದಿಗೆ ನೇರ ಸಂಬಂಧವನ್ನು ಹೊಂದುವಂತಾಗುತ್ತದೆ.

ಯಾವುದೋ ಒಂದು ಧರ್ಮದಲ್ಲಿ ನಮ್ಮ ಜನ್ಮವಾಗಿದೆಯೆಂದೋ ಅಥವಾ ನಮಗೆ ಬೇಕಿರುವ ಜನರು ಆ ಧರ್ಮದಲ್ಲಿ ಶ್ರದ್ಧೆ–ನಂಬಿಕೆಗಳನ್ನು ಬೆಳೆಸಿಕೊಂಡಿದ್ದಾರೆ ಎಂದೋ ನಾವೂ ಸಹ ಅದೇ ಧರ್ಮವನ್ನು ಪಾಲಿಸಬೇಕೆಂಬ ನಿಯಮವು ಸರಿಯಲ್ಲ. ಇದನ್ನು ಇನ್ನೂ ಸರಳವಾಗಿ ಹೇಳಬೇಕಾದರೆ ಓರ್ವ ವ್ಯಕ್ತಿಯು ಬೇರೆ ಧರ್ಮದ ಆರಾಧನಾ ಮಂದಿರಗಳಿಗೆ ತೆರಳಿದಾಗ ಅಲ್ಲಿಯ ಧಾರ್ಮಿಕರು ಸಲ್ಲಿರುವ ಆರಾಧನಾ ವಿಧಾನಗಳನ್ನು ನೋಡಿ ತಾನೂ ಅದೇ ರೀತಿಯ ಪೂಜಾ ವಿಧಾನವನ್ನು ಪಾಲಿಸಬೇಕು ಎಂದು ಯೋಜಿಸುವ ಮನಸ್ಥಿತಿಯು ಬಲವಾದ ಸಂಕೇತವಲ್ಲ. ಬದಲಾಗಿ ಅದು ದೌರ್ಬಲ್ಯದ ಸಂಕೇತವಾಗಿದೆ. ಯಾವಾಗ ಆ ವ್ಯಕ್ತಿಯಲ್ಲಿ ಸ್ವಂತಿಕೆಯ ಕೊರತೆಯು ಇರುತ್ತದೆಯೋ ಆಗ ಮಾತ್ರ ಇಂತಹ ಸಂದಿಗ್ಧಗಳು ಮೂಡಿಬರುತ್ತವೆ.

ಯಾವಾಗ ವ್ಯಕ್ತಿಯು ತನ್ನ ಆಂತರ್ಯದಲ್ಲಿರುವ ಅಭೀಪ್ಸೆಗಳನ್ನು ಭೌತಿಕ ರೂಪಕ್ಕೆ ಪರಿವರ್ತಿಸಲು ಪ್ರಯತ್ನಿಸುನೋ ಆಗ ಆರಾಧನೆಯ ವಿಚಾರವು ಅವನಿಗೆ ನ್ಯಾಯಸಮ್ಮತವಾದ ವಿಧಾನವಾಗಿ ಕಂಡುಬರುತ್ತದೆ. ಆಗ ವ್ಯಕ್ತಿಯು ತನ್ನಲ್ಲೇ

ಇಬ್ಬಗೆಯ ನಿಲುಮೆಗೆ ಒಳಗಾಗುತ್ತಾನೆ. ಅವನು ಭೌತಿಕವಾಗಿ ಬಹು ಸರಳ ಜೀವನವನ್ನು ನಡೆಸಲು ಹೆಣಗುತ್ತಾನೆ, ಅದನ್ನು ಬಹಳ ಯಾಂತ್ರಿಕವಾಗಿ ಹಿಡಿದಿಟ್ಟಿಕೊಳ್ಳಲು ಪ್ರಯತ್ನಿಸುತ್ತಾನೆ. ಒಂದು ವೇಳೆ ಅವನು ಅದನ್ನು ಸಾಧಿಸಿದಾಗ ಅವನು ತನ್ನಿಂದ ತಾನೆ ದೂರವಾಗುತ್ತಾ ಸಾಗುತ್ತಾನೆ. ತನ್ನ ಭೌತಿಕ ಜೀವನವನ್ನು ಭೌತಿಕ ಪ್ರಜ್ಞೆಯಿಂದ ಬೇರಾಗಿಸಿಬಿಡುತ್ತಾನೆ. ಕೊನೆಗೆ ಅವನು ಪಡೆಯಬೇಕಿರುವ ಆಧ್ಯಾತ್ಮಿಕ ಸಾಧನೆಯಿಂದ ಬಹು ದೂರ ಸಾಗಿಬಿಡುತ್ತಾನೆ.

ಯಾವ ವ್ಯಕ್ತಿಯು ತನ್ನ ಭೌತಿಕ ಜೀವನವನ್ನು ತನ್ನ ಅತ್ಯುನ್ನತ ಅಭೀಪ್ಸೆಯ ಅಭಿವ್ಯಕ್ತಿಯನ್ನಾಗಿ ಪರಿವರ್ತಿಸಲು ಪ್ರಯತ್ನಿಸುವನೋ ಅವನು ಬಹು ಉದಾರಿಯೂ, ಪ್ರಾಮಾಣಿಕ ಸ್ವಭಾವದವನೂ ಆಗಿರುತ್ತಾನೆ. ಹಾಗೂ ಈ ಮಾರ್ಗದಲ್ಲಿ ಅವನು ತನ್ನನ್ನು ಇಬ್ಬಗೆಯ ಭಾಗವಾಗಿ ವಿಭಜಿಸಿಕೊಂಡು ಸಾಧನೆಯಲ್ಲಿ ತೊಡಗುತ್ತಾನೆ. ಅವನಿಗೆ ತನ್ನ ಭೌತಿಕ ಜೀವನದಲ್ಲಿ ಯಾವುದೇ ಪ್ರಾಮುಖ್ಯತೆಯಿರುವದಿಲ್ಲ. ಅವನು ತನ್ನ ಆಂತರ್ಯದ ಮಾತಿಗೆ ಕಿವಿಗೊಟ್ಟು ನಡೆಯುತ್ತಾನೆ. ಹಾಗೂ ಯಾವುದೋ ಆಸೆಗಾಗಿ ತನ್ನ ನಿಯಮವನ್ನು ಬದಲಿಸುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/245–47 – ಶ್ರೀಮಾತೆ**

“ಯಾವುದೇ ಆರಾಧನಾ ವಿಧಾನದಲ್ಲಿ ಆ ವ್ಯಕ್ತಿಯು ಅದರ ಮಹತ್ವದ ವಿಧಿಗಳನ್ನು ರಚಿಸಿ ಅದನ್ನು ಸಮೃದ್ಧವಾಗಿ, ಸೌಂದರ್ಯಶೀಲವಾಗಿ, ಅಭಿವ್ಯಕ್ತಿಶೀಲವಾಗಿ ತೋರ್ಪಡಿಸುವುದೇ ಮುಖ್ಯವಲ್ಲ. ಬದಲಿಗೆ ಆ ಆರಾಧನೆಯನ್ನು ತನ್ನ ಹೃದಯದ ಭಾವನೆಯಾಗಿ, ಅದನ್ನೇ ತನ್ನ ಅಭೀಪ್ಸೆಯಾಗಿ ರೂಪಿಸಿಕೊಳ್ಳುವುದೇ ಅದರ ಭೌತಿಕ ವಿಧಾನವಾಗಿದೆ. ಹಾಗಾಗಿ ಆಧ್ಯಾತ್ಮಿಕ ಅಭೀಪ್ಸೆಯಿಲ್ಲದ ಆರಾಧನೆಯು ಅರ್ಥಹೀನವೂ–ನಿಷ್ಪ್ರಯೋಜಕವೂ ಆಗಿರುತ್ತದೆ. ಅದನ್ನು ವೈಭವಯುತವಾಗಿ, ಸೌಂದರ್ಯಭರಿತವಾಗಿ ನೆರವೇರಿಸದೆ ಕೇವಲ ಆಂತರಿಕ ಅಭೀಪ್ಸೆಯಿಂದ ನೋಡಿದರೂ ಸಾಕು ಅದು ಜೀವನದಲ್ಲಿ ಪರಿಣಾಮಕಾರಿಯಾದ ಶಕ್ತಿಯನ್ನು ಸೃಷ್ಟಿಸುತ್ತದೆ. ಔಪಚಾರಿಕವಲ್ಲದ ಅರ್ಥಪೂರಿತವಾದ ಆರಾಧನೆಯು ಅದನ್ನು ನಿರೂಪಿಸುವ ವ್ಯಕ್ತಿಗೆ ಶಕ್ತಿಯನ್ನು ಧಾರೆಯೆರೆಯುತ್ತದೆ. ಆದರೆ ಬಹುಪಾಲು ಜನರು ಈ ಆರಾಧನಾ ವಿಧಾನವನ್ನು ಕೇವಲ ಒಂದು ಸಂಕೇತದಂತೆ ಕಂಡು ಅದನ್ನು ಯಾಂತ್ರಿಕ ವಿಧಿಯಾಗಿ ಆಚರಿಸುತ್ತಾರೆ. ಈ ಸಂಕೇತ, ಮಹತ್ವದ ವಿಧಿಗಳಾವುವೂ ಮುಖ್ಯವಲ್ಲ. ಬದಲಾಗಿ ವ್ಯಕ್ತಿಯು ತನ್ನ ಆಂತರಿಕ ಅಭೀಪ್ಸೆಯನ್ನು ಆರಾಧನೆಯ

ರೂಪದಲ್ಲಿ ಹೃದಯ ತುಂಬಿದ ಭಾವನೆಯಿಂದ ನಿರೂಪಿಸುವುದೇ ಆರಾಧನೆಯ ಭೌತಿಕ ಸಾಧನವಾಗಿದೆ. ಅಭೀಪ್ಸೆಯಿಲ್ಲದ ಆರಾಧನೆಯು ಅರ್ಥಹೀನವೂ–ನಿಷ್ಪ್ರಯೋಜಕವೂ ಆದರೆ ಅಭಿಪ್ಸೆಯೆಂಬುದು ಕ್ರಿಯೆಯಿಲ್ಲದ–ರೂಪವಿಲ್ಲದ ಅಂಶವಾಗಿದೆ. ಇದರಿಂದ ಜೀವನದಲ್ಲಿ ಅಪೂರ್ಣವಾದ ಶಕ್ತಿಯು ದೊರೆಯುತ್ತದೆ. ಆರಾಧನೆಯು ಮಾನವ ಜೀವನವನ್ನು ಹೊಳೆಯುವ ಮುತ್ತಿನಂತೆ ಪರಿವರ್ತಿಸಬೇಕು. ಆದರೆ ಹಲವರು ಅದನ್ನು ಸಮಾರಂಭದಂತೆ, ಯಾಂತ್ರಿಕ ವಿಧಿಯಂತೆ ನಡೆಸಿ ತಮ್ಮಾಂತರ್ಯದಲ್ಲಿ ರೂಪುಗೊಳ್ಳಬೇಕಿರುವ ಮುತ್ತನ್ನು ದುರದೃಷ್ಟವಶಾತ್ ಅಪೂರ್ಣವಾಗಿಸುತ್ತಾರೆ. ಇಂತಹ ವಿಧಾನವು ಧರ್ಮದ ಆತ್ಮವನ್ನೇ ಹತ್ಯೆಗೈಯುತ್ತದೆ. ಕೊನೆಗೆ ಆರಾಧನೆಗೆ ಮೂಲ ರೂಪವನ್ನೇ ಬದಲಿಸಿಬಿಡುತ್ತದೆ. ಇದರಿಂದ ಕ್ಷುದ್ರ ರೀತಿಯ ಆರಾಧನೆಗಳು ಆರಂಭವಾಗುತ್ತವೆ. ಆದರೆ, ಕೆಲವೊಮ್ಮೆ ಆರಾಧನೆಯ ಬಾಹ್ಯ ಸಂಕೇತಗಳನ್ನು ತ್ಯಜಿಸಿ ಮಾನವ ಸ್ವಭಾವದಲ್ಲಿ ಮೊದಲಿನಿಂದಲೇ ಸ್ಥಾಯಿಯಾಗಿರುವ ಒಂದು ನಿರ್ದಿಷ್ಟವಾದ ದೈವೀಕ ಅಂಶವು ಸಂಪೂರ್ಣವಾದ ಆಧ್ಯಾತ್ಮಿಕ ತೃಪ್ತಿಯೆಡೆಗೆ ತುಡಿಯುತ್ತಿರುತ್ತದೆ. ಅಂತಹ ಸಂಕೇತಗಳು ಯಾವಾಗಲೂ ನ್ಯಾಯಪೂರಿತವಾಗಿಯೂ, ನೈಜತೆಯಿಂದ ಕೂಡಿರುವಂತಹುದೂ, ಪ್ರಾಮಾಣಿಕವಾದದ್ದೂ, ಸಂತೋಷ ಮತ್ತು ಸೌಂದರ್ಯಭರಿತಾಗಿಯೂ ಇರುತ್ತದೆ. ಈ ರೀತಿಯ ಭಾವನಾತ್ಮಕವಾದ, ಸೌಂದರ್ಯಭರಿತವಾದ, ಆಧ್ಯಾತ್ಮಿಕ ಪ್ರಜ್ಞೆಯಿಲ್ಲದ ಆರಾಧನೆಯು ಸಮಗ್ರವಾದ ವಿಧಾನವಾಗಲು ಸಾಧ್ಯವಿಲ್ಲ. ಈ ಆಧ್ಯಾತ್ಮಿಕ ಪ್ರಜ್ಞೆಯು ಸದಾ ಕ್ರಿಯಾಶೀಲವಾಗಿದ್ದು, ಆರಾಧನೆಯ ವಿಧಾನವನ್ನು ನಿರಂತರವಾಗಿ ನವೀಕರಿಸುತ್ತಾ, ಹೊಸ ರೂಪಗಳಲ್ಲಿ ತನ್ನನ್ನು ತಾನು ವ್ಯಕ್ತಪಡಿಸುತ್ತಾ, ತನ್ನ ಚೇತನದ ಮೂಲಕ ಸತ್ಯವನ್ನು ನವೀಕರಿಸುತ್ತಾ ಅದನ್ನು ದೀರ್ಘ ಕಾಲಿಕವಾಗಿಸುತ್ತಾ ಸಾಗುತ್ತದೆ. ಈ ಆರಾಧನಾ ಕ್ರಿಯೆಯು ಸತ್ಯ ಆತ್ಮದ ಸಂಕೇತವಾಗಿದೆ. ಅದರ ಸೃಜನಶೀಲ ದೃಷ್ಟಿಯೂ, ಪ್ರಚೋದನೆಯ ಸ್ವಭಾವವೂ ಆಗಿದೆ. ಹಾಗಾಗಿ ಆಧ್ಯಾತ್ಮಿಕ ಅನ್ವೇಷಕನು ಸದಾ ತನ್ನ ಜೀವನವನ್ನು ಪರಿವರ್ತಿಸುತ್ತಾ ಅದನ್ನು ವೈಭವೀಕರಿಸುತ್ತಾ ಮೇಲೆರಬೇಕು."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 22/163–64 – ಶ್ರೀ ಅರವಿಂದರು**

*ಪ್ರಿಯ ಮಾತೆಯವರೆ, ಕಳೆದ ಆಗಸ್ಟನಲ್ಲಿ Y ಎಂಬುವವರು ನನ್ನನ್ನು ಭೇಟಿಯಾಗಿ, "ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರ ಶಿಷ್ಯರು ತಮ್ಮ*

*ತಮ್ಮ ಕೇಂದ್ರಗಳಲ್ಲಿ ಇತರ ದೇವತೆಗಳ ಪೂಜೆಯನ್ನು ಮಾಡಲು ಅನುಮತಿ ಇದೆಯೇ?"* ಎಂದು ಕೇಳಿದರು. *ಕೆಲವರು ತಾವು ಆರಾಧಿಸುತ್ತಿರುವ ದೇವತೆಗಳ ಮೂಲಕವೇ ಸುಪ್ರಮಾನಸದ ಯೋಗಿಕ ಸ್ತರವನ್ನು ಮುಟ್ಟಬಹುದು ಎಂದು ಬರೆದಿದ್ದರು. ಇದರಿಂದ ಬಹಳ ಗೊಂದಲವು ಏರ್ಪಟ್ಟಿತ್ತು. ಶ್ರೀ ಅರವಿಂದರ ಮತ್ತು ಶ್ರೀಮಾತೆಯವರ ಆದರ್ಶಗಳನ್ನು ಪ್ರಚುರಪಡಿಸುವ ದೃಷ್ಟಿಯಿಂದ ನಾವು ಪ್ರಾಕ್ತನ ಪುರಾಣಗಳನ್ನು, ತುಳಸಿ ರಾಮಾಯಣದಂತಹ ಗ್ರಂಥಗಳನ್ನು ವಿವರಿಸುತ್ತಿದ್ದೇವೆ. ಏಕೆಂದರೆ ಅವರ ಪ್ರಕಾರ ರಾಮ, ಕೃಷ್ಣ, ಸೀತೆ ಮುಂತಾದ ಪುರಾಣ ಪುರುಷರುಗಳೆಲ್ಲರೂ ಸುಪ್ರಮಾನಸದ ಸತ್ಯವನ್ನು ನೀಡುವ ದೈವತಗಳೇ ಆಗಿದ್ದಾರೆ.*

ದೇವರನ್ನು ನಂಬುವ ಜನರು ಅವರ ಇಷ್ಟಾನುಸಾರವಾಗಿ ಅವರ ಆರಾಧನೆಯನ್ನು ಮುಂದುವರಿಸಬಹುದು. ಆದರೆ, ಈ ಧರ್ಮ ಮತ್ತು ಆರಾಧನೆಯ ವಿಧಾನಗಳಾವುವೂ ಶ್ರೀ ಅರವಿಂದರ ಭೋದನೆಗಳಿಗೆ ಸಂಬಂಧಿಸಿಲ್ಲ. ಹಾಗೂ ಅತ್ಯುನ್ನತ ದರ್ಶನದ ಹಂತದಲ್ಲಿ ಇವುಗಳ ಯಾವ ಸಂಬಂಧವೂ ಇಲ್ಲವೆಂಬುದನ್ನು ಮಾತ್ರ ಅವರು ಮನಗಂಡಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/387–88**

ಆ ಪರಮಾತ್ಮನ ಸಂಪೂರ್ಣ ಸೃಷ್ಟಿಯು ಮರ್ತ್ಯದ ಮೇಲೆ ಸಾಕ್ಷಾತ್ಕಾರವಾಗ–ಬೇಕಾದರೆ ಸರ್ವ ದೇವತೆಗಳೂ ಸಹ ಆ ಪರಮಾತ್ಮನಲ್ಲಿ ಶರಣಾಗತರಾಗಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/13** **– ಶ್ರೀಮಾತೆ**

ಆರಾಧನೆಯದು ಆರಾಧಕನ ಬಗ್ಗಿದ ಬಲವನ್ನೆತ್ತಿ ಭರಿಸುವುದು
ನಿಲಿಂಪರ ನಿಲಯದೆಡೆಗೆ ನಡೆಸಿ ವಿಶ್ವಾತ್ಮದ ವ್ಯೂಹದೊಳಗೆ ತನ್ನಾತ್ಮವ
ತಲುಪುದು.

**Savitri, p. (ಸಾವಿತ್ರಿ ಪುಟ) 125** **– ಶ್ರೀ ಅರವಿಂದರು**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

– **ಅನುವಾದ: ಜಾನ್ವಿ**

**29**

### ಅಧ್ಯಾಯ – 22
### ಪ್ರಕೃತಿಯ ನಿಗುಣಗಳಾಚೆಗೆ (22/2)

(ಮುಂದುವರಿದುದು) ಪ್ರಕೃತಿಯಲ್ಲಿ ವ್ಯಕ್ತವಾಗಿರುವ, ಪ್ರಕೃತಿಯ ಚಲನೆಗಳಲ್ಲಿ ಬದ್ಧವಾಗಿರುವ ಜೀವನು ಪುರುಷನ ಒಂದು ಅವಸ್ಥೆಯೇ. ಈ ಅವಸ್ಥೆಯ ಆಚೆಗೆ ಪುರುಷನ ಇನ್ನೊಂದು ಅವಸ್ಥೆಯೂ ಇದೆ. ಈ ಅವಸ್ಥೆಯಲ್ಲಿ ಕ್ರಿಯೆ ಇರುವುದಿಲ್ಲ. ಇದು ಕೇವಲ ಸ್ಥಿತಿಶೀಲ ಅವಸ್ಥೆಯಾಗಿದ್ದು, ಈ ಅವಸ್ಥೆಯಲ್ಲಿರುವ ಪುರುಷನನ್ನು ಅಕ್ಷರ ಪುರುಷ ಎಂದು ಕರೆಯುತ್ತಾರೆ. ಶಾಂತ, ಅವ್ಯಯ, ಸರ್ವಗಾಮಿ, ಸ್ವಯಂಭೂ, ಗತಿಹೀನ ಆತ್ಮ (ಸರ್ವಗತಂ ಅಚಲಂ) ಇದು ಈ ಪುರುಷನ ಲಕ್ಷಣ. ಇಲ್ಲಿ ಸಾಕಾರ, ಸಗುಣ ಇಲ್ಲ. ಇಲ್ಲಿ ಕೇವಲ ಅವಿಕಾರ್ಯ ಶುದ್ಧ ಅಸ್ತಿತ್ವ ಮಾತ್ರ ಇರುತ್ತದೆ. ಕ್ಷರ ಅವಸ್ಥೆಯಲ್ಲಿ ಪ್ರಕೃತಿಯ ಕ್ರಿಯಾ ಕಲಾಪಗಳಲ್ಲಿ ಪುರುಷನು ಸಂಲಗ್ನವಾಗಿ ಹೋಗಿರುತ್ತಾನೆ. ಅಂತೆಯೇ, ಅವನು ಕಾಲಘಟಕಗಳಾದ ಕ್ಷಣ ಕ್ಷಣಗಳಲ್ಲಿ, ಸಾಕಾರತೆಯ ಪ್ರತಿ ಸ್ಪಂದನೆಗಳಲ್ಲಿ ಕೇಂದ್ರಿತವಾಗಿ ತನ್ನನ್ನೇ ತಾನು ಮರೆತುಬಿಟ್ಟಿರುತ್ತಾನೆ. ತನ್ನ ನಿಜ ಸ್ವರೂಪವನ್ನು ಕಳೆದುಕೊಂಡುಬಿಟ್ಟಿರುತ್ತಾನೆ. ಹಾಗೆಂದು ಸಂಪೂರ್ಣವಾಗಿ ಕಳೆದುಕೊಂಡುಬಿಟ್ಟಿರುತ್ತಾನೆ ಎಂದೇನೂ ಅರ್ಥವಲ್ಲ; ಹಾಗೆ ಕಳೆದುಕೊಂಡಿರುವಂತೆ ತೋರುತ್ತಾನೆ. ಪ್ರಪಂಚದ ಚಲನೆಯಲ್ಲಿ ತನ್ನನ್ನು ಮರೆತಿರುವಂತೆ ತೋರುತ್ತಾನೆ. ಅಕ್ಷರ ಪುರುಷನ ಅವಸ್ಥೆಯಲ್ಲಿ ಪ್ರಕೃತಿಯು ಶಾಂತವಾಗಿರುತ್ತದೆ, ನಿಷ್ಕ್ರಿಯವಾಗಿರುತ್ತದೆ, ಆತ್ಮನಲ್ಲಿ ವಿಶ್ರಾಂತ ಸ್ಥಿತಿಯಲ್ಲಿ ಇರುತ್ತದೆ. ಅಂತೆಯೇ ಆ ಸ್ಥಿತಿಯಲ್ಲಿ ತನ್ನ ಅವಿಕಾರ್ಯ ಶುದ್ಧ ಸತ್ತೆಯ ಅರಿವು ಪುರುಷನಿಗೆ ಉಂಟಾಗುತ್ತದೆ. ಅಕ್ಷರ ಪುರುಷನೆಂದರೆ ಸಾಂಖ್ಯರ ಪ್ರಕಾರ ನಿರ್ಗುಣ ಅವ್ಯಕ್ತಿಭೂತ ಪುರುಷನಾಗಿದ್ದಾನೆ. ಪ್ರಕೃತಿಯ ಗುಣಗಳು ಸಾಮ್ಯಾವಸ್ಥೆಗೆ ಬಂದವೆಂದರೆ. ಪುರುಷನಿಗೆ ತಾನು ಸ್ವತಃ ನಿರ್ಗುಣನು, ನಿರ್ವ್ಯಕ್ತನು ಎಂಬುದು ಬೋಧವಾಗುತ್ತದೆ. ಪ್ರಕೃತಿಯ ಕರ್ಮಗಳಿಗೆ ಬದ್ಧನಾಗಿರುವ ಅಥವಾ ಅವುಗಳ ಜೊತೆ ಗುರುತಿಸಿಕೊಂಡಿರುವ ಕ್ಷರ ಪುರುಷನು "ಕರ್ತೃ"ವಾಗಿ ತೋರುತ್ತಾನೆ.

ಪ್ರಕೃತಿಯ ಗುಣಗಳಿಂದ ಭಿನ್ನವಾಗಿರುವ ಅಥವಾ ಅವುಗಳ ವ್ಯಾಪಾರದಿಂದ ಹೊರತಾಗಿರುವ ಪುರುಷನು 'ಅಕರ್ತೃ'ವಾಗಿ ತೋರುತ್ತಾನೆ. ಕೇವಲ ಸಾಕ್ಷಿಯಾಗಿ ತೋರುತ್ತಾನೆ. ಜೀವನು (ಮಾನವನ ಜೀವಾತ್ಮನು) ಕ್ಷರ ಪುರುಷನ ಅವಸ್ಥೆಯನ್ನು ಧಾರಣ ಮಾಡಿರುವಾಗ ವ್ಯಕ್ತಿತ್ವದ ವ್ಯವಹಾರಗಳ ಜೊತೆ ಏಕರೂಪನಾಗಿರುತ್ತಾನೆ ಹಾಗೂ ಪ್ರಾಕೃತಿಕ ಅಹಂ ಭಾವನೆಯ ಪ್ರಭಾವದಿಂದಾಗಿ ಅವನ ಆತ್ಮಜ್ಞಾನ ಕ್ಷೀಣವಾಗುತ್ತದೆ. ತನ್ನನ್ನು ಪ್ರಾಕೃತಿಕ 'ಅಹಂ'ನ ಜೊತೆ ಸಮನೆನೆಸಿಕೊಂಡು ಪ್ರಕೃತಿಯ ಕಾರ್ಯಗಳ ಕರ್ತೃ ತಾನೇ ಎಂದು ಭಾವಿಸುತ್ತಾನೆ. ಇದೇ ಮಾನವ ಆತ್ಮನು ಅಕ್ಷರ ಪುರುಷನ ಅವಸ್ಥೆಯನ್ನು ಆಧರಿಸಿದಾಗ, ನಿರ್ವೈಯಕ್ತಿಕತೆಯ ಜೊತೆ ಒಂದಾಗುತ್ತಾನೆ. ಆಗ ಪ್ರಕೃತಿಯೇ ಎಲ್ಲ ಕರ್ಮಗಳನ್ನು ಮಾಡುತ್ತಾನೆ. ತಾನು ಮಾತ್ರ ಸ್ವತಃ ಅಕರ್ತಾ ಸಾಕ್ಷಿಯಾಗಿರುವುದಾಗಿ ತಿಳಿಯುತ್ತಾನೆ. ಮಾನವನ ಮನಸ್ಸಿಗೆ ಕರ್ತೃತ್ವ ಮತ್ತು ಅಕರ್ತೃತ್ವ ಎರಡೂ ಅವಸ್ಥೆಗಳನ್ನು ಏಕ ಕಾಲಕ್ಕೆ ಧಾರಣ ಮಾಡಲು ಸಾಧ್ಯವಾಗುವುದಿಲ್ಲ. ಒಂದು ಸಮಯಕ್ಕೆ ಒಂದು ಅವಸ್ಥೆ, ಬೇರೆ ಸಮಯಕ್ಕೆ ಬೇರೆ ಅವಸ್ಥೆ ಹೀಗೆ ಒಂದಾದನಂತರ ಇನ್ನೊಂದು ಅವಸ್ಥೆಯನ್ನು ಧಾರಣ ಮಾಡಲು ಸಾಧ್ಯವಾಗಬಲ್ಲದೇ ಹೊರತು ಎರಡನ್ನೂ ಏಕ ಕಾಲಕ್ಕೆ ಧಾರಣ ಮಾಡಲಾರದು. ಮಾನವನ ಆತ್ಮವು ಪ್ರಕೃತಿಯ ಚಲನೆಗಳ ಜೊತೆ, ಕಾರ್ಯಗಳ ಜೊತೆ ಒಂದಾದಾಗ ತನ್ನ ಅಸ್ತಿತ್ವದಲ್ಲಿ, ವ್ಯಕ್ತಿತ್ವದಲ್ಲಿ ವಿಕಾರಗಳನ್ನು ಹೊಂದುತ್ತದೆ; ಅದೇ ಅವುಗಳಿಂದ ಬೇರ್ಪಡಿಸಿಕೊಂಡಾಗ ಅವಿಕಾರ್ಯ ಸ್ಥಿತಿಯನ್ನು ಹೊಂದಿ, ಅಕರ್ತೃತ್ವ ಸ್ಥಿತಿಯನ್ನು ಧಾರಣ ಮಾಡುತ್ತದೆ. ಆದರೆ ಇವರೆಡೂ ಪುರುಷನ ಅವಿಕಾರ್ಯ ಮತ್ತು ಅಚಲ ಸ್ಥಿತಿ ಹಾಗೂ ಪುರುಷನ ಕ್ರಿಯಾಶೀಲ ಸ್ಥಿತಿ, ಪ್ರಕೃತಿಯಲ್ಲಿ ಅದರ ವಿಕಾರ ಹೊಂದುವ ಸ್ಥಿತಿ, ವಾಸ್ತವಿಕವಾಗಿ ಏಕ ಕಾಲಕ್ಕೆ ಪರಸ್ಪರ ಹೊಂದಿಕೊಂಡೇ ಇರುತ್ತವೆ. ಇದೊಂದು ಅಸಾಮಾನ್ಯದಾದ ವಸ್ತುಸ್ಥಿತಿಯಾಗಿದ್ದು. ತರ್ಕಬುದ್ಧಿಗೆ ಅಗ್ರಾಹ್ಯವಾದ ಸಂಗತಿಯಾಗಿದೆ. ಇದರ ಸಮಾಧಾನಕರ ಸ್ಪಷ್ಟೀಕರಣವನ್ನು ಮಾಯಾವಾದದ ಮೂಲಕ ಅಥವಾ ಪುರುಷನ ಅಂತಃಸ್ಥ ಭೇದ ಅಥವಾ ದ್ವೈತ ಸಿದ್ಧಾಂತದ ಮೂಲಕ ಮಾತ್ರ ಮಾಡಲು ಸಾಧ್ಯವಾಗಬಹುದು. ಇನ್ನೊಂದು ರೀತಿಯ ಸಮಾಧಾನವನ್ನೂ ಹೇಳಬಹುದು, ಪುರುಷನಲ್ಲಿ ಈ ರೀತಿಯ ಎರಡು ಭಾಗಗಳನ್ನು ಮಾಡಿ, ಇವೆರಡೂ ಪರಸ್ಪರ ವಿರೋಧಿಯಾಗಿದ್ದರೂ ಸಹ ಮೂರನೆಯ ಪ್ರಕಾರದ ಅತ್ಯಂತ ಶ್ರೇಷ್ಠ ಪುರುಷನ ಸ್ಥಿತಿಯೂ ಇದೆ, ಇದು ಕ್ಷರವೂ ಅಲ್ಲ, ಅಕ್ಷರವೂ ಅಲ್ಲ, ಅವುಗಳಿಂದ ಮರ್ಯಾದಿತವು ಆಗಿಲ್ಲ. ಇದು ಪುರುಷ ಶ್ರೇಷ್ಠ

ಅಥವಾ ಪುರುಷೋತ್ತಮನ ಸ್ಥಿತಿ ಎಂಬ ಸಿದ್ಧಾಂತವನ್ನು ಮಂಡಿಸಿ ಸಮಾಧಾನಕರ ಪರಿಹಾರ ಹೇಳಬಹುದು. ಇದನ್ನೇ ಗೀತೆಯು "ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮ ಇತ್ಯುದಾಹೃತಃ" (15: 16–18) ಎಂದು ಸ್ಪಷ್ಟಪಡಿಸುತ್ತದೆ. ಈ ಪುರುಷೋತ್ತಮನೇ ಈಶ್ವರನು, ಸಮಸ್ತ ಅಸ್ತಿತ್ವದ ಪ್ರಭುವು, ಸರ್ವಭೂತ ಮಹೇಶ್ವರನು. ಇವನು ತನ್ನ ಕ್ರಿಯಾಶೀಲ ಪ್ರಕೃತಿಯನ್ನು ಮುಂದೆ ಮಾಡಿಕೊಂಡು, ಸ್ವಾಂ ಪ್ರಕೃತಿಮ್; ಜೀವನಲ್ಲಿ ವ್ಯಕ್ತನಾಗುತ್ತಾನೆ. ಜೀವದ ಸ್ವಭಾವಕ್ಕನುಗುಣವಾಗಿ ಅಂದರೆ ತ್ರಿಗುಣಗಳ ಸಮ್ಮಿಲನದ ಅನುಪಾತದ ಪ್ರಕಾರ ಆಯಾ ಜೀವದ ಕಾರ್ಯಗಳನ್ನು ಚಾಲಿಸುತ್ತಾನೆ. ಜೀವನಲ್ಲಿ ಈಶ್ವರನು ನಿಶ್ಚಿತಗೊಳಿಸಿದ ವ್ಯವಹಾರ ನಿಯಮ ಅಥವಾ ಧರ್ಮವನ್ನನುಸರಿಸಿ, ಪ್ರಕೃತಿಯ ಕಾರ್ಯ ಕಲಾಪಗಳನ್ನು ನಡೆಸುತ್ತಾನೆ. ಜೀವನ ಅಹಂಮಯ ಪ್ರಾಕೃತಿಕ ವಿಭಾಗದಲ್ಲಿಯೂ ಸಹ ಈಶ್ವರನ ಪ್ರಕೃತಿಯ ಕಾರ್ಯ ನಡೆಯುವುದು. ತ್ರಿಗುಣಗಳ ಭಯಾನಕವಾದ ಆಟವು, ಪರಸ್ಪರ ಸಂಘರ್ಷ, ಕಲಹ, ಹೊಂದಾಣಿಕೆಯ ಕ್ರೀಡೆಯು ಈಶ್ವರನ ಚಾಲನೆಯ ಮೂಲಕವೇ ನಡೆಯುವುದು, "ಗುಣಾಃ ಗುಣೇಷು ವರ್ತಂತೇ" ತ್ರಿಗುಣಗಳ ಈ ಆಟವನ್ನು ಅಥವಾ ಮಾಯೆಯನ್ನು ದಾಟಿ ಆಚೆಗೆ ಹೋಗುವುದು ಬಹಳ ದುಸ್ತರವಾಗಿರುವುದು (ದುರತ್ಯಯಾ). ಆದರೂ ಸಹ ಈ ತ್ರಿಗುಣಗಳನ್ನು ದಾಟಿ, ದುರತ್ಯಯಾ ಮಾಹೆಯನ್ನು ಪಾರುಮಾಡಿ ಹೋಗುವುದು ಅಸಾಧ್ಯವೇನಲ್ಲ. ಈಶ್ವರನು ತನ್ನ ಪ್ರಕೃತಿ ಶಕ್ತಿಯಿಂದ ಕ್ಷರ ಪುರುಷನಲ್ಲಿದ್ದುಕೊಂಡು ಎಲ್ಲ ವ್ಯವಹಾರಗಳನ್ನು ಮಾಡುತ್ತಿರುತ್ತಾನೆ; ಆದರೆ ಅದೇ ಕಾಲಕ್ಕೆ ಅಕ್ಷರ ಪುರುಷನಲ್ಲಿ ನಿರ್ಲಿಪ್ತನಾಗಿ ಪ್ರಪಂಚದ ಎಲ್ಲ ವ್ಯವಹಾರಗಳಿಂದ ದೂರ ಇರುತ್ತಾನೆ. ಎಲವನ್ನೂ ಸಮಾನ ದೃಷ್ಟಿಯಿಂದ ನೋಡುತ್ತ, ಸಮ ಸ್ಥಿತನಾಗಿರುತ್ತ, ಎಲ್ಲದರಲ್ಲೂ ಅಂತರ್ಯಾಮಿಯಾಗಿದ್ದರೂ ಎಲ್ಲಕ್ಕಿಂತ ಮೇಲೆ ಶ್ರೇಷ್ಠನಾಗಿ ಇರುತ್ತಾನೆ. ಈ ಮೂರೂ ಅವಸ್ಥೆಗಳಲ್ಲಿ ಕ್ಷರ, ಅಕ್ಷರ ಮತ್ತು ಪುರುಷೋತ್ತಮ ಅವನು ಪ್ರಭುವಾಗಿ, ಈಶ್ವರನಾಗಿ ಇರುತ್ತಾನೆ. ಎಲ್ಲ ಕಾರ್ಯಗಳಿಗೆ ಅಧ್ಯಕ್ಷನಾಗಿ, ಎಲ್ಲೆಡೆಯೂ ವ್ಯಾಪ್ತನಾಗಿರುತ್ತಾನೆ. ಪುರುಷೋತ್ತಮನ ಸ್ಥಿತಿಯಲ್ಲಿ ಪ್ರಭುವಾಗಿ, ವಿಭುವಾಗಿ ಇದ್ದರೆ, ಅಕ್ಷರ ಸ್ಥಿತಿಯಲ್ಲಿ ಸಹಜವಾಗಿ ತಾನೇ ತಾನಾಗಿ ಇರುವ ಇಚ್ಛಾ ಶಕ್ತಿಯಾಗಿ, ಸಂಕಲ್ಪ ಶಕ್ತಿಯಾಗಿ ಇರುತ್ತಾನೆ; ಕ್ಷರ ಪುರುಷನ ಸ್ಥಿತಿಯಲ್ಲಿ ಸಕ್ರಿಯನಾದ ಸ್ವಾಮಿಯಾಗಿ, ಪ್ರಭುವಾಗಿ ಕಾರ್ಯ ಮಾಡುತ್ತಿರುತ್ತಾನೆ. ಅವನು ಮೂಲತಃ ಮುಕ್ತನು, ಸ್ವತಂತ್ರನು, ನಿರ್ವ್ಯೆಯಕ್ತಿಕ ರೂಪದಲ್ಲಿ ಅವನು ಈಶ್ವರನಾಗಿ ಆತ್ಮ

ತಂತ್ರನಾಗಿರುತ್ತಾನೆ. ಅದೇ ಕಾಲಕ್ಕೆ ತನ್ನ ಪ್ರಕೃತಿ ತಂತ್ರ ವ್ಯಕ್ತಿತ್ವಕ್ಕೆ ರೂಪ ನೀಡಿ ವಿಶ್ವ ವ್ಯಾಪಾರ ನಡೆಸುತ್ತಾನೆ. ಅವನು ಕೇವಲ ಅವ್ಯಕ್ತಿಕನೂ ಅಲ್ಲ. ಕೇವಲ ಸವ್ಯಕ್ತಿಕನೂ ಅಲ್ಲ. ಅವನು ಒಬ್ಬನೇ ಆದರೂ ಅವನಲ್ಲಿ ಈ ಎರಡೂ ಆಯಾಮಗಳು ಇವೆ, ಅವನು ಅವ್ಯಕ್ತಿಕ ಸವ್ಯಕ್ತಿಕನು, "ನಿರ್ಗುಣೋಗುಣಿ" ಎಂದು ಉಪನಿಷತ್ತು ಹೇಳುತ್ತವೆ. ವಿಶ್ವದಲ್ಲಿ ಏನೇ ಘಟಿಸಿದರೂ, ಸಂಭವಿಸಿದರೂ ಅದರ ಸಂಪೂರ್ಣ ಯೋಜನೆಯನ್ನು ಈಶ್ವರನು ಸಕ್ರಿಯವಾಗಿ ಮಾಡಿರುತ್ತಾನೆ. ಗೀತೆಯಲ್ಲಿ ಶ್ರೀಕೃಷ್ಣನು "ಮಯಾ ನಿಯತಾಃ ಪೂರ್ವಮೇವ" (ಗೀ. 11/13) ಎಂದು ಹೇಳುವುದು ಕೌರವರು ಇನ್ನೂ ಬದುಕಿರುವಾಗಲೇ! ಇದರಿಂದ ಸ್ಪಷ್ಟವಾಗುವುದೇನೆಂದರೆ, ಪ್ರಕೃತಿಯ ಸರ್ವ ವ್ಯವಹಾರವು ಅವನ ಇಚ್ಛೆಯ ಮೇರೆಗೆ, ಸಂಕಲ್ಪದ ಮೇರೆಗೆ ನಡೆಯುವುದು. ಎಲ್ಲವೂ ಅವನ ಸಂಕಲ್ಪದ ಪರಿಣಾಮವು. ತಥಾಪಿ ಎಲ್ಲ ವ್ಯವಹಾರಗಳ ಹಿಂದೆ ಈಶ್ವರನ ನಿರ್ವೈಯಕ್ತಿಕ ಇಚ್ಛೆ ಇರುವುದಾದರೂ ಪ್ರಕೃತಿಯ ಯಾವ ವ್ಯವಹಾರಗಳಿಂದಲೂ ಅವನು ಬದ್ಧನಾಗಿರುವುದಿಲ್ಲ, ಅವನು ಮುಕ್ತನಾಗಿರುತ್ತಾನೆ, ಸ್ವತಂತ್ರನಾಗಿರುತ್ತಾನೆ (ಕರ್ತಾರಂ ಅಕರ್ತಾರಂ) 4/13. ವೈಯಕ್ತಿಕ ಆತ್ಮವೆಂದು ವ್ಯವಹಾರ ಮಾಡುತ್ತಿರುವಾಗ ಮನುಷ್ಯನು ಅಹಂಭಾವದಿಂದ ಗೊಂದಲದಲ್ಲಿ ಬೀಳುತ್ತಾನೆ. ಪ್ರಕೃತಿಯು ಮಾಡುತ್ತಿರುವ ಕಾರ್ಯಗಳ ಜೊತೆ ತನ್ನ ಅಜ್ಞಾನದಿಂದಾಗಿ ಗುರುತಿಸಿಕೊಂಡು, ತಾನೇ ಮಾಡುತ್ತಿರುವುದಾಗಿ ಭಾವಿಸುತ್ತಾನೆ. ತನ್ನ ಆತ್ಮದಿಂದ ಪ್ರಕಟವಾದ ಶಕ್ತಿಯ, ತನ್ನಿಂದಲೇ ಉತ್ಪನ್ನವಾದ ಶಕ್ತಿಗಳ ಕಾರ್ಯಗಳು ಎಂಬುದನ್ನು ಮರೆತು ತಾನೇ ಮಾಡುತ್ತಿರುವುದಾಗಿ, ತಾನೇ ಕರ್ತೃ ಎಂದು ಭಾವಿಸುತ್ತಾನೆ. ಪ್ರಕೃತಿಯ ಕಾರ್ಯಗಳನ್ನು ತನ್ನ ಮೇಲೆ ಆರೋಪಿಸಿಕೊಳ್ಳುತ್ತಾನೆ. ವಿಶ್ವ ವ್ಯಾಪಾರದ ಕೆಲಸಗಳನ್ನು ಬೇರೆ ಬೇರೆ ಆತ್ಮಗಳು (ಜೀವಗಳು) ಮಾಡುತ್ತವೆ ಎಂದು ಅವನು ಕಲ್ಪಿಸುತ್ತಾನೆ. ಪ್ರಕೃತಿಯೇ ಎಲ್ಲ ಕಾರ್ಯಗಳನ್ನು ಮಾಡುವುದು ಎಂಬ ಸಂಗತಿಯನ್ನೇ ಆತ ಮರೆತುಬಿಡುತ್ತಾನೆ, ಅವನಿಗದು ಗೊತ್ತಾಗುವುದಿಲ್ಲ. ವಾಸ್ತವಾಗಿ ಪ್ರಕೃತಿಯ ಕಾರ್ಯಗಳನ್ನು ತಾನು ವಿಕೃತಗೊಳಿಸುತ್ತಿರುವುದು ಅವನಿಗೆ ಅರಿವಾಗುವುದಿಲ್ಲ. ಇದು ಅವನ ಅಜ್ಞಾನದ ಹಾಗೂ ಆಸಕ್ತಿಯ ಫಲ. ಅವನು ಪ್ರಕೃತಿಯ ಗುಣಗಳಿಗೆ ಗುಲಾಮನಾಗಿದ್ದಾನೆ, ತಮಸ್ಸಿನಲ್ಲಿ ಮುಳುಗಿ ನಿಷ್ಕ್ರಿಯನಾಗಿ ಹೋಗಿದ್ದಾನೆ, ರಜೋ ಗುಣದ ವಾಯುವಿನಿಂದ ಅಹತನಾಗಿದ್ದಾನೆ, ಸತ್ವ ಗುಣದ ಅರೆ ಬೆಳಕಿನಿಂದಾಗಿ ಸೀಮಿತನಾಗಿದಾನೆ. ಪ್ರಕೃತಿಯ ಮನಸ್ಸಿನಿಂದ ತನ್ನನ್ನು

ಬಿಡಿಸಿಕೊಂಡು ಸ್ವತಂತ್ರನಾಗಲು ಅವನಿಗೆ ಸಾಧ್ಯವಾಗುವುದಿಲ್ಲ. ಅವನು ತ್ರಿಗುಣಗಳ ಬಂಧನದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ಅಂತಯೇ ಅವನ್ನು ನೋವು ಬಾಧಿಸುತ್ತದೆ. ಸುಖ, ದುಃಖ, ಶೋಕ, ನೋವು, ನಲಿವು, ಇಚ್ಛೆ, ಉದ್ವೇಗ, ಮೋಹ, ನಿರಾಶೆ ಎಲ್ಲ ದ್ವಂದ್ವಗಳಿಗೆ ಆಳಾಗಿ ಹೋಗುತ್ತಾನೆ. ಬಂಧನವೇ ಅವನ ಸ್ಥಿತಿಯಾಗುತ್ತದೆ. ಬಂಧನದಿಂದ ಮುಕ್ತನಾಗಬೇಕಾದರೆ ಅವನು ಪ್ರಕೃತಿಯ ಚಲನೆಗಳಿಂದ, ಅದರ ಕಾರ್ಯಗಳಿಂದ ಬಿಡುಗಡೆ ಹೊಂದಿ 'ಅಕ್ಷರ' ಸ್ಥಿತಿಯನ್ನು ತಲುಪಬೇಕಾಗುತ್ತದೆ. ಆಗಲೇ ಅವನು ತ್ರಿಗುಣಾತೀತನಾಗಲು ಸಾಧ್ಯ. ತಾನು ಅಕ್ಷರ ಬ್ರಹ್ಮನೆಂಬ ಸಾಕ್ಷಾತ್ಕಾರ ಅವನಿಗೆ ಆಯಿತೆಂದರೆ, ತಾನು ಅವಿಕಾರಿ, ತಾನು ಉಪಾಧಿರಹಿತ ನಿರ್ವ್ಯೆಯಕ್ತಿಕ ಪುರುಷ, ಶಾಂತವನಾಗಿ ಎಲ್ಲವನ್ನೂ ಅಚಲ ಬುದ್ಧಿಯಿಂದ ನಿಂತು ನೋಡುವ ಸಾಕ್ಷಿ, ಪ್ರಕೃತಿಯ ಕಾರ್ಯಗಳಿಗೆ ತಾನು ಆಧಾರವಾಗಿದ್ದರೂ ಅವುಗಳಿಗೆ ಬದ್ಧನಾಗದೇ, ನಿರಾಸಕ್ತನಾಗಿ, ಅಸ್ಪರ್ಶ್ಯನಾಗಿ, ನಿಶ್ಚಲನಾಗಿ, ಶುದ್ಧನಾಗಿರುವ ಆತ್ಮವೆಂಬ ಬೋಧ ಅವನಿಗಾಗುತ್ತದೆ. ತಾನು ಎಲ್ಲ ಜೀವಿಗಳ ಜೊತೆ ಏಕಾತ್ಮನಾಗಿರುವವನು, ಪ್ರಕೃತಿಯ ಗುಣಗಳಿಂದ ಮತ್ತು ಅವುಗಳ ಕಾರ್ಯಗಳಿಂದ ಭಿನ್ನವಾದವನೆಂಬ ಸತ್ಯವನ್ನು ಅರಿಯುತ್ತಾನೆ. ಹೀಗೆ ನಿರ್ವ್ಯೆಯಕ್ತಿಕನಾದ ಆತ್ಮ ಪುರುಷನು ತನ್ನ ಉಪಸ್ಥಿತಿಯಲ್ಲಿ ಪ್ರಕೃತಿಯ ಎಲ್ಲ ಕಾರ್ಯಗಳಿಗೂ ಆಸ್ಪದ ನೀಡುತ್ತಾನೆ, ಅವುಗಳಿಗೆ ಆಧಾರವಾಗಿರುತ್ತಾನೆ. ತನ್ನ ಸರ್ವವ್ಯಾಪಿತ್ವ ಗುಣದಿಂದ ಎಲ್ಲ ಕಾರ್ಯಗಳಿಗೂ ಅವನೇ ಆಶ್ರಯನಾಗಿರುತ್ತಾನೆ. ಅವನು ಅಕ್ಷರ ಬ್ರಹ್ಮನಂತೆ ಪ್ರಭುವೂ ವಿಭುವೂ ಆಗುತ್ತಾನೆ. ಅವನು ಸ್ವತಃ ಯಾವ ಕರ್ಮವನ್ನೂ ಮಾಡುವುದಿಲ್ಲ, ಕರ್ತೃತ್ವವನ್ನೂ ತನ್ನ ಮೇಲೆ ಎಳೆದುಕೊಳ್ಳುವುದಿಲ್ಲ. ಆರೋಪಿಸಿಕೊಳ್ಳುವುದಿಲ್ಲ. ಕರ್ಮ ಮತ್ತು ಕರ್ಮ ಫಲಗಳ ಸಂಯೋಗವನ್ನೇ ಅವನು ಮೀರಿ ನಿಂತಿರುತ್ತಾನೆ – ನಕರ್ತವ್ಯಂ ನಕರ್ಮಾಣಿ ಸೃಜತಿ ಕರ್ಮಫಲಸಂಯೋಗಮ್ (ಗೀ. 8/14) ಕ್ಷರ ಪುರುಷನ ಪ್ರಾಂತದಲ್ಲಿ ಪ್ರಕೃತಿಯ ಕರ್ಮಗಳು ಸಾಕಾಗಿ ನಡೆದಿರುತ್ತಾನೆ. ಅವುಗಳಿಗೆ ಇವನು ಸಾಕ್ಷಿಯಾಗಿ, ಅನುಮಂತಾ ಆಗಿ ಮಾತ್ರ ಇರುತ್ತಾನೆ – ಸ್ವಭಾವಸ್ತು ಪ್ರವರ್ತತೇ (ಗೀ. 5/14) ಜೀವಿಗಳ ಪಾಪ ಪುಣ್ಯಗಳ ಸಂಬಂಧ ಅವನಿಗಿರುವುದಿಲ್ಲ – ನಾದತ್ತೇ ಕಸ್ಯಚಿಕ್ ಪಾಪಂ ನ ಚೈವ ಸುಕೃತಮ್ (ಗೀ. 5/15) ತನ್ನ ಆಧ್ಯಾತ್ಮಿಕ ಪಾವಿತ್ರ್ಯವನ್ನು ಅವನು ಸುರಕ್ಷಿತವಾಗಿ ಕಾಪಾಡಿಕೊಳ್ಳುತ್ತಾನೆ, ಅಜ್ಞಾನದಲ್ಲಿ ಬಿದ್ದು, ಮಾನವನ ಸಹಜ ಅಹಂಭಾವವಾದ 'ನಾನು' ಎಂಬುದನ್ನು ಎಲ್ಲೆಡೆ ಆರೋಪಿಸಿ ಪಾಪ–ಪುಣ್ಯಗಳನ್ನು

ತನ್ನ ಪದರದಲ್ಲಿ ಹಾಕಿಕೊಳ್ಳುವುದಿಲ್ಲ. ತಾನು ಕರ್ತೃವೆಂಬ ಭಾವವನ್ನೇ ಅವನು ತೊಡೆದು ಹಾಕಿಬಿಡುತ್ತಾನೆ. ವಾಸ್ತವಾಗಿ ತಾನು ನಿರ್ಲಿಪ್ತ, ಪ್ರಕೃತಿಯ ಕಾರ್ಯಗಳ ಉಪಕರಣ ಕೂಡ ಅಲ್ಲ ಎಂಬುದನ್ನಾತ ತಿಳಿದುಕೊಳ್ಳುತ್ತಾನೆ. ಹೀಗಾಗಿ ಪಾಪ ಪುಣ್ಯಗಳ ಸಂಬಂಧವನ್ನೇ ಅವನು ಕಡಿದುಕೊಂಡು ಬಿಡುತ್ತಾನೆ. ಅಜ್ಞಾನೇನಾವೃತಂ ಜ್ಞಾನಂ ತೇನ ಮಹ್ಯಂತಿ ಜಂತಮಃ (ಗೀ. 5/15) ಅಜ್ಞಾನದ ಜೊತೆಗಿನ ತನ್ನ ಸಂಬಂಧವನ್ನು ಕಡಿದುಕೊಂಡ ಜೀವಾತ್ಮನು ನಿರ್ವೈಯಕ್ತಿಕ, ನಿಶ್ಚಲ ಪರಮಾತ್ಮನ ಜೊತೆ ಏಕರೂಪನಾದರೆ ಅವನು ಎಲ್ಲ ಕರ್ಮಗಳಿಂದ, ಕರ್ಮಫಲ ಬಂಧನಗಳಿಂದ ದೂರನಾಗಿಬಿಡುತ್ತಾನೆ. ಪ್ರಕೃತಿಯ ಗುಣಗಳು ಅವನನ್ನಾಗ ಮುಟ್ಟುವುದಿಲ್ಲ ಕೂಡ. ಅವನಿಗೆ ಆಗ ಒಳ್ಳೆಯದು, ಕೆಟ್ಟದ್ದು, ಸುಖ–ದುಃಖ, ಬೇಕು–ಬೇಡ, ಇವಾವೂ ಇರುವುದಿಲ್ಲ. ಒಂದು ಸಂಗತಿಯನ್ನು ಮಾತ್ರ ಲಕ್ಷ್ಯದಲ್ಲಿರಿಸಬೇಕು, ಅವನಿಗೆ ಮನಸ್ಸು, ಶರೀರ, ಪ್ರಾಣ ಇವೆಲ್ಲವೂ ಇರುತ್ತವೆ, ಪ್ರಕೃತಿ ಕೂಡ ಮೊದಲಿನಂತೆಯೇ ಕಾರ್ಯ ಮಾಡುತ್ತಿರುತ್ತದೆ. ಆದರೆ ಅವನ ಅಂತಃಸತ್ತೆಯು ಇವುಗಳ ಜೊತೆ ಗುರುತಿಸಿಕೊಳ್ಳುವುದಿಲ್ಲ. ಪ್ರಕೃತಿಯ ಗುಣಗಳೇನೋ ತಮ್ಮಷ್ಟಕ್ಕೆ ತಾವು ಕಾರ್ಯ ಮಾಡುತ್ತಿರುತ್ತವೆ, ಅವುಗಳ ಕಾರ್ಯದಲ್ಲಿ ಯಾವ ವ್ಯತ್ಯಯವೂ ಆಗುವುದಿಲ್ಲ, ಅವನಿಗೆ ಸುಖ–ದುಃಖ, ನೋವು–ನಲಿವುಗಳ ಅನುಭವದ ಪ್ರಶ್ನೆಯೇ ಇರುವುದಿಲ್ಲ. ಅವನು ಶಾಂತ, ಸಮಾಧಾನಿ ಹಾಗೂ ತೃಪ್ತನಾಗಿರುತ್ತಾನೆ, ನಿಶ್ಚಲನಾದ ಸಾಕ್ಷಿಯಾಗಿ ಪ್ರಕೃತಿಯ (ತನ್ನ ಶಾರೀರಿಕ ಪ್ರಕೃತಿಯ) ಕೆಲಸಗಳನ್ನು ಸಹಿತ ಸಾಕ್ಷಿ ಭಾವದಿಂಧ ನೋಡುತ್ತ ನಿಲ್ಲುತ್ತಾನೆ. ಹಾಗಾದರೆ ಇದೇ ಕೊನೆಯ ಅವಸ್ಥೆಯೇ? ಇದಕ್ಕಿಂತ ಉನ್ನತ ಸ್ಥಾಯಿ ಸಾಧ್ಯವಿಲ್ಲವೇ? ಇದಕ್ಕಿಂತ ಉತ್ತಮ ರಹಸ್ಯ ಸ್ಥಿತಿ ಅಸಾಧ್ಯವೇ? ಇಲ್ಲ. ಇದೇ ಕೊನೆಯ ಆತ್ಯಂತಿಕ ಸ್ಥಿತಿಯಾಗಿರಲು ಸಾಧ್ಯವಿಲ್ಲ. ಏಕೆಂದರೆ ಇದು ಕೂಡ ವಾಸ್ತವಿಕವಾಗಿ ವಿಭಕ್ತ, ಸಮ್ಮಿಶ್ರ ಸ್ಥಿತಿಯೇ; ಇಲ್ಲಿ ಅತ್ಯಂತ ಪರಿಪೂರ್ಣ ಸಾಮರಸ್ಯ ಇದೆ ಎಂದು ಹೇಳಲಾಗದು. ಇಲ್ಲಿ ದ್ವಿಧಾ ವೃತ್ತಿ ಇದೆ, ಪರಿಪೂರ್ಣ ಶುದ್ಧ ಇಲ್ಲ, ಪ್ರಕೃತಿಯ ಸ್ಥಾಯಿಯಲ್ಲಿ ಸಂಪೂರ್ಣ ಸ್ವಾಯತ್ತ ಸ್ವಾತಂತ್ರ್ಯ ಇದ್ದೇ ಇದೆ. ಇದೂ ಒಂದು ಉತ್ತಮವಾದ ಸ್ಥಾಯಿ ಅಷ್ಟೇ, ಆದರೆ ಇದೇ ಆತ್ಯಂತಿಕವಲ್ಲ. ಹಾಗಾದರೆ ಇದರಾಚೆಗೆ ಏನಿದೆ? ಒಂದು ಉತ್ತರ ಹೀಗಿದೆ; ಸನ್ಯಾಸವು ಇದರಾಚೆಗಿನ ಅತ್ಯಂತ ಪರಾ ಸ್ಥಿತಿ; ಸನ್ಯಾಸಿಯು ಪ್ರಕೃತಿಯನ್ನೇ ನಿರಾಕರಿಸುತ್ತಾನೆ, ಅಂದಾಗ ಮಾತ್ರ ಅವ್ಯಾಮಿಶ್ರ, ಅವಿಭಕ್ತ ಸ್ವಾತಂತ್ರ್ಯ ಸಿಕ್ಕುವುದು ಎಂಬುದು ಈ ಸಿದ್ಧಾಂತದ ಮತ.

ಗೀತೆಯು ಈ ಸಿದ್ಧಾಂತವನ್ನೇನು ತಳ್ಳಿಹಾಕುವುದಿಲ್ಲ, ಒಪ್ಪಿಕೊಳ್ಳುತ್ತದೆ, ಆದರೆ ಗೀತೆ ಇದೊಂದನ್ನೇ ಪುರಸ್ಕರಿಸುವುದಿಲ್ಲ. ಗೀತೆಯು ಕರ್ಮಗಳನ್ನು ತ್ಯಜಿಸಲು ಹೇಳುತ್ತದೆ – ಸರ್ವ ಕರ್ಮಾಣಿ ಸನ್ಯಸ್ಯ (ಗೀ. 5/10–13) ಆದರೆ ಬಾಹ್ಯದಲ್ಲಲ್ಲ. ಅದು ಹೇಳುವುದು ಬ್ರಹ್ಮನಿಗಾಗಿ ಆಂತರಿಕ ಕರ್ಮಗಳನ್ನು ತ್ಯಜಿಸುವುದು ಅವಶ್ಯಕ. ಕ್ಷರನ ಸ್ಥಾಯಿಯಲ್ಲಿರುವಾಗ ಬ್ರಹ್ಮನು ಪ್ರಕೃತಿಯ ಎಲ್ಲ ಕರ್ಮಗಳನ್ನು ಒಪ್ಪಿಕೊಳ್ಳುತ್ತಾನೆ; ಅಕ್ಷರ ಪುರುಷನ ಸ್ಥಾಯಿಯಲ್ಲಿ ಪ್ರಕೃತಿಯ ಎಲ್ಲ ಕಾರ್ಯಗಳಿಗೆ ಆಧಾರವಾಗಿದ್ದರೂ, ಅವುಗಳಿಂದ ಬೇರೆಯಾಗಿ ನಿಂತು ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುತ್ತಾನೆ. ವೈಯಕ್ತಿಕ ಜೀವಾತ್ಮನು ಅಕ್ಷರ ಸ್ಥಾಯಿಯಲ್ಲಿ ಬ್ರಹ್ಮನ ಕೊತೆ ಒಂದಾದಾಗ ಪ್ರಕೃತಿಯ ಕಾರ್ಯಗಳಿಗೆ ಆಧಾರವಾಗಿರುತ್ತಾನೆ, ಅವುಗಳಿಗೆ ಬೆಂಬಲವಾಗಿರುತ್ತಾನೆ, ತಾನು ಮಾತ್ರ ಅಬಾಧಿತನಾಗಿ ಮುಕ್ತನಾಗಿರುತ್ತಾನೆ. ಕ್ಷರ ಮತ್ತು ಅಕ್ಷರ ಎರಡೂ ಸ್ಥಾಯಿಗಳು ಪುರುಷೋತ್ತಮನ ಮುಖಗಳೇ ಎಂದು ತಿಳಿದಾಗ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯ ಮಾಡಲು ಸಾಧ್ಯವಾಗುವುದು – ಪುರುಷೋತ್ತಮನು ಸಕಲ ಚರಾಚರ ಜೀವ ರಾಶಿಗಳಲ್ಲಿ, ಸಮಸ್ತ ಅಸ್ತಿತ್ವದಲ್ಲಿ ಈಶ್ವರನ ರೂಪದಲ್ಲಿ ರಹಸ್ಯವಾಗಿ ಅಂತರ್ಯಾಮಿಯಾಗಿರುತ್ತ. ಸಮಸ್ತ ಪ್ರಕೃತಿಯನ್ನು ತನ್ನ ನಿಯಂತ್ರಣದಲ್ಲಿರಿಸಿಕೊಂಡಿರುತ್ತಾನೆ. ಎಲ್ಲವೂ ಅವನ ಸಂಕಲ್ಪಕ್ಕನುಗುಣವಾಗಿಯೇ ನಡೆಯುವುದು. ಅವನಿಗೆ ಯಾವ ಅಹಂಭಾವದ ವಿಕೃತಿ, ವಿಕಾರಗಳ ಸ್ಪರ್ಶವಿಲ್ಲ, ಪ್ರಕೃತಿಯು ಈಶ್ವರನ ಸಂಕಲ್ಪವನ್ನೇ ತನ್ನ ಕಾರ್ಯಗಳ ಮೂಲಕ ಪ್ರಕಟಪಡಿಸುವುದು, ವೈಯಕ್ತಿಕ ಜೀವವು ಅಥವಾ ಜೀವಾತ್ಮನು ದಿವ್ಯತ್ವವನ್ನು ಪಡೆದು, ಪ್ರಾಕೃತಿಕ ಅಸ್ತಿತ್ವದ ಕೆಲಸಗಳನ್ನು ಈಶ್ವರನ ಸಂಕಲ್ಪದ ಮೂಲಕವೇ ಸಾಧಿಸುವುನು – ನಿಮಿತ್ತ ಮಾತ್ರಮ್. ಕರ್ಮ ಮಾಡುತ್ತಿರುವಾಗಲೂ ಅವನು ತ್ರಿಗುಣಾತೀತನಾಗಿರುತ್ತಾನೆ. ನಿಸ್ತ್ರೈಗುಣ್ಯನಾಗಿರುತ್ತಾನೆ. (ಗೀ. 2/45) ಗೀತೆಯ "ನಿಸ್ತ್ರೈಗುಣ್ಯೋ ಭನಾರ್ಜುನ" ಎಂಬ ಆದೇಶದ ಮೇರೆಗೆ ಯಾವ ತಪ್ಪೂ ಇಲ್ಲದಂತೆ ಅವನು ನಡೆದುಕೊಳ್ಳುತ್ತಾನೆ. ಬ್ರಹ್ಮನು ಗುಣಗಳಿಂದ ಒಡಗೂಡಿದ್ದರೂ ಸಹ ನಿರ್ಗುಣನೇ ಆಗಿರುವಂತೆ "ನಿರ್ಗುಣಂ ಭೋಕ್ತೃಚ" (ಗೀ. 13/15) ಅವನು ಕರ್ತೃತ್ವ, ಕರ್ಮ, ಕರ್ಮ ಫಲಗಳಿಂದ ಮುಕ್ತನಾಗಿರುತ್ತಾನೆ. ಅವನು ಅನಾಸಕ್ತನಾಗಿದ್ದು, ಗುಣ ಕರ್ಮಗಳಿಗೆ ಆಶ್ರಯನಾಗಿರುತ್ತಾನೆ, ಆಧಾರವಾಗಿರುತ್ತಾನೆ ಅಸಕ್ತಂ ಸರ್ವಭೃತ್ (ಗೀ. 13/15) ಒಂದು ಸಂಗತಿಯನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕು, ಅವನಲ್ಲಿ ಕರ್ಮ–ಕಾರ್ಯಗಳ

ಸ್ವರೂಪವೇ ಬದಲಾಗಿರುತ್ತದೆ. ಅವನು ಸಂಪೂರ್ಣವಾಗಿ ಪುರುಷೋತ್ತಮನ ಜೊತೆ ಏಕೀಭವಿಸಿಗುತ್ತಾನೆ. ಅವನು ದಿವ್ಯ ಈಶ್ವರೀ ಅಸ್ತಿತ್ವವನ್ನು ಕೂಡ ತನ್ನೊಳಗೆ ಸಮಾಹಿತಿಕೊಂಡಿರುತ್ತಾನೆ ಹಾಗೂ ಸಗುಣ ಅಸ್ತಿತ್ವದಲ್ಲಿ (Becoming) ಶ್ರೇಷ್ಠ ಈಶ್ವರೀ ಸ್ವಭಾವನ್ನು ಧಾರಣ ಮಾಡಿರುತ್ತಾನೆ ಮದ್–ಭಾವ (ಗೀ. 4/10) ಅರ್ಥಾತ್ ಅವನ ಮನಸ್ಸು ಮತ್ತು ಪ್ರಾಕೃತಿಕ ಅರಿವು ಸಂಪೂರ್ಣವಾಗಿ ಈಶ್ವರೀ ಭೂತವಾಗಿರುತ್ತದೆ. ಅದೇ ಆಗಿ ಬದಲಾಗಿರುತ್ತದೆ. ಮನ್ಮನಾ, ಮಚ್ಚಿತ್ತಃ (ಗೀ. 9/34 ಮತ್ತು 18/58) ಈ ಪರಿವರ್ತನೆಯು ಪ್ರಕೃತಿಯ ಅಂತಿಮ ವಿಕಾಸವಾಗಿರುವುದು. ದಿವ್ಯ ಜನ್ಮದ ಪೂರ್ಣತೆ ಅಥವಾ ವಿಕಾಸವಾಗಿರುವುದು. ದಿವ್ಯ ಜನ್ಮದ ಪೂರ್ಣತೆ ಅಥವಾ ರೂಪಾಂತರಣವು ವ್ಯಕ್ತವಾಗುವುದು. ಇದನ್ನು ಗೀತೆಯು ಉತ್ತಮ ರಹಸ್ಯವೆಂದು ಹೇಳುತ್ತದೆ ರಹಸ್ಯಮುತ್ತಮಮ್ (4/3) ಗೀತೆಯು ಪ್ರತೀಪಾದಿಸುವ ಈ ಉತ್ತಮ ಅಥವಾ ಶ್ರೇಷ್ಠ ರಹಸ್ಯವು ಸಿದ್ಧಿಸಿತೆಂದರೆ ಜೀವಾತ್ಮನು (ಪ್ರತ್ಯಗಾತ್ಮನು) ತನ್ನ ಪ್ರಕೃತಿಯ ಪ್ರಭುವಾಗುತ್ತಾನೆ. ಅವನ ಜ್ಞಾನವು ದಿವ್ಯ ಈಶ್ವರೀ ಜ್ಞಾನವಾಗುತ್ತದೆ, ಅವನ ಸಂಕಲ್ಪವು ದಿವ್ಯ ಈಶ್ವರೀ ಸಂಕಲ್ಪವಾಗುತ್ತದೆ, ಅವನ ಎಲ್ಲ ಕೃತಿಗಳು ದೈವೀ ಕಾರ್ಯಗಳಾಗಿ ಪರಿವರ್ತನೆ ಹೊಂದಲು ಆಗ ಸುಲಭವಾಗಿ ಸಾಧ್ಯವಾಗುತ್ತದೆ.

(ಸಶೇಷ)

# ಶ್ರೀಅರವಿಂದರು ಮತ್ತು ಭಾಷೆ

**– ಪುಟ್ಟು ಕುಲಕರ್ಣಿ**

ಭಾಷೆಗಳಲ್ಲಾಗುತ್ತಿರುವ ವಿಚಲನೆಗಳು ಭಾವನೆಗಳನ್ನು ಅಸ್ತವ್ಯಸ್ತಗೊಳಿಸಿ, ಆ ಮೂಲಕ ಚಿತ್ತವನ್ನೂ ಕಲಕಿ ಅಶಾಂತಗೊಳಿಸಿ, ಬದುಕಿನ ಮೌಲ್ಯವನ್ನೇ ರೂಪಾಂತರಿಸಿಬಿಡುತ್ತದೆ. ಇದರ ಸೂಕ್ಷ್ಮವನ್ನರಿಯಲು ಬೇಕಾದ ಅತ್ಯಂತ ನಿಖರವಾದ ಫಲಿತಾಂಶವನ್ನು ತೋರುವ ಅತ್ಯಾಧುನಿಕ ಸೂಕ್ಷ್ಮ ದರ್ಶಕವೂ ಸಹಿತ ಈ ರೀತಿಯ ವಿಚಲನದ ಛಾಯೆಯನ್ನು ಅಥವಾ ಅಲ್ಲಿ ನೆಲೆ ನಿಂತ ಕಪ್ಪು ವರ್ಣದ ದಟ್ಟ ಛಾಯೆಯನ್ನು ಮಾತ್ರ ತೋರುತ್ತದೆ. ಒಮ್ಮೊಮ್ಮೆ ಅಲ್ಲಿನ ದಟ್ಟ ಕಣ್ಣು ಕುಕ್ಕುವ ಬೆಳಕಿನ ಪ್ರಭೆಯನ್ನೇ ಕಂಡು, ಒಟ್ಟಿನಲ್ಲಿ ತಾತ್ಕಾಲಿಕ ಕುರುಡತನದಲ್ಲಿ ತಡಕಾಡುತ್ತದೆ. ಆದರೆ ಈ ಮಧ್ಯದ ಅವಧಿಯಲ್ಲಿ ಸಾಗಬೇಕಾದ "ಪೀಳಿಗೆ" ಮಾತ್ರ ಈ ರೀತಿಯ ಕುರುಡ ನೀತಿಯಿಂದಲೇ ರೂಪಣೆಗೊಂಡ ಪಥದಲ್ಲಿಯೆ ಸಾಗಬೇಕಾದ ಅನಿವಾರ್ಯತೆ ಬರುತ್ತದೆ.

ಭಾಷೆಯ ಬಗೆಗೆ ಶ್ರೀ ಅರವಿಂದರಿಗೆ ಇರುವ ಜಿಜ್ಞಾಸೆ, ಅವರ ಕೃತಿಗಳಲ್ಲಿ ಸ್ಪಷ್ಟವಾಗಿದೆ. ಅದರಲ್ಲೂ ವೇದದ ಕುರಿತು ಸಾಯಣನ ನಂತರದಲ್ಲಿ ವೇದದ ಶಬ್ದದ ನಿಜವಾದ ಅರ್ಥಗಳನ್ನು ತೋರುವಲ್ಲಿ, ಕರ್ಮಕಾಂಡದ ಹೊರತಾಗಿ ಜ್ಞಾನಕಾಂಡದ ವಿವರಗಳ ಕುರಿತಾದ ವೇದದ ನೈಜ ವ್ಯಾಖ್ಯಾನದಲ್ಲಿ, ಅವರ ಭಾಷಾ ವೈಖರಿಯನ್ನು ಗಮನಿಸಬೇಕಾಗಿದೆ. ಅವರು ಪ್ರತಿಪಾದಿಸಿದ ಭಾಷಾ ಪದ್ಧತಿಯ ಸಮಸಮಕ್ಕೆ ಸಾಗುವದು ಪ್ರಚಲಿತದಲ್ಲಿ ಸಾಧ್ಯವಾಗಲಿಕ್ಕಿಲ್ಲ. ಆದರೆ ಆ ದಿಸೆಯಲ್ಲಿ ಹೆಜ್ಜೆಗಳನ್ನಾದರೂ ಹಾಕಬೇಕಾಗಿದೆ. ಶ್ರೀಅರವಿಂದರ ಅಭಿಪ್ರಾಯದಲ್ಲಿ ಭಾಷೆ, ಅದರಲ್ಲೂ ಮಾನವ ಬಳಸುತ್ತಿರುವ ಭಾಷೆ ಈ ಭೂಮಿಯ ಮೇಲೆ ನಿರ್ಮಿತಿಗೊಂಡಿಲ್ಲ. ಇಲ್ಲಿ ಅದು ವೈಖರಿಯ ಹಂತದಲ್ಲಿ ಪ್ರಕಟಗೊಳ್ಳುತ್ತಿದೆ ಅಷ್ಟೆ. ಹಾಗಾದರೆ ಈ ಭಾಷೆ ಜನಿಸುತ್ತಿರುವದು ಎಲ್ಲಿ ಎಂದು ನೋಡಿದರೆ, ಅದರ ಉಗಮ ಆಕಾಶವಾಗಿದೆ.

## ಶಬ್ದದ ರಚನೆ

ಮನುಜ ಲೋಕದ ಭಾಷೆ ಕೇವಲ ಭೂಕೇಂದ್ರಿತವಾದ ವ್ಯವಸ್ಥೆಯಲ್ಲಿ ಅಂದರೆ ಭೂತಲದಲ್ಲಿ ಮಾತ್ರ ನಿರ್ಮಿತವಾಗಿಲ್ಲ. ಬದಲಾಗಿ ಈ ಭಾಷೆ ನಿರ್ಮಾಣ–ಗೊಂಡಿದ್ದು ಸ್ವರ್ಗದಲ್ಲಿ (ಆಕಾಶದಲ್ಲಿ). ಮರ್ತ್ಯ ಜೀವನವು – ಅಂದರೆ "ಭೂಮಿ ಮತ್ತು ಆತ್ಮ"ವು ತನ್ನ ನಿಯತಿಯ ಪ್ರಕಾರವಾದ ಪಯಣಕ್ಕೆ ಬೇಕಾದ ಎಲ್ಲ

ಅಂಶಗಳನ್ನೂ ಪಡೆದುಕೊಳ್ಳುತ್ತಿರುವ ತಾಣವಾದ ಆ ಊರ್ಧ್ವಮೂಲದಿಂದಲೇ ಪಡೆದುಕೊಳ್ಳುತ್ತದೆ. ಏಕೆಂದರೆ ಈ ಊರ್ಧ್ವಮೂಲದಲ್ಲಿಯೇ ಶಬ್ದದ ಬೀಜವೂ ಅಡಗಿರುತ್ತದೆ. ಶಾಶ್ವತ ಸತ್ಯದ (ಋತದ) ಆತ್ಮವಾಗಿರುವ ತ್ರಿಪುಟಿ ಚೈತನ್ಯ, ಆವಿಷ್ಕಾರದ ಶಕ್ತಿ ಮತ್ತು ಸಂಜೀವಿನಿಯಾದ ಆನಂದ (ಚಿರಂತನಾನುಭೂತಿ) ಎಲ್ಲವೂ ಪುರಾತನರ ವಿಚಾರಗಳ ಪ್ರಪಂಚದ ಮಹತ್ತಿನಲ್ಲಿ ಸ್ವಯಂಭೂ ತತ್ತ್ವದಲ್ಲಿಯ ಮತ್ತು ಪರಿಪೂರ್ಣವಾದ ಜ್ಞಾನದಲ್ಲಿ ವ್ಯವಸ್ಥಿತವಾಗಿರುವಂತೆ ಇರುತ್ತದೆ. ಇದು ವೈವಿಧ್ಯತೆಯಿಂದಲೇ ಅಭಿವೃದ್ಧಿಗೊಂಡಿದ್ದಿತು. ಆದರೆ ಕಾಲಕ್ರಮೇಣ – ಅದಕ್ಕಿಂತ ಹೆಚ್ಚಾಗಿ – ಮನುಜ ಲೋಕದ ಪ್ರಜ್ಞಾ ಸ್ತರದ ಮನೋಪಾತಳಿಯನ್ನು ಆಧಾರಭೂಮಿಯನ್ನಾಗಿರಿಸಿಕೊಂಡಿರುವ ಚಿಂತನದ ಕಾರಣದಿಂದಾಗಿ ಅದರ ಹೆಜ್ಜೆಗಳು ಅಷ್ಟೊಂದು ಗಟ್ಟಿಯಾಗಿಲ್ಲ.

ಅವಿರತವಾದ ನವನವೀನ ಏರಿಳಿತಗಳು, ಸ್ಮರಣೆ ಹಾಗೂ ಸಂಕರಣಗೊಂಡ ಸಹಸಂಗತಿಗಳು, ಗೂಢಾರ್ಥದ ವಿಪರೀತಗಳು (ಕುಟಿಲತೆಗಳು), ಸಂವೇದನಾ–ಶೀಲತೆ, ಚಿತ್ತ ವಿಕಾರ, ರಾಗಗಳು, ವಿಘ್ನ ಸಂತೋಷದ ಸಂಗತಿಗಳು ಮತ್ತು ಅಲ್ಪ ತೃಪ್ತಿಗಳಲ್ಲಿ ಕಲ್ಪನೆಯು ಸದಾ ತನ್ನ ಬೇಟೆಯನ್ನು ನಡೆಸುತ್ತಾ ಇರುತ್ತದೆ. ಹೀಗಾಗಿ, ಬದಲಾವಣೆ, ಅಡೆ–ತಡೆ, ಕಾಲಯಾಪನ, ಸಾವು, ಪುನರ್ಜನ್ಮ ಇವೆಲ್ಲವೂ ಈ ಮನುಜ ಲೋಕದ ನಿಯಮಗಳಾಗಿವೆ. ಹೀಗಾಗಿಯೇ ಇವೆಲ್ಲವೂ ಮಾನಸಿಕ ಲೋಕದಲ್ಲಿ ಮತ್ತು (ಭೌತಿಕದ) ಜಡ ಲೋಕದಲ್ಲಿ ಅವತರಣಗೊಂಡು ರೂಪಣೆಗೊಂಡಿರುತ್ತವೆ.

ಒಟ್ಟಿನಲ್ಲಿ ಮನುಜಕುಲಕ್ಕೆ ಒಂದು ನಿಗದಿತವಾದ "ಮೂಲಭಾಷೆ" ಇದ್ದು ಅದು ಕೆಲವೊಂದು ಶಾಶ್ವತ ಸತ್ಯದ "ವಾಕ್" ನಿರ್ದಿಷ್ಟಪಡಿಸಿದ ಸ್ತರದಲ್ಲಿಯೇ ಜನಿಸುತ್ತಿರುವ ನಾದಮಯ ಕಂಪನಗಳಲ್ಲಿ, ಪರಿಪೂರ್ಣವಾದ ಸುಸ್ವರದ ನಿನಾದವಾಗಿ, ಮತ್ತು ಸಮರೂಪಿ(ಅಂಗಸಂಯೋಗ)ವಾಗಿದ್ದು ಆವಿಷ್ಕಾರದಲ್ಲಿ, ವಿಕಸನದಲ್ಲಿ ಹಾಗೂ ಸಂರಚನೆಯಲ್ಲಿ ಇರುತ್ತದೆ. ಇದನ್ನೇ "ದೇವ ಭಾಷೆ" ಎಂದು ಕರೆಯುವದು. (ಇದು ಜಗತ್ತಿನಾದ್ಯಂತ ಇದ್ದ ವಿಷಯ). ಈ ತೆರನಾದ ಭಾಷಾ ವ್ಯವಸ್ಥೆ ಇದ್ದದ್ದು ಕೃತ ಯುಗದ ಅವಧಿಯಲ್ಲಿ. ಇಷ್ಟೊಂದು ಸಮೃದ್ಧಿಯಲ್ಲಿ ರಚನೆಗೊಂಡ ಭಾಷಾ ವ್ಯವಸ್ಥೆಯು ಕಾಲದ ಚಲನೆಯಲ್ಲಿ ಅಸ್ತವ್ಯಸ್ತಗೊಂಡಿತು. ಬದಲಾವಣೆಯ ತೀವ್ರತೆಗೆ ಪಕ್ಕಾಯಿತು. ವಿರೋಧಕ್ಕೆ ಸಿಕ್ಕು ಹಾನಿಯನುಭವಿಸಿತು. ಕಣ್ಮರೆಯೂ ಆಗಬಹುದಾದ ಸಂದರ್ಭದ ಘಟನೆಗಳೂ ಜರುಗಿದವು. ಅಸಂಖ್ಯಾತ

ಉಪ ಭಾಷೆಗಳು, ಪ್ರಕೃತ ಭಾಷಾ ವ್ಯವಸ್ಥೆಗಳು, ಜೊತೆ ಜೊತೆಗೆ ಮಾತೃ ಭಾಷಾ ಪ್ರೇಮ ಎಲ್ಲವೂ ಸೃಷ್ಟಿಗೊಂಡವು.

ಇವೆಲ್ಲ ಕಾರಣಗಳಿಂದಾಗಿ, ಕೃತ ಯುಗದ ಅವಧಿಯಲ್ಲಿದ್ದ "ದೇವ ಭಾಷೆ" (ಕೇವಲ ಭಾರತದಲ್ಲಿ ಮಾತ್ರ ಅಲ್ಲ)ಯು ತನ್ನ ಮೂಲ ಸೌಂದರ್ಯವನ್ನು ಹಾಗೂ ನೈಸರ್ಗಿಕವಾಗಿಯೇ ಧ್ವನ್ಯಾತ್ಮಕವಾಗಿ ರೂಪುಗೊಂಡಿದ್ದ ತನ್ನ ನೈಸರ್ಗಿಕ ತತ್ತ್ವವನ್ನು ಕಳೆದುಕೊಳ್ಳುತ್ತಾ ಹೋಯಿತು. ಹೀಗಾಗಿ ಅಸ್ತವ್ಯಸ್ತತೆ ಹೆಚ್ಚಾಯಿತು. ಬದಲಾವಣೆಯ ತೀವ್ರತೆಯಲ್ಲಿ ತತ್ತರಿಸಿತು. ವಿರೋಧಕ್ಕೂ ಒಳಗಾಗಿ ಕಣ್ಮರೆಯೂ ಆಗುವ ಹಂತಕ್ಕೆ ಬಂದಿತು.

ಇದರಿಂದಾಗಿ ಅಸಂಖ್ಯಾತ ಭಾಷೆಗಳು, ಉಪಭಾಷೆಗಳು, ಪ್ರಾಕೃತ ಭಾಷೆಗಳ ವರ್ಗೀಕರಣ, ಮಾತೃಭಾಷೆಯ ಪ್ರತಿಪಾದನೆ ಎಲ್ಲವೂ ಪ್ರಾರಂಭವಾದವು. ಹೀಗಾಗಿ ಕೃತ ಯುಗದ ಸಮಯದಲ್ಲಿ ಇದ್ದಿರಬಹುದಾದ ಭಾಷೆಯ ಈ ವಿಶಿಷ್ಟ ಗುಣದ ಧ್ವನ್ಯಾತ್ಮಕತೆ ಮತ್ತು ಪ್ರತಿಮಾ ಅರ್ಥದ ವ್ಯಾಪ್ತಿಯನ್ನು ಮತ್ತು ಅರ್ಥವೈಶಾಲ್ಯತೆಯನ್ನು ಪುನಃ ಮೂಲಸ್ಥಿತಿಗೆ ತರಲು ಭಾಷಾ ಶಾಸ್ತ್ರಜ್ಞರು – ಚಿಂತಕರು ಪ್ರಯತ್ನ ನಡೆಸಿದರು. ಭಾಷೆಯ ರಚನೆಯ ಹಂತದಲ್ಲಿರುವ ಪರಿಶುದ್ಧತೆಯ ಹಂತಕ್ಕೆ ಒಯ್ಯುವ ಪ್ರಯತ್ನ ಸಫಲವಾಗಲಿಲ್ಲ. ಹೀಗಾಗಿ, ಭಾಷೆಯನ್ನು ಕಾಲಕಾಲಕ್ಕೆ ಪರಿಷ್ಕರಣೆಗೊಳಿಸುತ್ತ, ಪುನರ್–ಸಂಯೋಜನೆಯನ್ನು ಮಾಡುತ್ತ ಬಂದರು. ಇಂತಹ ಸಂದರ್ಭಗಳಲ್ಲಿ ಬರುತ್ತಿರುವ ಆಧುನಿಕ, ನವನವೀನ ವಿಚಾರ ಧಾರೆಗಳ ಜೊತೆ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಇದರಲ್ಲಿ "ಮೂಲರಚನೆಯ ಅಸ್ತಿ–ಪಂಜರವನ್ನಾದರೂ ಸೂಕ್ತವಾಗಿಡಲು ಹೆಣಗಿದರು. ಈ ಅಸ್ಥಿ–ಪಂಜರಕ್ಕೆ ತಾಗಿಕೊಂಡ ಮಾಂಸ–ಮಜ್ಜೆ –ರಕ್ತ–ಸ್ನಾಯು, ಬಲ, ತೇಜಸ್ಸುಗಳಲ್ಲಿ ಮೂಲಸ್ವರೂಪ ಮಾತ್ರ ರೂಪಾಂತರಗೊಳ್ಳುತ್ತ ಬಂದರೂ ಸಹಿತ, ಒಪ್ಪಂದದ ಹಿನ್ನೆಲೆಯಲ್ಲಿ ಎಲ್ಲವನ್ನೂ ಕಡೆಗಣಿಸುತ್ತ ಬರಲಾಯಿತು."

ಈ ರೀತಿಯಲ್ಲಿ ಒಪ್ಪಂದದೊಡನೆ ಪುನರ್–ಸಂಯೋಜಿಸಲ್ಪಟ್ಟ ಭಾಷಾ ವ್ಯವಸ್ಥೆಯಲ್ಲಿ, ಮೂಲಭಾಷೆಗೆ ಇದ್ದ ಪ್ರತಿಮಾತ್ಮಕ ಗುಣದ (ಅಂದರೆ ದೇವ ಭಾಷೆಯ ಗುಣ. ಸೃಷ್ಟಿಯ ರಹಸ್ಯಗಳನ್ನು ಸಂಕೇತದಲ್ಲಿಯೇ ತಿಳಿಸುವ ವೈಶ್ವಿಕ ವ್ಯವಸ್ಥೆ.) ಕೊರತೆ ಇದ್ದದ್ದನ್ನು ಗಮನಿಸಿಯೂ ಇದನ್ನೇ "ಸಂಸ್ಕೃತ"ವೆಂದು ಸೀಮಿತಗೊಳಿಸಿಕೊಂಡು ನಾಮಕರಣ/ವರ್ಗೀಕರಣ ಮಾಡಲಾಯಿತು. ಉಳಿದ ಎಲ್ಲ ಭಾಷೆಗಳನ್ನೂ "ಪ್ರಾಕೃತ"ವೆಂದು ವರ್ಗೀಕರಿಸಲಾಯಿತು. ಹಾಗಾದರೆ

ಮೂಲಭಾಷೆಯ (ದೇವ ಭಾಷೆಯೆಂದು ವರ್ಗೀಕರಿಸಲ್ಪಟ್ಟ ಭಾಷೆ) ಅಡಿಪಾಯ ಮಾತ್ರ ಆಳದಾಳದಲ್ಲಿಯೇ ಹುದುಗಿದ್ದು, ಇದೇ ಇಡೀ ಮಾನವ ಕುಲದ ಭಾವಾಭಿವ್ಯಕ್ತಿಗೆ ಸಹಕಾರಿಯಾಗಿ ಭಾಷೆಯ ರೂಪಾಂತರಕ್ಕೆ ತಳಹದಿಯಾಯಿತು. ಆದರೆ ಹೊರ ಕವಚದಲ್ಲಿ ಏನೇ ಬದಲಾವಣೆಗಳು ನಡೆದರೂ, ಸ್ಥಿತ್ಯಂತರಕ್ಕೆ ಸಿಲುಕಿದರೂ, ಮೂಲ ಅಸ್ಥಿ–ಪಂಜರ ಮಾತ್ರ ಕಿಂಚಿತ್ತೂ ಧಕ್ಕೆಗೊಳ್ಳದಂತೆ ಉಳಿದುಕೊಂಡಿದೆ. ತದನಂತರದಲ್ಲಿ ಭಾಷಾ ಶಾಸ್ತ್ರದಲ್ಲಿ ಬಂದದ್ದು ಕೇವಲ ಭಾಷಾ ಸೂತ್ರಗಳು, ಶಬ್ದದ ರಚನೆ, ಶಬ್ದದ ಸೃಷ್ಟಿಯಂತಹ ಕ್ರಿಯೆಗಳು ಮಾತ್ರ ನಡೆದವು. ಇದನ್ನು ಆಧುನಿಕ ಭಾಷಾ ಶಾಸ್ತ್ರದ ಹಿನ್ನೆಲೆಯಲ್ಲಿ ಗಮನಿಸಿದರೂ ಸಹಿತ –ಅದರಲ್ಲೂ ಜಗತ್ತಿನ ಎಲ್ಲ ಭಾಷೆಗಳನ್ನೂ ಪರಿಗಣಿಸಿದರೂ ಸಹಿತ, ಯಾವ ಭಾಷೆಗಳು ಈ ಪುರಾತನ, ಧ್ವನ್ಯಾತ್ಮಕ ಅಥವಾ ವಿಶ್ವ ರಹಸ್ಯವನ್ನು ತನ್ನದೇ ಆದ ವಿಧಾನದಲ್ಲಿ ಪ್ರತಿಮಾ ವಿಧಾನದಲ್ಲಿ ತೋರಿಸುತ್ತಿದ್ದ ವ್ಯವಸ್ಥೆಗೆ ಸಮೀಪ ಸಂಬಂಧಿಯಾಗಿದ್ದವೋ, ಅವುಗಳಲ್ಲಿ ಎಲ್ಲೆಡೆಗೂ ಒಂದು ಸಮಾನಾಂಶವಿರುವದು ಕಂಡುಬರುತ್ತದೆ. ಇದೇ ವ್ಯವಸ್ಥೆಯಲ್ಲಿ ಭಾರತದ ಈಗಿನ ಸಂಸ್ಕೃತವನ್ನೂ ಗಮನಿಸಬೇಕಾಗಿದೆ. ಎಲ್ಲ ಭಾಷೆಗಳಲ್ಲಿಯೂ ಮೂಲಧಾತುಗಳಲ್ಲಿ ಇರುವ ಸಮಾನತೆಯ ಮೂಲಕ ಇದನ್ನು ಗಮನಿಸಬೇಕಾಗಿದೆ.

ಈ ಮೂಲಕವಾಗಿ ಧಾತುವೊಂದು ಆಧಾರವಾಗಿ ಶಬ್ದವಾಗುವ (ಧ್ವನಿ/ವಾಕ್) ಆಗುವ ಪರಿಯು ಹೇಗೆ ಮನುಷ್ಯನ ಮಾನಸಿಕ ವಿಕಸನದ ಹಂತದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು, ಬೇರೆ ಬೇರೆ ಉದ್ದೇಶಗಳಿಗೆ ಸಹಾಯಕವಾಗಿ ರೂಪುಗೊಂಡಿದೆ ಎನ್ನುವದರ ಬಗೆಗೂ ಸಾಕಷ್ಟು ದೃಷ್ಟಾಂತಗಳಿವೆ. ಈ ತೆರದಲ್ಲಿ ಪ್ರಬಂಧಿಸಲ್ಪಡುವ ಉದ್ದೇಶವು, ಒಂದು ನಿರ್ದಿಷ್ಟತೆಯನ್ನು ಒದಗಿಸುತ್ತದೆ. ಜೊತೆ ಜೊತೆಗೆ ಭಾಷೆಯ ಪ್ರಾಚೀನ ರೂಪದ ವಿಕಸನಾ ಕ್ರಮಾಂಕವಾಗಿಯೂ ಕಾರ್ಯ ವಹಿಸುತ್ತದೆ. ಈ ತೆರನಾಗಿ ರೂಪುಗೊಂಡಿರುವ ಭಾಷೆಗಳಲ್ಲಿ ಸಂಸ್ಕೃತ, ಗ್ರೀಕ್, ಲ್ಯಾಟಿನ್, ಜರ್ಮನ್, ಸೆಲ್ಟಿಕ್ (Celtic), ಪರ್ಶಿಯನ್, ಅರೇಬಿಕ್, ಮತ್ತು ದ್ರಾವಿಡ ಭಾಷಾ ವ್ಯವಸ್ಥೆಯಲ್ಲಿ ದಕ್ಷಿಣದಲ್ಲಿ ಇದ್ದ ತಮಿಳು, ಭಾಷೆಗಳು ರೂಪುಗೊಳ್ಳಲು ಈ ಮೇಲ್ಕಂಡ ಅಂಶಗಳು ಕೇವಲ "ಅಂಶಿಕವಾಗಿ" ಸಹಾಯಕವಾದವೇ ವಿನಾ, ಭಾಷೆಯ ಮೂಲಸ್ವರೂಪದ "ವಿಶ್ವಭಾಷೆ"ಯ (ಇದನ್ನೇ ಶ್ರೀ ಅರವಿಂದರು ದೇವ ಭಾಷೆ ಎಂದು ಕರೆದಿದ್ದಾರೆ. ಸದ್ಯದ ಸಂಸ್ಕೃತಕ್ಕೂ ಇದಕ್ಕೂ ಹೋಲಿಕೆ ಮಾಡಲು ಬರುವದಿಲ್ಲ. ದೇವ ಭಾಷೆಯೆಂದರೆ ಈಗಿರುವ ಸಂಸ್ಕೃತವಂತೂ ಅಲ್ಲವೇ ಅಲ್ಲ.) ರೂಪದಲ್ಲಿ ವಿಕಸನವನ್ನು ಕಾಣಲಿಲ್ಲ. ಹೀಗಾಗಿಯೇ ಈ ಮೇಲ್ಕಂಡ ಭಾಷೆಗಳಲ್ಲಿ

ನವೀನ ಬದಲಾವಣೆಗಳು, ಅವುಗಳಲ್ಲಾದ ಪರಿವೃತ್ತಿಯಲ್ಲಿ ಕಂಡುಬಂದ ಏರಿಳಿತಗಳು, ಭಾಷಾ ವ್ಯವಸ್ಥೆಗೆ ಹಾಗೂ ಅದರ ಅಧ್ಯಯನಕ್ಕೆ ಅವಕಾಶ ಒದಗಿಸಿಕೊಟ್ಟಿವೆ.

ಉದಾಹರಣೆಗೆ ಮತ್ತು ಸುಲಭ ಸಂವಹನಕ್ಕೆ, ಈ ಎಲ್ಲ ಸ್ಥಿತ್ಯಂತರಗಳನ್ನು ಅಭ್ಯಸಿಸಲು, ಪರೀಕ್ಷಿಸುವ ಸಲುವಾಗಿ ಪ್ರಥಮದಲ್ಲಿ ಗ್ರೀಕ್, ಲ್ಯಾಟಿನ್ ಮತ್ತು ತಮಿಳು ಭಾಷೆಯ ಉದಾಹರಣೆಗಳನ್ನು ಗಮನಿಸಿದರೆ, ಭಾಷಾ ವ್ಯವಸ್ಥೆಯಲ್ಲಿ ಆದ ತೀವ್ರತರಹದ ಪಲ್ಲಟಗಳನ್ನು ಪ್ರಸ್ತುತಪಡಿಸುತ್ತ, ಅವುಗಳನ್ನು ಹೇಗೆ ಪುನರ್‌ಸಂಯೋಜನೆಗೆ ಒಳಪಡಿಸಿ ನೇರ್ಪುಗೊಳಿಸಬಹುದೆಂದು ಸೂಕ್ತ ಯೋಜನೆಯೊಂದನ್ನು (ವಿನ್ಯಾಸವೊಂದನ್ನು) ರೂಪಿಸಲು ಸಾಧ್ಯವಾಗುತ್ತದೆ.

ಈ ಸಂದರ್ಭದಲ್ಲಿ – ಅಂದರೆ ನವೀನ ವಿನ್ಯಾಸವೊಂದನ್ನು ಪ್ರಸ್ತುತಪಡಿಸುವಲ್ಲಿ, ಇದರ ಬಗೆಗೆ ಬರಬಹುದಾದ/ಉದ್ಭವಿಸಬಹುದಾದ ಯಾವುದೇ ವಾದಗಳ ಮತ್ತು ತಕರಾರುಗಳ ಸಂಭಾವ್ಯತೆಯನ್ನು ಪರಿಗಣಿಸದಂತೆ ಸಾಗಬೇಕಿದೆ. ಏಕೆಂದರೆ, ಇಲ್ಲಿ ಪ್ರತಿಪಾದಿಸಲ್ಪಡುತ್ತಿರುವ ವಿನ್ಯಾಸವು ಒಂದು "ಪ್ರಕಲ್ಪಕ" (Constructive) ಆಗಿದ್ದು ಜೊತೆಗೆ ಅದು ಸಲಹಾ ಸ್ವರೂಪದ್ದಾಗಿರುತ್ತದೆ. ಹೀಗಾಗಿ ಇದು ಸ್ವದೋಷ ಸ್ವೀಕಾರದ ಅಭಿಮಾನದ ಹಿನ್ನೆಲೆಯಲ್ಲಿ ಸ್ವೀಕರಿಸಬೇಕಾದ ವ್ಯಯಾಪದೇಶವಾಗಿರುವದಿಲ್ಲ.

ಈ ತೆರನಾದ ವಿನ್ಯಾಸ/ಯೋಜನೆಯ ಸರ್ವಸ್ವವನ್ನೂ ಎಂದು ನಿರೂಪಿಸ–ಲಾಗುತ್ತದೆಯೋ, ಅದಕ್ಕಿಂತ ಹೆಚ್ಚಾಗಿ ಬಹುವಿಸ್ತಾರವಾದ (ಬಹು ವಿಸ್ತೃತ) ಮಾನಕದಲ್ಲಿ ಅಳವಡಿಸಲಾಗುತ್ತದೆಯೋ, ಆಗ, ಇಲ್ಲಿ ನಿರೂಪಿಸಲ್ಪಡುತ್ತಿರುವ – ವೈಯಕ್ತಿಕ ಹಂತದ ಪ್ರತಿಪಾದನೆಯ ಎಲ್ಲ ಸಂಭಾವ್ಯತೆಯ ಹಿನ್ನೆಲೆಯಲ್ಲಿ – ವಿಷಯದ ಬಗೆಗೆ ಚರ್ಚೆಗೆ ಕಾಲಾವಕಾಶ ತಾನೆ ತಾನಾಗಿ ಸೃಷ್ಟಿಗೊಳ್ಳುತ್ತದೆ. ಇನ್ನೂ ಪರಿಪಕ್ವಗೊಳ್ಳದ ವಿಷಯಕ್ಕೆ ಒಂದು ಅಂತಿಮ ಹಂತದ ತತ್ತ್ವವನ್ನು ಆರೋಪಿಸು–ವದಾಗಲೀ ಅಥವಾ ವ್ಯಾಖ್ಯಾನಿಸುವದಾಗಲಿ ಅಪಕ್ವತೆಯ ಪ್ರತಿಪಾದನೆಯಾಗಿರುತ್ತದೆ. ಇಲ್ಲಿ ಪ್ರಥಮವಾಗಿ ದೇವ ಭಾಷೆಯ(ವಿಶ್ವ ಭಾಷೆಯ) ಮೂಲಧಾತುಗಳಿಗೆ ಯಾವ ತತ್ತ್ವವನ್ನು ಆಧರಿಸಿ ರೂಪುಗೊಂಡಿವೆ ಎನ್ನುವದರ ಬಗೆಗೆ ಶೋಧನೆಯಾಗಬೇಕಿದೆ.

ವಾಕ್ (ಸರಳ ಅರ್ಥದಲ್ಲಿ ಧ್ವನಿ/ಶಬ್ದ) ಆವಿಷ್ಕಾರಗೊಳ್ಳುವದು ಆಕಾಶದಿಂದ ಎನ್ನುವ ವಿಷಯವನ್ನು ಜಗತ್ತಿನ ಎಲ್ಲ ಸಮುದಾಯಗಳು ಇತ್ತೀಚಗೆ ಒಪ್ಪಿಕೊಂಡಿವೆ. ಇದು ಆಕಾಶದಲ್ಲಿರುವ "ಮಾತರಿಶ್ವನ್" ಬಲದಿಂದ (ತೇಜದಿಂದ) ರೂಪುಪಡೆ–ಯುತ್ತದೆ. (ಇದರ ವಿವರಗಳು ತಾರಾ ಸೂಕ್ತದಲ್ಲಿ ಇವೆ. ಶ್ರೀ ಕಾವ್ಯಕಂಠ ವಾಸಿಷ್ಠ

ಗಣಪತಿ ಮುನಿಗಳು ಇದರ ಬಗೆಗೆ ಭಾಷ್ಯ ಬರೆದಿದ್ದಾರೆ.) ಈ ತೇಜವು ಸೃಷ್ಟಾರ ಹಂತದಲ್ಲಿ ಇದ್ದು ಯಾವಾಗಲೂ ಕ್ರಿಯಾತ್ಮಕವಾಗಿಯೇ ಇರುತ್ತದೆ. ಅದಕ್ಕಾಗಿಯೇ ಇದು ಯಾವಾಗಲೂ ತರಲ ಸ್ವಭಾವದಲ್ಲಿರುವ (ಪ್ರವಾಹ ಸ್ವರೂಪಿಯಾದ) "ಆಪ್"(ಅರ್ಣವ)ದಲ್ಲಿ ಇರಿಸಲ್ಪಟ್ಟಿದೆ. ಇದು ನಿರ್ದಿಷ್ಟಪಡಿಸಿದ ಗತಿಯೊಂದಿಗೆ ಸಂಚಲನ ಹೊಂದಿರುತ್ತದೆ. ಹೀಗಾಗಿ ಮುಂದಿನ ಎಲ್ಲ ಕ್ರಿಯೆಗಳೂ ಇದರ ಚಲನಾ ಕ್ರಮವನ್ನೇ ಅವಲಂಬಿಸಿಕೊಂಡು/ಆಧರಿಸಿಕೊಂಡು ನಿರ್ಧರಣೆಗೊಳ್ಳುತ್ತವೆ.

ಶಬ್ದವು ಆಕಾಶದಲ್ಲಿ ಪ್ರತ್ಯಕ್ಷವಾಗುತ್ತದೆ. ಇದು ವಾಯುವಿನ ಮೂಲಕ ಚಲನೆಯನ್ನು ಹೊಂದುತ್ತದೆ. ಇಲ್ಲಿ ಅತಿ ಮುಖ್ಯವಾದ "ಸ್ಪರ್ಶ" ಗುಣ ಬರುತ್ತದೆ. ಈ ಸ್ಪರ್ಶ ಗುಣವು ಕಂಪನದ ಮೂಲಕವಾಗಿ ಜನಿಸುತ್ತದೆ. ಈ ರೀತಿಯ ಸ್ಪರ್ಶವು ತೇಜಸ್ಸನ್ನು ಸೃಷ್ಟಿಸುತ್ತದೆ. ಇದು ಪ್ರಮುಖವಾದ ಮೂರನೇ ಗುಣವಾಗಿದೆ. ಈ ಹಂತದಲ್ಲಿ "ವಾಕ್" ಅಥವಾ "ಶಬ್ದ" ಅಥವಾ "ನಾದ"ವು ಅಸ್ತಿತ್ವವನ್ನು ಪಡೆದುಕೊಂಡು, ನಿರ್ದಿಷ್ಟಪಡಿಸಿದ ಆಕಾರದಲ್ಲಿ ಪ್ರಕಟಗೊಳ್ಳುತ್ತದೆ. ಈ ಸಮಾನತೆಯನ್ನು ಆಯಾ ಭಾಷೆಗಳಲ್ಲಿ ಇರುವ ಮೂಲಧಾತುಗಳಲ್ಲಿ, ಶಬ್ದವು ರಚನೆಗೊಳ್ಳುವಲ್ಲಿ ಬಹು ಪ್ರಮುಖ ಪಾತ್ರವಹಿಸುವ ಮೂಲಭೂತ ಅಂಶಗಳಲ್ಲಿ ನಿರ್ಮಿತಗೊಂಡ ಧಾತುವನ್ನು ಆಧರಿಸಿಕೊಂಡೇ ಶಬ್ದವಾಗಿರುತ್ತದೆ. ಮೊದಲನೇಯದಾಗಿ ಕಂಪನದ ಮೂಲಕವಾಗಿ ಸಂಯೋಗಾನ್ವಿತ ಸಂಪರ್ಕ (Contractual Vibration) ಏರ್ಪಟ್ಟರೆ, ಎರಡನೇಯದಾಗಿ, ಒಂದು ವಿಶಿಷ್ಟ ಪ್ರಕಾರದ ಬಲ ಅಥವಾ ತೇಜಸ್ಸು ಇರುತ್ತದೆ. ಮತ್ತು ಮೂರನೇಯದಾಗಿ ನಿರ್ದಿಷ್ಟಗೊಳ್ಳುವ ರೂಪ–ಆಕಾರವಿರುತ್ತದೆ. ಇವೆಲ್ಲವೂ ಸೇರಿ "ಭಾವ"ವನ್ನು ಅಂದರೆ "ಸಾಮಾನ್ಯ ಸಂವೇದನೆ"ಯನ್ನು ನಿರ್ಧರಿಸುತ್ತವೆ. ಮುಖ್ಯವಾಗಿ ಇವೆಲ್ಲವೂ "ಮನಸ್ಸಿ"ನಲ್ಲಿಯೇ ಸೃಷ್ಟಿಗೊಂಡಿರುತ್ತವೆ. ಜೊತೆ ಜೊತೆಗೆ ಈ ಸಂವೇದನೆಯು ವಿಕಸನವಾಗುತ್ತ , ಪ್ರಮುಖವಾಗಿ ವಿವಿದಾರ್ಥಗಳನ್ನು, ಆಯಾ ಕಾಲಕ್ಕೆ ತಕ್ಕಂತೆ – ಅದನ್ನು ಬಳಸುತ್ತಿರುವ ಸಂದರ್ಭದ ಸಲುವಾಗಿಯೇ ಅದು ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ. ಈ ರಚನೆಗಳು ಅರ್ಥ ವೈಶಾಲ್ಯತೆಯನ್ನು ಒದಗಿಸುತ್ತಿವೆ,

ಈ ಎಲ್ಲವನ್ನು ನಾವು ಮಾನವನಲ್ಲಿಯೇ ಕಾಣುತ್ತೇವೆ.

---

ಶ್ರೀ ಅರವಿಂದರ "ಭವಿಷ್ಯ ಕಾವ್ಯ/ದಿವ್ಯ ಜೀವನ/ಸಾವಿತ್ರಿ/ಕಾಳಿದಾಸ ಹಾಗೂ ಶ್ರೀ ಎಂ.ಪಿ. ಪಂಡಿತರ "ವೇದಿಕ್ ಸಿಂಬಾಲಿಜಮ್" ಆಧರಿಸಿದ ಲೇಖನ.

## ಕಾವ್ಯ

**– ಅನು: ಪುಟ್ಟು ಕುಲಕರ್ಣಿ**

### ಪ್ರಕೃತಿಯಾ ಗುಹ್ಯ ಅತಿಚಿತಿಯು ತಾನು ಖಚಿತದಲಿ ಎರಕಕಿಳಿಸಿ

ಪ್ರಕೃತಿಯಾ ಗುಹ್ಯ ಅತಿಚಿತಿಯು ತಾನು ಖಚಿತದಲಿ ಎರಕಕಿಳಿಸಿ
ರೂಪಿತದ ಋತದ ದರ್ಪಣದಿ, ನೀನು ನನ ಸುಪ್ತ ಹೃದಯವಾಸಿ,
ಈ ಗೂಢ ಹೃದಯದಾ ತೋಷ–ಭರತ ಪ್ರತಿಬಿಂಬವಾಗಿ ಇರಿಸಿ
ಪರಮ–ಪರಿಶುದ್ಧ ಮಾಧುರ್ಯ–ರಸವ ನೀನೀಗ ಸವಿಯಲೆಳಸಿ,
ನಕ್ಷತ್ರ ಖಚಿತ ಶೋಭಿತದಿ ಭರಿತ ಆಕಂಠಪೂರ್ಣವಾದ
ನನ್ನ ಪಾವಿತ್ರ್ಯ ಕುಂದ–ಕುಟ್ಮಲದ ದಿವ್ಯತೆಯ ಛಂದದಿಂದ.

**(ಶ್ರೀ ಅರವಿಂದರ 'ಸಾವಿತ್ರಿ';**
**ದಳ 11 ಸಾವಿರದ ಉಷೆಯ ತೋಷ – ಪುಟ 700)**

* * *

### ಆ ಅಚಿತಿ ಈಗ ಅರಿತಿರಲು ತನ್ನ ಚೈತನ್ಯಮೂಲವನ್ನು

ಆ ಅಚಿತಿ ಈಗ ಅರಿತಿರಲು ತನ್ನ ಚೈತನ್ಯಮೂಲವನ್ನು
ತನ್ನದೇ ಗೂಢ ಆ ಹೃದಯವೀಗ ತನ್ನಲ್ಲಿ ಇರುವದನ್ನು,
ಅಂಧಕಾರದಲಿ ಪರಾಮರ್ಶೆಯಲಿ ಸಾಗಿರಲು ಭ್ರಮಿತಗೊಂಡು
ಅಂತಿಮದಿ ಮಾತ್ರ ಸಾನುರಾಗದಲಿ ಸಂತ್ಯಕ್ಕೆ ಬಂಧಗೊಂಡು,

ಜಡದ ತತ್ತ್ವದಾ ನಿರ್ಮಾಯ ಮೌನದಾ ಸರ್ವ ಹೃದಯದಲ್ಲಿ
ಅಲೆಯಲೆಯಲೀಗ ಸಾದುದ್ಭವವು ಆರ್ಣವದ ಪ್ರಾಣದಲ್ಲಿ
ಅನುಪಾಖ್ಯದಾತ್ಮ ಅತಲಾಂತ ಸ್ಪಂದದಿಂದನು ಸ್ಪಷ್ಟಗೊಳಿಸಿ
ಉತ್ಪನನದಲ್ಲಿ ಆವರಣರಹಿತ ವಸನವನು ಪ್ರಣವಗೊಳಿಸಿ

ಈ ಪ್ರಣವದರ್ಥ ಅದರಂತರಾರ್ಥ ಅದು ಅದರ ಆತ್ಮ ಮುದಿತ
ಈ ಪ್ರಣವ ನಾದ ಅದರಂತರಾತ್ಮ ಅದು ಅದರ ಸೃಷ್ಟಿ ಮಿಡಿತ
ತನ್ನ ತಾನರಿವ ತನ್ನದೇ ಶ್ರಾವ್ಯ ಸುಶ್ರಾವ್ಯವಿರದೆ ಇಂದು
ಆದರೀಗಿದುವು ಪೂರ್ಣತೆಯ ಪಡೆವ ಧ್ವನಿಯಾಗಲೆಂದು ನಿಂದು;

ಅಜ್ಞಾತವನ್ನು ಪ್ರಚ್ಛನ್ನಗೊಳಿಸಿ ಆವರಿಸಿ ನಿಂತ ತಮವ
ಹೃದಯ ಭೇದನೆಯ ನಿವೇದನೆಯಲ್ಲಿ ಅನುಮೋದಕೆಂದು ಭಾವ
ವಿಚ್ಛಿದ್ರಗೊಂಡ ಭೂ–ಬದುಕ ನೆಲೆಗೆ ಬರಿ ಶುಷ್ಕ–ಶುಷ್ಕ ಬಯಕೆ
ಐಅವಳೆ ಮರೆತಿರುವ ಅವಳಾತ್ಮ ತತ್ತ್ವ ಅವಳಿಗಿತ್ತಿರುವ ನೆನಕೆ.

ಪರಿಪೂರ್ಣ ಅಂದಕೆಂದದುವು ಕೆಲವು ಕಾಲದಲಿ ಕಂಡ ಕನಸು
ಆದರೀಗಿದೋ ಪರಿಪಕ್ವ– ಛಂದ –ಛಂದಸ್ಸು ಪ್ರಕಟ ನನಸು
ಪರಿಹಾರವೊಂದು ಅವತರಣದಲ್ಲಿ ತಾನಿಲ್ಲಿ ಬಂದು ಇದಕೆ
ಆರ್ಣವದ ಅಲೆಯ–ನಾದದಲ್ಲೆಲ್ಲ ನಿತ್ಯ–ಶಾಶ್ವತದ ಮುದಕೆ

ಪ್ರಜ್ಞಾನವದುವು ಪ್ರಸನ್ನತೆಯಲ್ಲಿ ಪ್ರಸ್ಥಾನಗೊಂಡು ಇಲ್ಲಿ
ಭವದ ಜೀವವನು ದಿವದ ಭವ್ಯತೆಯ ಸಮಸಮಕೆ ತರಲು ಅಲ್ಲಿ;

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 5 ಪುಟ 89)**

* * *

## ಅವರ ಘನಮಹಿಮೆ ವೈಭವದ ಗರಿಮೆ ಪಥವಾಗಿ ನೀಡಿದವರು

ಅವರ ಘನಮಹಿಮೆ ವೈಭವದ ಗರಿಮೆ ಪಥವಾಗಿ ನೀಡಿದವರು
ವರ್ಣನೆಗೆ ಸಿಗದ ಪ್ರಜ್ಞಾನ ಘನವ ಪರಿಪೂರ್ಣಗೊಳಿಸಿದವರು
ಸುಜ್ಞಾನ ಸುಧೆಯ ಮಧು–ಮಧುರ ಸ್ವರದಿ ಸುಸ್ಪಷ್ಟಗೊಳಿಸಿದವರು
ಜನನ–ಮರಣಗಳ ಚಕ್ರ–ಬಂಧವನು ಕತ್ತರಿಸಿ ಏರಿದವರು,

ಅವರ ಅಭಿಮುಖದ ದೇವವಾಣಿಯನು ಉದ್ಘೋಷ ಮಾಡಿಕೊಂಡು
ನಮ್ಮನ್ನೇ ನಾವು ದೇವ–ವಕ್ತಾರ ಹುದ್ದೆಯಲಿ ಗಣಿಸಿಕೊಂಡು
ದುರ್ಲಭದ ಕೊಡುಗೆಯೊಲು ಅವರ ಆತ್ಮ ಪಡೆಯಲೆನೆ ನಡೆಸಿ ಯುದ್ಧ
ಚಿರಂಜೀವಿಗಳ, ಜರಾಯುವವರೆಂದು ಉಗ್ಗಡಿಸೆ ನಾವು ಸಿದ್ಧ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 30)**

* * *

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |
| 37 | ಶ್ರೀ ಅರವಿಂದರ ಸಾವಿತ್ರಿ |
| 38 | ಶ್ರೀ ಅರವಿಂದರು |



ಫೋಟೋ: ಇಮೇಜಿಂಗ್ ಸಾವಿತ್ರಿ

ಆ ಅಚಿತಿ ಈಗ ಅರಿತಿರಲು ತನ್ನ ಚೈತನ್ಯಮೂಲವನ್ನು
ತನ್ನದೇ ಗೂಢ ಆ ಹೃದಯವೀಗ ತನ್ನಲ್ಲಿ ಇರುವದನ್ನು,

**– ಪುಟ್ಟು ಕುಲಕರ್ಣಿ**

**(ಪುಟ 57)**

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ಅವರ ಘನಮಹಿಮೆ ವೈಭವದ ಗರಿಮೆ ಪಥವಾಗಿ ನೀಡಿದವರು
ವರ್ಣನೆಗೆ ಸಿಗದ ಪ್ರಜ್ಞಾನ ಘನವ ಪರಿಪೂರ್ಣಗೊಳಿಸಿದವರು

– **ಪುಟ್ಟು ಕುಲಕರ್ಣಿ**

(ಪುಟ 58)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.